## ಶ್ರೀಸರ್ವಮೂಲ ಸಂದೇಶ

**ಸರ್ವಸ್ಮಾದುತ್ತಮೋ ವಿಷ್ಣುರಿತಿಜ್ಞಾನಮುದಾಹೃತಮ್ ।**
**ಪ್ರತಿಜೀವಂ ಯೇನ ಮುಕ್ತಿಃ ತದ್ ವಿಜ್ಞಾನಂ ವಿದಾಂಮತಮ್ ॥**

ವಿಷ್ಣುವು ಸರ್ವರಿಗಿಂತಲೂ ಶ್ರೇಷ್ಠನಾಗಿದ್ದಾನೆ ಎಂಬುದು 'ಜ್ಞಾನ'ವೆಂದೂ, ಯೋಗ್ಯ ಜೀವರಿಗೆ ಮುಕ್ತಿಯನ್ನು ಪಡೆಯಲು ಪ್ರತ್ಯೇಕವಾಗಿ ಹೇಳಲ್ಪಡುವ ಜ್ಞಾನವು 'ವಿಜ್ಞಾನ'ವೆಂದೂ ಜ್ಞಾನಿಗಳ ಅಭಿಪ್ರಾಯ.

**–ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದರು**

**ಸಂಪುಟ–8 ಸಂಚಿಕೆ–9 ವಿರೋಧಿ ಸಂ.॥ ಶ್ರಾವಣ–ಭಾದ್ರಪದ ಸೆಪ್ಟೆಂಬರ್ 2009**

ಸಂಸ್ಥಾಪಕರು:

**ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು**

**ಶ್ರೀವಿದ್ಯಾಮಾನ್ಯ ಪ್ರಕಾಶನ**

ಶ್ರೀಮದ್ ಹೃಷೀಕೇಶತೀರ್ಥ ಸ್ವಾಮಿಯರ್ ಸ್ಮಾರಕ ಟ್ರಸ್ಟ್ (ರಿ.)

ಶ್ರೀ ಪಲಿಮಾರು ಹೃಷೀಕೇಶಮಠ, ಉಡುಪಿ.

**www.palimarumatha.org**

**www.livepravachana.com**

**E-MAIL**

**sarvamoola@udupishripalimarumatha.org**

# ವಿಷಯಾನುಕ್ರಮಣಿಕೆ


| | | |
|---|---|---|
| **ಉದ್ಧವಗೀತೆ** | ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು | 1 |
| **ಗೀತಾಮೃತ** | ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು | 3 |
| **ವಿದುರನೀತಿ** | ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದರು | 5 |
| **ತೈತ್ತರೀಯೋಪನಿಷತ್** | ವಿ॥ ಬನ್ನಂಜೆ ಗೋವಿಂದಾಚಾರ್ಯ | 7 |
| **ಹರಿಭಕ್ತಿಸಾರ** | ವಿ॥ ಹಯವದನ ಪುರಾಣಿಕ | 9 |
| **ಅವಲೋಕನ** | ವಿ॥ ಸಗ್ರಿ ರಾಘವೇಂದ್ರ ಉಪಾಧ್ಯಾಯ | 11 |
| **ಭಾರತಭಾವದರ್ಪಣ** | ವಿ॥ ರಾಮವಿಟ್ಠಲಾಚಾರ್ಯ | 14 |
| **ಕಠೋಪನಿಷತ್** | ಡಾ॥ ಎನ್. ವೆಂಕಟೇಶ್ ಆಚಾರ್ಯ | 18 |
| **ನಾರಾಯಣವರ್ಮ** | ವಿ॥ ಬೆ.ನಾ. ವಿಜಯೀಂದ್ರಾಚಾರ್ಯ | 20 |
| **ಮಾರ್ಕಂಡೇಯಪುರಾಣ** | ವಿ॥ ಅಡ್ವೆ ಲಕ್ಷ್ಮೀಶಾಚಾರ್ಯ | 22 |
| **ಮುಖಪುಟ ಲೇಖನ** | ಶ್ರೀ ಬಿ. ಶ್ರೀನಿವಾಸಭಟ್ | 24 |
| **ಹರಿಕಥಾಮೃತಸಾರ** | ವಿ॥ ಅಪ್ಪಣಾಚಾರ್ಯ, ಕೌತಾಳಂ | 26 |
| **ಮಧ್ವ ಚರಿತ್ರೆ** | ವಿ॥ ಅನಂತಕೃಷ್ಣಾಚಾರ್ಯ | 29 |
| **ವಿಷ್ಣುಪುರಾಣ** | ಸ್ಫೂರ್ತಿ | 32 |
| **ವಿಶ್ವನ(ದ)ಲ್ಲಿ ವಿಶ್ವರೂಪದ(ನ) ದರ್ಶನ**–ಶ್ರೀ ಡಿ. ಗುರುಪ್ರಸಾದ್ ಭಟ್ | | 34 |
| **ಜ್ಯೌತಿಷ ಚಿಂತನೆ** | ವಿ॥ ಶ್ರೀ ಶ್ರೀಪತಿ ಉಪಾಧ್ಯಾಯ | 37 |
| **ನೆನಪಿನ ಅಂಗಳ** | ವಿ॥ ಶಂಕರನಾರಾಯಣಾಚಾರ್ಯ | 41 |



**ಪ್ರಕಾಶಕರು**

ಶ್ರೀ ಶಿಬರೂರು ವೇದವ್ಯಾಸ ತಂತ್ರಿ, ಉಡುಪಿ

**ಪ್ರಧಾನ ಸಂಪಾದಕರು**

ವಿಸಗ್ರಿ ರಾಘವೇಂದ್ರ ಉಪಾಧ್ಯಾಯ, ಉಡುಪಿ



**ಸಂಪಾದಕ ಮಂಡಳಿ:**

ವಿ॥ ಬಲರಾಮ ಭಟ್ಟ, ಉಡುಪಿ

ವಿ॥ ಮೋಹನಾಚಾರ್ಯ ಬೆಂಗಳೂರು

ವಿ॥ ಗಿರೀಶ ಉಪಾಧ್ಯಾಯ, ಕುತ್ಯಾರು

**ಸಲಹಾ ಮಂಡಳಿ**

ಶ್ರೀ ರಘುಪತಿ ತಂತ್ರಿ, ಬೆಂಗಳೂರು

ಶ್ರೀ ಲಕ್ಷ್ಮೀನಾರಾಯಣ ಶರ್ಮ ಉಡುಪಿ

ಶ್ರೀ ಹರ್ಷ ಬೆಂಗಳೂರು



ಮುಖಪುಟ ವಿನ್ಯಾಸ: ಕೆ. ಎಮ್. ಶೇಷಗಿರಿ ಬೆಂಗಳೂರು    ಅಕ್ಷರ ವಿನ್ಯಾಸ: ಸ್ವಾತಿ ಭಾಗವತ್ ಉಡುಪಿ

| | | | |
|---|---|---|---|
| **ಬಿಡಿ ಪ್ರತಿ** | **: ರೂ. 8.00** | **ವಾರ್ಷಿಕಚಂದಾ :** | ರೂ. 90.00 |
| **ಸದಸ್ಯರು** | : ರೂ. 2,250.00 | **15 ವರ್ಷಕ್ಕೆ** : | ರೂ. 1,250.00 |

**ಪೋಷಕರು :** ರೂ. 3,000.00


**ಅಯಾಯ ಲೇಖನಗಳಿಗೆ ಲೇಖಕರೇ ಜವಾಬ್ದಾರರು**

# ಉದ್ಧವಗೀತೆ

–ಶ್ರೀ ಶ್ರೀ ವಿದ್ಯಾಧೀಶತೀರ್ಥಶ್ರೀಪಾದರು
ಶ್ರೀ ಪಲಿಮಾರು ಮಠ, ಉಡುಪಿ

**ನಾತಿಸ್ನೇಹಃ ಪ್ರಸಂಗೋ ವಾ ಕರ್ತವ್ಯಃ ಕ್ವಾಪಿ ಕೇನಚಿತ್।**
**ಕುರ್ವನ್ ವಿಂದೇತ ಸಂತಾಪಂ ಕಪೋತ ಇವ ದೀನಧೀಃ॥**

ಅವಧೂತರ ಎಂಟನೆಯ ಗುರು ಕಪೋತ. ಕಪೋತ ಎಂದರೆ ಪಾರಿವಾಳ. ಪಾರಿವಾಳದಿಂದ ತಾನು ಅವಧೂತನಾದದ್ದು ಎಂದು ಅವಧೂತರು ತನ್ನ ಅಂತರಂಗ ಸಾಧನದ ಸ್ಫೂರ್ತಿಯ ಸೆಲೆಯನ್ನು ನಮ್ಮ ಜೊತೆಗೆ ಹಂಚಿಕೊಂಡಿದ್ದಾರೆ.

**"ಅತಿ ಸರ್ವತ್ರ ವರ್ಜಯೇತ್"** ಇದು ಹಿರಿಯರ ಅನುಭವದ ನಾಣ್ನುಡಿ. ಯಾವುದೂ ಅತಿಯಾಗಬಾರದಂತೆ. ಎಲ್ಲದಕ್ಕೂ ಒಂದು ಮಿತಿ ಇದೆ. ಮಿತಿ ಮೀರಿದಾಗ ಮೃತಿಯಲ್ಲಿಯೂ ಪರ್ಯಾವಸಾನವಾಗಬಹುದು. ತಿನ್ನಬೇಕು ಎನ್ನುವುದು ಸತ್ಯ. ಮಿತಿ ಮೀರಿದಾಗ ರೋಗದಲ್ಲಿ ಪರ್ಯಾವಸಾನವಾಗುವುದರಲ್ಲಿ ಸಂದೇಹವೇ ಇಲ್ಲ. ನಿದ್ರೆ ಬೇಕು. ಅದೂ ಮಿತಿ ಮೀರಿದಾಗ ಮಹಾರೋಗ. ಅದೇ ರೀತಿ ಬಂಧು ಭಾಂದವರ ಈ ಪ್ರಪಂಚದಲ್ಲಿ ಸ್ನೇಹ ಬೇಕು. ಅತಿ ಯಾದಾಗ, ಮಿತಿ ಮೀರಿದಾಗ ಮತಿ ಹೀನರಾಗಿ, ಮೃತಕ ಪ್ರಾಯರಾಗಿ ಬಿಡುತ್ತೇವೆ. ದಾಸರು ನಮ್ಮನ್ನು ಸುಂದರವಾಗಿ ತಿದ್ದಿದ್ದುಂಟು. "ಈಸಬೇಕು ಇದ್ದು ಜಯಿಸಬೇಕು". ಸಂಸಾರವೇ ಬೇಡ ಎಂದು ಹೇಳಿಲ್ಲ. ಇದು ಸಾಗರ ಎಂಬುದನ್ನು ಮರೆತಿಲ್ಲ. ಈ ಸಂಸಾರದ ಸಾಗರ ಮುಳಗಲಿಕ್ಕಿದ್ದದ್ದಲ್ಲ. ಮುಳುಗಿಸುವುದು ಅದರ ಸ್ವಭಾವವಾದರೂ ಕೂಡ ಮುಳಗದೆ ಇರುವ ಕಲೆ ರೂಢಿಸಿಕೊಳ್ಳಬೇಕಾದದ್ದು. ಮೀನಿನಂಥ ಜಲಜಂತುಗಳಂತೆ ಮಾನವನಿಗೆ ಈಜು ಸಹಜ ಕಲೆ ಆಗದೇ ಹೋದರೂ, ಅಭ್ಯಾಸ ಮಾಡಿದರೆ ಅಸಾಧ್ಯವಾದುದು ಏನೂ ಅಲ್ಲ. ಈ ನೀರಿನಲ್ಲಿ ಈಜುವಂತೆ ಸಂಸಾರದ ನೀರಿನಲ್ಲಿಯೂ ಈಜಲು ಕಲಿಯಲೇ ಬೇಕು. ಅದೊಂದು ಕಲೆ. ಕಲಿಯಬೇಕಾದ ಕಲೆ. ಕಲಿಯದಿದ್ದರೆ ಕೊಲೆ ಸುನಿಶ್ಚಿತ. ಅದಕ್ಕೆ ಅವಧೂತರು ಹೇಳಿದ್ದು **"ಅತಿಸ್ನೇಹಃ ನ ಕರ್ತವ್ಯಃ"** ಯಾರಲ್ಲಿಯೂ ಅತಿ ಸ್ನೇಹ ಮಾಡಬೇಡ ಎಂದು. ಸ್ನೇಹವೇ ಮಾಡಬೇಡ ಎಂದು ಹೇಳಿಲ್ಲ. ಸ್ನೇಹವಿಲ್ಲದ ಬದುಕು ಬರಡು. ಅತಿಸ್ನೇಹ ಬೇಡ. ಅತಿ ಸ್ನೇಹಕ್ಕೆ ಒಂದು ಪಾತ್ರವೇ ಇಲ್ಲ. ದೇವರನ್ನು ಬಿಟ್ಟರೆ ಶಾಶ್ವತವಾದ ಪಾತ್ರವೇ ಇಲ್ಲ. ದೇವರಲ್ಲಿ ಬೇಕಾದರೆ ಮಾಡು ಅತಿ ಸ್ನೇಹ. ಆದರೆ ಉಳಿದ ಅಧಿಷ್ಠಾನಗಳೆಲ್ಲ ನಶ್ವರ. ನಾವು ಮಾಡಿದ ಅತಿಸ್ನೇಹ ಆಶ್ರಯ ನಾಶವಾದಾಗಲೇ ನಾಶವಾಗಿ ಬಿಡುತ್ತದೆ. ಅದರ ಜೊತೆಗೆ ನಮ್ಮ ನಾಶವೂ ಕೂಡ ಅತ್ಯವಶ್ಯವೇ.

**"ಕುರ್ವನ್ ವಿಂದೇತ ಸಂತಾಪಂ"**

ಅತಿ ಸ್ನೇಹ ಎಲ್ಲಿ ಮಾಡುತ್ತೇವೋ, ಆ ಮೂಲವೇ ನಿರ್ಮೂಲವಾದಾಗ ನಮ್ಮ ಸ್ನೇಹವೂ ಬುಡಮೇಲಾಗಿಬಿಡುತ್ತದೆ. ಸ್ನೇಹ ನಷ್ಟವಾದದ್ದಷ್ಟೇ ಅಲ್ಲ, ತಾಪ-ಸಂತಾಪಗಳೂ ಅನಿವಾರ್ಯಗಳೇ. ನಾವು ಯಾವುದನ್ನು ಹಚ್ಚಿಕೊಂಡಿದ್ದೇವೆ, ಅದು ನಮ್ಮ ಕೈಬಿಟ್ಟಾಗ ಆಗುವ ಸಂಕಟ ಅನಿರ್ವಾಚ್ಯ. ಎಷ್ಟು ಬೇಕೋ ಅಷ್ಟು ಹಚ್ಚಿಕೊಂಡಿದ್ದರೆ ಹೋದಾಗ ಛೇ!, ಛೇ! ಎಂದು ಹೇಳಿ ಬಟ್ಟೆಗೆ ಅಂಟಿದ ಧೂಳಿನ ಹಾಗೆ ಜಾಡಿಸಿ ನಿಶ್ಚಿಂತರಾಗಿರಬಹುದಿತ್ತು. ಅತಿ ಹಚ್ಚಿಕೊಂಡಾಗ ತಾಪದ ಉರಿಯೂ ಸಹಿಸಲು ಅಸಾಧ್ಯ. ಆ ತಾಪ ಆಗದೇ ಇರಬೇಕಾದರೆ ಅತಿ ಸ್ನೇಹ ಮಾಡಬೇಡಿ ಎನ್ನುವುದು ಅವಧೂತರ ಹಿತ ಸಂದೇಶ. ನಮ್ಮ ಅನುಭವವೇ ಒಂದು ಪಾಠಶಾಲೆ. ಇದರ ಜೊತೆಗೇನೇ ಅವಧೂತರು ಒಳ್ಳೆಯ ಉದಾಹರಣೆಯನ್ನು ನೀಡಿದ್ದಾರೆ. ಅದೇ ಪಾರಿವಾಳ.

**ಕಪೋತ ಇವ ದೀನಧೀಃ**

ಕಪೋತ ಅಂದರೆ ಪಾರಿವಾಳ. ಸುಮಾರು 24 ಶ್ಲೋಕಗಳಲ್ಲಿ ಕಪೋತದ ಜೀವನವನ್ನು ಬಹು ಸುಂದರವಾಗಿ ಅವಧೂತರು ವಿವರಿಸಿದ್ದಾರೆ. ಸ್ನೇಹ ಜೀವಿ ಬರೀ ಮನುಷ್ಯಮಾತ್ರ ಅಲ್ಲ. ಪಾರಿವಾಳವೂ ಹೌದು. ಹೆಣ್ಣು, ಗಂಡು ಎರಡು ಕಪೋತಗಳು ಜೊತೆ ಸೇರಿ ಜೀವನ ನಡೆಸುತ್ತಿದ್ದವು. ಮೊಟ್ಟೆಗಳನ್ನುಇಟ್ಟವು. ಮೊಟ್ಟೆ ಒಡೆದು ಮರಿಯೂ ನಿರ್ಮಾಣವಾಯಿತು. ಮರಿಗಳಿಗೆ ಅವಯವ ಬೆಳೆಯಿತು. ಗಂಡು ಹೆಣ್ಣು ಎರಡೂ ಪಾರಿವಾಳಗಳು ತಮ್ಮ ಮರಿಗಳ ಪೋಷಣೆಗಾಗಿ ಹಗಲಿಡೀ ದುಡಿದು ಅಶನ ವಸತಿ ವ್ಯವಸ್ಥೆ ಮಾಡುತ್ತಿದ್ದವು. ಈ ದಂಪತಿಗಳು ತನ್ನ ಮಕ್ಕಳಲ್ಲಿ ಅನ್ಯಾದೃಶ ಪ್ರೀತಿ ಮಾಡುತ್ತಿದ್ದವು. ತಮ್ಮ ಸರ್ವಸ್ವವನ್ನೂ ಮರಿಗಳಿಗೆ ಅರ್ಪಿಸುತ್ತಿದ್ದವು. ತಾವು ಮಾತ್ರ ಅನ್ಯೋನ್ಯವಾಗಿ ಅನುರಕ್ತರಾದ್ದದ್ದಲ್ಲ. ತಮ್ಮ ಮರಿಗಳಲ್ಲೂ ನಿರ್ವ್ಯಾಜವಾದ ಪ್ರೀತಿಯ ಪ್ರವಾಹವನ್ನೇ ಹರಿಸುತ್ತಿದ್ದವು. ಸ್ನೇಹ ಅಲ್ಲ ಅತಿ ಸ್ನೇಹ. ಒಂದು ದಿನ ಹೆಣ್ಣು ಕಪೋತ ವಾಪಸ್ಸು ಬರುವಾಗ ಬೇಡನೊಬ್ಬ ಬಲೆ ಬೀಸಿ ಮರಿಗಳನ್ನೆಲ್ಲಾ ಸೆರೆ ಹಿಡಿದಿದ್ದ. ಅದನ್ನು ಕಂಡು ದುಃಖಿತವಾದ ಹೆಣ್ಣು ಕಪೋತ ತಾನೂ ಬೇಡನ ಬಲೆಯೊಳಗೆ ಸೇರಬೇಕಾಯಿತು. ಅದನ್ನು ಕಂಡ ಗಂಡು ಕಪೋತವೂ ಕೂಡ ಸಂತಾಪದಿಂದ ತದೇಕ ಚಿತ್ತವಾಗಿ ಚಿಂತಾಕ್ರಾಂತವಾಗಿ ಸ್ಥಬ್ಧವಾದಾಗ ಬೇಡನ ಬಲೆಗೆ ಬಲಿಪಶುವಾಯಿತು. ಹೀಗೆ ಕಪೋತ ಪರಿವಾರವೇ ಬೇಡನ ಅಹಾರವಾಯಿತು. ಅತಿ ಸ್ನೇಹ ಪಾರಿವಾಳದ ಕುಟುಂಬವನ್ನೇ ಮೃತ್ಯುವಿನ ದವಡೆಗೆ ದೂಡಿತು. ಅದಕ್ಕೆ ಹೇಳಿದ್ದು ಅತಿಸ್ನೇಹ ಮಾರಕ. ಸಾಧಕ ಈ ಪಾರಿವಾಳವನ್ನು ಎಂದೂ ಮರೆಯಬಾರದು. ★

ವಿದ್ವತ್ ಪ್ರಪಂಚ

# ಗೀತಾಮೃತ

–ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಅದೃಷ್ಟದೃಷ್ಟಾಂತಕ್ಕಿಂತ ದೃಷ್ಟವಾದ ದೃಷ್ಟಾಂತವನ್ನು ಅಪೇಕ್ಷಿಸುತ್ತೇನೆ ಎಂದು ಅರ್ಜುನನು ಹೇಳಲು, ಶ್ರೀಕೃಷ್ಣನು ಅವ್ಯಾಕೃತಾಕಾಶ–ಅಕಾರಾದಿ ಪಂಚಾಶತ್ ವರ್ಣಗಳು ಸರ್ವತ್ರ ವ್ಯಾಪಿಸಿಕೊಂಡಿದ್ದಾವೆ ಇವುಗಳು ಅನಾದಿನಿತ್ಯವಾದವುಗಳು ದೃಷ್ಟವಾದ ದೃಷ್ಟಾಂತವಾಗಿದೆ. ಇವುಗಳಂತೆ ಜೀವನು ಅನಾದಿನಿತ್ಯನಾಗಿದ್ದಾನೆ ಎಂದು ಹೇಳಿದನು.

**ರೂಪಂ ರೂಪಂ ಪ್ರತಿರೂಪೋ ಬಭೂವ–** ಎಂಬುದಾಗಿ ವೇದವು ಜೀವನು ಪರಮಾತ್ಮನ ಪ್ರತಿಬಿಂಬವೆಂದು ಹೇಳಿದೆ. ಪ್ರತಿಬಿಂಬಕ್ಕೆ ಉಪಾಧಿ ಅವಶ್ಯಕ. ಕನ್ನಡಿ ಎಂಬ ಉಪಾಧಿ ಇಲ್ಲದೆ ಮುಖದ ಪ್ರತಿಬಿಂಬ ಇರಲಾರದು. ಪ್ರಕೃತದಲ್ಲಿ ಜೀವನೆಂಬ ಪ್ರತಿಬಿಂಬಕ್ಕೆ ಈ ದೇಹವೇ ಉಪಾಧಿಯಾಗಬೇಕು. ಕನ್ನಡಿ ಎಂಬ ಉಪಾಧಿಯು ನಾಶವಾದಾಗ ಮುಖದ ಪ್ರತಿಬಿಂಬವು ನಾಶವಾಗುವಂತೆ ದೇಹ ರೂಪ ಉಪಾಧಿಯು ನಾಶವಾದಾಗ ಪರಮಾತ್ಮನ ಪ್ರತಿಬಿಂಬರೂಪನಾದ ಜೀವನು ನಾಶವಾಗಲೇಬೇಕು. ಹಾಗೂ ಬಿಂಬಕ್ಕೂ ಉಪಾಧಿಗೂ ಸನ್ನಿಧಿನಾಶವಾದಾಗ ಪ್ರತಿಬಿಂಬ ನಾಶವಾಗುತ್ತದೆ. ಹೇಗೆಂದರೆ ಕನ್ನಡಿಯ ಮುಂದೆ ಮುಖವು ಇಲ್ಲದಿದ್ದರೆ ಅಂದರೆ ಕನ್ನಡಿಗೂ ಮುಖಕ್ಕೂ ಸಂಬಂಧವಿರದಿದ್ದರೆ ಪ್ರತಿಬಿಂಬವು ನಾಶವಾಗುತ್ತದೆ. ಅದೇ ರೀತಿ ಬಿಂಬನಾದ ಪರಮಾತ್ಮನು ಜೀವನನ್ನು ಬಿಟ್ಟುಹೋದಾಗ ಬಿಂಬೋಪಾಧಿ ಸನ್ನಿಧಿ ನಾಶದಿಂದ ಜೀವನಾಶವಾಗಬೇಕಾಗುತ್ತದೆ. ಆದ್ದರಿಂದ ಜೀವನು ಅನಾದಿನಿತ್ಯನೆಂದು ಹೇಳಿದ್ದು ಹೇಗೆ ಕೂಡುತ್ತದೆ? ಎಂಬ ಪ್ರಶ್ನೆಯನ್ನು ಅರ್ಜುನನು ಕೇಳಲು ಶ್ರೀಕೃಷ್ಣನು ಈ ರೀತಿಯಾಗಿ ವಿವರಿಸುವನು.

ಜೀವನಿಗೆ ಈ ದೇಹವಲ್ಲದೆ ಸ್ವಾಭಾವಿಕವಾದ, ಜೀವಸ್ವರೂಪಭೂತವಾದ, ಜ್ಞಾನಾನಂದಮಯವಾದ, ಮೋಕ್ಷಸುಖ ಅನುಭವಿಸಲು ಯೋಗ್ಯವಾದ, ದಿವ್ಯದೇಹವು ಅನಾದಿನಿತ್ಯವಾಗಿದೆ. ಅದೇ ಜೀವನ ಉಪಾಧಿರೂಪವಾದುದು. ಈ ಉಪಾಧಿಗೆ ಎಂದಿಗೂ ಸೃಷ್ಟಿನಾಶವಿಲ್ಲ. ಆದ್ದರಿಂದಲೇ ಉಪಾಧಿಯಾಗದೇ ಇರುವ ಹೊರಗಿನ ದೇಹನಾಶವಾದರೂ ಜೀವನಿಗೆ ನಾಶವಾಗುವ ಸಂಭವವಿಲ್ಲ. ಅದೇ ರೀತಿ ಸರ್ವಗತನಾದ ಪರಮಾತ್ಮನು ಸದಾ ಜೀವಾಂತರ್ಯಾಮಿಯಾಗಿ ಇರುವುದರಿಂದ ಬಿಂಬೋಪಾಧಿ ಸನ್ನಿಧಿನಾಶದ ಪ್ರಶ್ನೆಯೂ ಬರುವುದಿಲ್ಲ. ಹೇ! ಅರ್ಜುನ ಆದ್ದರಿಂದ ನೀನು ಹೇಳಿದ ಯಾವ ನಿಮಿತ್ತದಿಂದಲೂ

ಜೀವನಿಗೆ ನಾಶದ ಪ್ರಶ್ನೆಯೇ ಇಲ್ಲ. ಯುದ್ಧದಿಂದ ಬಂಧುಗಳ ಆತ್ಮನಾಶವಾಗುತ್ತದೆ ಎಂಬ ಕಾರಣಕ್ಕೆ ದುಃಖವನ್ನು ಹೊಂದದೆ ನಿನ್ನ ಕರ್ತವ್ಯರೂಪವಾದ ಸ್ವಧರ್ಮೋಚಿತವಾದ ಯುದ್ಧವನ್ನು ಅವಶ್ಯವಾಗಿ ಮಾಡು ಎಂದು ಉಪದೇಶಿಸಿದನು.

ಜೀವನು ಪರಮಾತ್ಮನ ಪ್ರತಿಬಿಂಬವೆಂದು ಒಪ್ಪಿ ಶ್ರೀಕೃಷ್ಣನು ಅರ್ಜುನನ ಪ್ರಶ್ನೆಗೆ ಈ ರೀತಿಯಾದ ಸಮಾಧಾನವನ್ನು ಹೇಳಿದನು. ಆದರೆ ಈ ವಿಷಯದಲ್ಲಿ ಕೆಲವರಿಗೆ ಜಿಜ್ಞಾಸೆಗಳು ಹಾಗೇ ಉಳಿದಿವೆ. ಲೋಕದಲ್ಲಿ ಪ್ರತಿಬಿಂಬ ಎನ್ನುವುದು ವಸ್ತುವೇ ಅಲ್ಲ ಎಂದು ಸಿದ್ಧವಾಗಿದೆ. ಗೋಡೆಗೆ ರಭಸವಾಗಿ ಬಿಸಾಡಿದ ಚೆಂಡು ಅದೇ ವೇಗದಿಂದ ಹಿಂತಿರುಗಿ ನಮ್ಮಲ್ಲಿಯೇ ಬರುವಂತೆ, ತೇಜೋಮಯವಾದ ಚಕ್ಷುರಿಂದ್ರಿಯದ ರಶ್ಮಿಯು ಕನ್ನಡಿಗೆ ಬಿದ್ದು ಹಿಂತಿರುಗಿ ಆ ಮುಖವನ್ನೇ ತಿಳಿಸುತ್ತದೆ. ಕನ್ನಡಿಯಲ್ಲಿ ಮುಖವೆಂಬುದು ಭ್ರಾಂತಿರೂಪ ಅಜ್ಞಾನದಿಂದ ಉಂಟಾಗುತ್ತದೆ. ಕನ್ನಡಿಯಲ್ಲಿ ಮುಖವೂ ಇಲ್ಲ ಪ್ರತಿಮುಖವೂ ಇಲ್ಲ. ಆದ್ದರಿಂದ ಪ್ರತಿಬಿಂಬವೆಂಬ ವಸ್ತುವು ಇಲ್ಲವೇ ಇಲ್ಲ. ಅದರಂತೆ ಜೀವನು ಪ್ರತಿಬಿಂಬವೆಂದು ಒಪ್ಪಿದರೆ ಬ್ರಹ್ಮ ಒಂದೇ ಇರುವುದು ಹೊರತು, ಜೀವನೆಂಬ ಇನ್ನೊಂದು ವಸ್ತುವು ಇಲ್ಲವೆಂಬುದು ಅರ್ಥವಾಗುತ್ತದೆ. ಈ ಸಂಶಯಕ್ಕೆ ಶ್ರೀಮಧ್ವಾಚಾರ್ಯರು ಈ ರೀತಿಯಾಗಿ ಸಮಾಧಾನವನ್ನು ತಿಳಿಸಿದ್ದಾರೆ. ಜೀವನು ಪರಮಾತ್ಮನ ಅಧೀನನು ಹಾಗೆಯೇ ಪರಮಾತ್ಮನ ಸದೃಶನು. ಕನ್ನಡಿಯಲ್ಲಿ ತೋರಕ್ಕ ಪ್ರತಿಬಿಂಬವು ಬಿಂಬಾಧೀನವಾಗಿ ಹಾಗೆಯೇ ಬಿಂಬಸದೃಶವಾಗಿ ತೋರುವಂತೆ ಅಭಿಪ್ರಾಯವೇ ಹೊರತು ಪ್ರತಿಬಿಂಬನೇ ಆಗಿದ್ದಾನೆ ಎಂದು ಅರ್ಥವಲ್ಲ. ದೇವದತ್ತನೇ ಸಿಂಹನೆಂದರೆ ಸಿಂಹಸದೃಶನೆಂದು ಅರ್ಥವೇ ಹೊರತು ಸಿಂಹವೇ ಎಂದು ಅಲ್ಲ. ದೇವದತ್ತನಿಗಿಂತ ಬೇರೆಯಾದ ಸಿಂಹವು ಇದ್ದೇ ಇರುತ್ತದೆ. ಹಾಗೆಯೇ ಜೀವನು ಪ್ರತಿಬಿಂಬ ಎಂಬ ಶಬ್ದಕ್ಕೆ ಬಿಂಬ ಸದೃಶ ಎಂಬ ಅರ್ಥ ಮಾಡಿಕೊಂಡು ಜೀವರೂಪ ವಸ್ತುವು ಬ್ರಹ್ಮನಿಗಿಂತ ಬೇರೆಯಾಗಿದೆ ಎಂದು ತಿಳಿದುಕೊಳ್ಳಬೇಕು. ಜೀವನು ಪರಮಾತ್ಮನ ಸದೃಶ ಎಂದರೆ ಪರಮಾತ್ಮನ ಸಂಪೂರ್ಣಸಾಮ್ಯವನ್ನು ಇಟ್ಟುಕೊಳ್ಳಬಾರದು ಅಲ್ಪಸ್ವಲ್ಪ ಸಾದೃಶ್ಯವನ್ನು ಇಟ್ಟುಕೊಳ್ಳಬೇಕು. ಪರಮಾತ್ಮನು ಜ್ಞಾನಮಯ–ಜೀವನು ಜ್ಞಾನಮಯ ಜೀವನಿಗೆ ತನ್ನ ಸ್ವರೂಪದಲ್ಲಿ ಸ್ವಾಭಾವಿಕವಾದ ಆಕೃತಿ ಇದೆ. ಅದು ಒಂದೊಂದು ಜೀವದಲ್ಲಿ ಮನುಷ್ಯ–ಪಶು–ಪಕ್ಷಿ ಮೊದಲಾದ ಬೇರೆ ಬೇರೆ ಆಕಾರವಿರಬಹುದು. ಕರ್ಮಾಧೀನವಾಗಿ ಬೇರೆ ಬೇರೆ ಆಕಾರದ ದೇಹ ಬರಬಹುದು. ಆದರೆ ಸ್ವಾಭಾವಿಕ ಆಕೃತಿಯು ಎಂದಿಗೂ ವ್ಯತ್ಯಾಸವಾಗುವುದಿಲ್ಲ. ಜೀವನ ಇಂತಹ ಸ್ವಾಭಾವಿಕ ಆಕೃತಿಗೆ ಸಮಾನ ಆಕೃತಿಯುಳ್ಳ ಪರಮಾತ್ಮನ ರೂಪವು ಜೀವನಿಗೆ ಬಿಂಬ ರೂಪವೆಂದು ಹೇಳುತ್ತಾರೆ. ಬಿಂಬ ಪ್ರತಿಬಿಂಬ ಎಂಬ ಶಬ್ದಕ್ಕೆ ಇಷ್ಟೇ ಅರ್ಥವನ್ನು ಇಟ್ಟುಕೊಳ್ಳಬೇಕು. ★

ಪ್ರವಚನ ಮಾಲಿಕೆ

# ವಿದುರನೀತಿ

ಭಾಗ–18

–ಶ್ರೀ ಶ್ರೀ ವಿಶ್ವಪ್ರಿಯತೀರ್ಥಶ್ರೀಪಾದರು, ಶ್ರೀಅದಮಾರುಮಠ, ಬರಹಃ ಕೃಷ್ಣಾ

ಪರಿತ್ಯಾಗ ಮಾಡಬೇಕಾದ ಆರು ರೀತಿಯ ಜನರ ಬಗ್ಗೆ ವಿದುರನು ವಿವರಿಸಿದ ನಂತರ ಇನ್ನೊಂದು ಆರು ರೀತಿಯ ಜನರಿಂದ ಬದುಕುವ ಜನರನ್ನು ವರ್ಣಿಸಲು ತೊಡುಗುತ್ತಾನೆ. **ಸಪ್ತಮೋ ನೋಪಲಕ್ಷ್ಯತೇ** ಎಂದಂತೆ ಆರನ್ನು ಬಿಟ್ಟರೆ ಏಳನೆಯದ್ದು ಇಲ್ಲವೇ ಇಲ್ಲವಂತೆ. ಆರು ರೀತಿಯ ಜನರೆಂದರೆ–

**ಚೋರಾಃ ಪ್ರಮತ್ತೇಷು ಜೀವಂತಿ ವ್ಯಾಧಿತೇಷು ಚಿಕಿತ್ಸಕಾಃ ।**

**ಪ್ರಮದಾಃ ಕಾಮಯಾನೇಷು ಯಜಮಾನೇಷು ಯಾಜಕಾಃ ।**

**ರಾಜಾ ವಿವದಮಾನೇಷು ನಿತ್ಯಂ ಮೂರ್ಖೇಷು ಪಂಡಿತಾಃ ॥**

ಮೊದಲನೆಯವನು ಕಳ್ಳನು. ಅವನು ಮರೆವು ಉಳ್ಳ ಜನರಿಂದಲೇ ಬದುಕುವುದು. ದೇವರು ನಮಗೆ ಮರೆವನ್ನು ಕೊಟ್ಟು ಕಳ್ಳನನ್ನು ಬದುಕಿಸಿದನು. ನಾವು ಮನೆಯಿಂದ ಎಂದಾದರು ಗಡಿಬಿಡಿಯಲ್ಲಿ ಹೊರಟಾಗ ನಮ್ಮ ಮರೆವಿನಿಂದಾದ ತಪ್ಪಿನಿಂದ ಕಳ್ಳನು ಎಲ್ಲಾ ದೋಚಿಕೊಂಡು ಹೋಗಬಹುದು.

ಇದನ್ನು ಅಧ್ಯಾತ್ಮ ಕ್ಷೇತ್ರಕ್ಕೆ ಅನ್ವಯಿಸುವುದಾದರೆ ಮರೆಯುವಿಕೆ ಉಳ್ಳವರೇ ವಿಷ್ಣುಸರ್ವೋತ್ತಮತ್ವವಾದಿಗಳು. ಇವರ ಮರೆವಿನಿಂದಾಗಿ ನಾನೇ ದೇವರು ಎನ್ನತಕ್ಕಂತವರು ಈ ದಿನ ಚೆನ್ನಾಗಿ ಬದುಕಿಕೊಂಡಿದ್ದಾರೆ. ವೇದವ್ಯಾಸ ದೇವರು ಇಂತಹ ಕಳ್ಳನ ಬಗ್ಗೆ ಹೀಗೆ ಹೇಳುತ್ತಾರೆ–

**'ಕಿಂ ತೇನ ನಕೃತಂ ಪಾಪಂ ಚೋರೇಣ ಈಶ ಅಪಹಾರಿಣಾ'**

ನಾನೇ ದೇವರು ಎಂದು ಹೇಳುವ ಮೂಲಕ ದೇವರನ್ನೇ ಕದ್ದಿರತಕ್ಕಂತಹ ವ್ಯಕ್ತಿಗಳು ದೊಡ್ಡ ಪಾಪ ಮಾಡಿರುತ್ತಾರೆ ಎಂದು ವ್ಯಾಸರ ಉದ್ಗಾರ. ಇಂತಹ ವ್ಯಕ್ತಿಗಳು ನೀರಿಗೆ ನೀರನ್ನು ಸೇರಿಸಿದಾಗ ನೀರು ಹೇಗೆ ಒಂದಾಗುತ್ತದೋ ಹಾಗೆಯೇ ಜೀವ ಹೋಗಿ ಮೋಕ್ಷದಲ್ಲಿ ದೇವರಾಗುತ್ತಾನೆ ಎಂದು ಸಮರ್ಥನೆ ಮಾಡುತ್ತಾರೆ. ದೇವರು ಮತ್ತು ಜೀವರಲ್ಲಿ ಭೇದ ಹೇಳುವಂತಹ ಶಾಸ್ತ್ರ ಓದಿರತಕ್ಕಂತಹ ವ್ಯಕ್ತಿಗೆ ಮರೆವಿಲ್ಲದಿದ್ದರೆ ಚೆನ್ನಾಗಿ ಉತ್ತರ ಕೊಡುತ್ತಾನೆ. ಇಲ್ಲವಾದಲ್ಲಿ ಐಕ್ಯ ಹೇಳುವವನನ್ನು ಒಪ್ಪಿಕೊಂಡು ಸುಮ್ಮನೆ ಕುಳಿತುಕೊಳ್ಳುತ್ತಾನೆ. ಇದಕ್ಕೆ ಸರಿಯಾದ ಉತ್ತರವನ್ನು ಹಿರಿಯರು ತೋರಿಸಿಕೊಟ್ಟರು. **'ಯಥಾ ವೃದ್ಧಿಃ ಪ್ರದೃಶ್ಯತೇ'** ಒಂದು

ದ್ರವ ಪದಾರ್ಥಕ್ಕೆ ಇನ್ನೊಂದು ದ್ರವ ಪದಾರ್ಥವು ಸೇರುವುದರಿಂದ ಅದರ ತೂಕ, ಅಳತೆ, ಪ್ರಮಾಣ ಎಲ್ಲದರಲ್ಲಿಯೂ ಒಂದೇ ಇರದೆ ಜಾಸ್ತಿಯಾಗುತ್ತದೆ. ಆದ್ದರಿಂದ ಮೋಕ್ಷದಲ್ಲಿ ಈಶನೆಂಬ ಚೇತನದಿಂದ ಜೀವನೆಂಬ ಚೇತನ ಒಂದಾಗುವುದಿಲ್ಲ ಎಂದು ವೇದವ್ಯಾಸ ದೇವರು ಹೇಳಿದರು. ಆದರೆ ಇದನ್ನು ವಿಷ್ಣು ಸರ್ವೋತ್ತಮತ್ವ ವಾದಿಗಳು ಮರೆತಿರುವುದರಿಂದ ಪರವಾದಿಗಳು ತಮ್ಮ ವಾದ ಮಂಡಿಸಿ ಚೆನ್ನಾಗಿ ಬದುಕುತ್ತಿದ್ದಾರೆ.

ಎರಡನೆಯವರು ವೈದ್ಯರು. ಇವರು ಬದುಕುವುದೇ ಲೋಕದಲ್ಲಿ ರೋಗಿಗಳ ಸಂಖ್ಯೆ ಜಾಸ್ತಿ ಆದಾಗ. ಇನ್ನು ಪ್ರಾಯಕ್ಕೆ ಬಂದಿರತಕ್ಕಂತಹ ಹೆಣ್ಣು ಮಕ್ಕಳು ಬದುಕುವುದು ತಮ್ಮನ್ನು ಪ್ರೀತಿಸತಕ್ಕಂತಹ ಗಂಡುಗಳಿಂದ ಬೇಕಾದದ್ದನ್ನೆಲ್ಲ ಸೂರೆ ಹೊಡೆದು ಎಂದು ವಿದುರ ಹೇಳುತ್ತಾನೆ. ನಾಲ್ಕನೆಯವರು ಪುರೋಹಿತರು. ಈ ದಿನ ಯಜಮಾನರುಗಳಿಂದ ಹೋಮ–ಹವನ ಮಾಡಿಸುವುದರಿಂದ ಲೋಕದಲ್ಲಿ ಪುರೋಹಿತ ವರ್ಗದವರು ಬದುಕಿದ್ದಾರೆ. ಇಲ್ಲಿ ವಿದುರನು ತ್ಯಾಜ್ಯ ಪುರೋಹಿತರನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ. ಇನ್ನೂ ಮುಂದುವರಿಸುತ್ತಾ ರಾಜರುಗಳು ಬದುಕುವುದೇ ಅವನ ರಾಜ್ಯದಲ್ಲಿ ಜನರು ಜಗಳ ಮಾಡಿಕೊಂಡಾಗ ಎಂದು ಹೇಳುತ್ತಾನೆ. ಅವರಿಗೆ ತಪ್ಪು ಕಾಣಿಕೆಯಾಗಿ ತಲೆದಂಡ ಹಾಕಿ ತನ್ನ ಬೊಕ್ಕಸವನ್ನು ತುಂಬಿಸಿಕೊಂಡು ಅವರ ಜಗಳ ಪರಿಹಾರ ಮಾಡಿ ಕಳುಹಿಸುತ್ತಾನೆ. ಕೊನೆಯದಾಗಿ ಪಂಡಿತರು ಬದುಕುವುದೇ ಮೂರ್ಖರಿಂದ ಎಂದು ವಿದುರನು ನುಡಿಯುತ್ತಾನೆ. ಕೊಟ್ಟದ್ದನ್ನು ತೆಗೆದುಕೊಂಡು ಹೋಗದೆ ತನಗೆ ಬೇಕಾದಷ್ಟನ್ನು ಕೇಳಿ ಪಂಡಿತರು ತೆಗೆದುಕೊಂಡೊಯ್ಯುತ್ತಾರೆ. ಈ ರೀತಿಯಲ್ಲಿ ಆರು ರೀತಿಯ ಜನರನ್ನೂ ನೋಯಿಸಬೇಕೆಂದು ಹೇಳದೆ, ಆ ವರ್ಗಗಳಲ್ಲಿ ನಡೆಯುತ್ತಿರುವ ತಪ್ಪುಗಳನ್ನು ಹಿಡಿದೆತ್ತಿ ವಿದುರನ ಮೂಲಕ ವೇದವ್ಯಾಸ ದೇವರು ಸಮಾಜವನ್ನು ತಿದ್ದುತ್ತಿದ್ದಾರೆ.


## ನಿರಂತರ ಜ್ಞಾನಪ್ರಸಾರ ನಿಮ್ಮ ಮನೆ–ಮನಕೆ

ಶ್ರೀಪಾದರ ಪ್ರವಚನವು ಯಾವುದೇ ಊರಿನಲ್ಲಿ ನಡೆಯುತ್ತಿದ್ದರೂ ನಿಮ್ಮ ಮನೆಯಲ್ಲಿಯೇ ನೇರಪ್ರಸಾರವನ್ನು ಶ್ರೀ ಮಠದ ಅಂತರ್ಜಾಲತಾಣಗಳಲ್ಲಿ ವೀಕ್ಷಿಸಬಹುದು.

**www.livepravachana.com**

**www.palimarumatha.org**

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ 31ನೇಚಾತುರ್ಮಾಸ್ಯದಲ್ಲಿ ನಡೆದ ಪ್ರವಚನಗಳು ಹಾಗೂ ಇನ್ನಿತರ ಪ್ರವಚನಗಳು ಉಚಿತವಾಗಿ ಇದೇ ಅಂತರ್ಜಾಲತಾಣದಲ್ಲಿ ಲಭ್ಯವಿದೆ. ಮಾಧ್ವಬಂಧುಗಳು ಇದರ ಉಪಯೋಗವನ್ನು ಪಡೆಯಬಹುದು.

ಉಪನಿಷತ್ ಚಿಂತನ

ಭಾಗ–35

# ತೈತ್ತಿರೀಯೋಪನಿಷತ್

ಬರಹ: ಪಿ. ವೆಂಕಟರಮಣ ಆಚಾರ್ಯ, ಉಡುಪಿ

ಪ್ರವಚನ: ಬನ್ನಂಜೆ ಗೋವಿಂದಾಚಾರ್ಯ

ವೇದದ ಅರ್ಥಸಂಧಾನ ಮಾಡುವ ಮೊದಲು ಶಬ್ದದ ಅರಿವನ್ನು ಪಡೆದುಕೊಳ್ಳಬೇಕು. ಸ್ವರ, ವರ್ಣ, ಮಾತ್ರೆ, ಬಲಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಸಂಹಿತೆಯಿಂದ ಅರ್ಥವನ್ನು ಹೊರಡಿಸಬೇಕು. ಸಾಮ ಹಾಗೂ ಸಂತಾನಗಳನ್ನು ಒಟ್ಟಿಗೆ ಸಂಹಿತೆ ಎಂದು ಕರೆಯುತ್ತಾರೆ. ಆದ್ದರಿಂದ ಸಂಹಿತೆ ಎಂದರೆ ವರ್ಣಗಳ ಸಂಕಲನವೂ ಆಗಬಹುದು. ಅಥವಾ ಪದಗಳ ಸಂಕಲನವೂ ಆಗಬಹುದು. ಶಬ್ದ, ವರ್ಣಗಳ ಸಂಹಿತೆಗಳಲ್ಲಿ ಇರತಕ್ಕ ರಹಸ್ಯವನ್ನು ನಾವು ಈಗ ಹೇಳುತ್ತೇವೆ ಎಂದು ಋಷಿಗಳು ಪ್ರತಿಜ್ಞೆ ಮಾಡಿದರು. ಈ ಸಾಹಿತ್ಯದಲ್ಲಿ ಇರುವ ಅದೃಷ್ಟವಾದ ಶಕ್ತಿಯನ್ನು ನಾವು ತಿಳಿಸುತ್ತೇವೆ ಎಂದು ಪ್ರತಿಜ್ಞೆ ಮಾಡಿದರು. 'ಪಂಚಸ್ವಧಿಕರಣೇಷು' ಎಂದು ಹೇಳಿದರು. ಜಗತ್ತಿನ 5 ನೆಲೆಗಳಲ್ಲಿ ಸಂಹಿತೆಯ ರಹಸ್ಯವನ್ನು ತಿಳಿಯಬೇಕು. ಜಗತ್ತನ್ನು ಭಗವಂತ 5 ರೂಪದಿಂದ ರಕ್ಷಿಸುತ್ತಿದ್ದಾನೆ ಎಂದು ಮೊದಲೇ ಹೇಳಿದ ಹಾಗೆ ಈ ಸಂಹಿತೆಗಳು ಸಹ ಈ 5 ಶಕ್ತಿಗಳಿಂದ ನಿಯಂತ್ರಿಸಲ್ಪಡುತ್ತಿವೆ. ವರ್ಣ, ಶಬ್ದಗಳ (ಸಂಹಿತೆಯಲ್ಲಿ) ಸಮೂಹದಲ್ಲಿ ಇರತಕ್ಕ ಭಗವಂತನ ರೂಪವೇ ಜಗತ್ತಿನಲ್ಲಿ ಉಪಾಸಿಸಲ್ಪಡುತ್ತಿದೆ. ಸಂಹಿತೆಯಲ್ಲಿ ಇರತಕ್ಕ ಭಗವಂತನ ರೂಪವನ್ನು ಪಂಚರೂಪದಿಂದ ಜಗತ್ತಿನಲ್ಲಿ ಉಪಾಸಿಸಲ್ಪಡುವ ರೂಪವೆಂದೇ ಉಪಾಸನೆ ಮಾಡಬೇಕು. ಅಗ್ನಿ ಎಂಬ ಶಬ್ದದಲ್ಲಿ ಇರುವ 'ಅ' ಮತ್ತು 'ಗ್ನಿ'ಯಲ್ಲಿ ಅಡಗಿರುವ ಭಗವಂತನ ಉಪಾಸನೆಯನ್ನು 5ರೂಪಗಳಲ್ಲಿ ಮಾಡಬೇಕು. ಹಾಗೆಯೇ ಪದಗಳ ಸಂತಾನವಾದ ಅಗ್ನಿಮೀಳೆ ಶಬ್ದದಲ್ಲಿ ಅಗ್ನಿಂ ಹಾಗೂ ಈಳೇ ಶಬ್ದಗಳ ಸಂಹಿತೆಯಲ್ಲಿ ಇರುವ ಭಗವಂತನ ರೂಪವನ್ನು 5 ಸ್ಥಾನಗಳಲ್ಲಿ ಉಪಾಸನೆ ಮಾಡಬೇಕು. ಮೊದಲೇ ತಿಳಿಸಿದ ಹಾಗೆ ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಹಾಗೂ ಅನಿರುದ್ಧ ಇವೇ ಭಗವಂತನ 5 ರೂಪಗಳು. ಈ 5 ರೂಪಗಳು 5 ಲೋಕಗಳಲ್ಲಿ ಹರಡಿಕೊಂಡು ಅವನ್ನು ನಿಯಂತ್ರಿಸುತ್ತಾ ಇವೆ.

ಜಗತ್ತಿನಲ್ಲಿ ಹರಡಿಕೊಂಡಿರುವ ಈ 5 ರೂಪಗಳ 5 ಸ್ಥಾನಗಳಾವುವು? ಅಧಿಲೋಕ ನಮಗೆ ಕಾಣಿಸುವ ಈ ಭೌತಿಕ ಪ್ರಪಂಚದಲ್ಲಿ ಅವನ ಒಂದು ರೂಪ ಇದ್ದುಕೊಂಡು ನಿಯಂತ್ರಿಸುತ್ತಾ ಇದೆ. ಈ ಪ್ರಪಂಚದಲ್ಲಿರುವ ಸೂರ್ಯ, ಚಂದ್ರ, ನಕ್ಷತ್ರಗಳ ಪ್ರಕಾಶದಲ್ಲಿರುವ

ಭಗವಂತನ ರೂಪ ಇನ್ನೊಂದು. ಹೊರಗಿನ ಬೆಳಕು ಇರುವ ಹಾಗೆ ಮನಸ್ಸಿನಲ್ಲಿರುವ ಜ್ಞಾನದ ಬೆಳಕು ಒಂದಿದೆ. ಇದರಲ್ಲಿಯೂ ಭಗವಂತನ ಒಂದು ರೂಪ ಇದೆ. ಈ ಪ್ರಪಂಚದಲ್ಲಿರುವ ಪ್ರಜೆಗಳ ಸಂಸಾರದಲ್ಲಿಯೂ ಭಗವಂತ ಒಂದು ರೂಪದಿಂದ ಇದ್ದಾನೆ. ಹಾಗೆಯೇ ಪ್ರತಿಯೊಬ್ಬ ಪ್ರಜೆಯಲ್ಲಿಯೂ ಭಗವಂತನ ಒಂದು ರೂಪ ಇದೆ. ಹೀಗೆ ಭಗವಂತನ 5 ರೂಪಗಳು 5ಸ್ಥಾನಗಳಲ್ಲಿ ಈ ಜಗತ್ತಿನಲ್ಲಿ ತುಂಬಿಕೊಂಡಿವೆ. ಯಾವುದು ಈ 5 ರೂಪ? ವಿಶ್ವದಲ್ಲಿ ನಾರಾಯಣ ಎಂಬ ರೂಪದಿಂದ ತುಂಬಿಕೊಂಡಿದ್ದಾನೆ. ಈ ವಿಶ್ವದಲ್ಲಿ ತುಂಬಿರುವ ಬೆಳಕಿನಲ್ಲಿ ವಾಸುದೇವ ಎಂಬ ಹೆಸರಿನಿಂದ ಕರೆಯಲ್ಪಡುತ್ತಾನೆ. ಸೂರ್ಯ, ಚಂದ್ರ, ನಕ್ಷತ್ರ ಅಗ್ನಿಯ ಬೆಳಕಿನಲ್ಲಿ ವಾಸುದೇವ ರೂಪದಿಂದ ಇದ್ದಾನೆ. ಹೊರಗಿನ ಬೆಳಕಿಗೆ ವಾಸುದೇವ  ಆದರೆ, ನಮ್ಮ ಒಳಗಿರುವ ಮನಸ್ಸಿನ ಬೆಳಕನ್ನು (ಜ್ಞಾನದ) ಸಂಕರ್ಷಣ ರೂಪದಿಂದ ನಿಯಂತ್ರಿಸುತ್ತಾ ಇದ್ದಾನೆ. ಒಳಗಿನ ಹಾಗೂ ಹೊರಗಿನ ಬೆಳಕಿನಿಂದ (ಜ್ಞಾನ) ಸೃಷ್ಟಿಸಲ್ಪಟ್ಟ ಈ ಸೃಷ್ಟಿಯಲ್ಲಿ ಇರುವ ಪ್ರಜೆಗಳ ಸಮೂಹದಲ್ಲಿ ಪ್ರದ್ಯುಮ್ನ ರೂಪದಿಂದ ಇದ್ದಾನೆ. ಪ್ರತಿಯೊಬ್ಬ ವ್ಯಕ್ತಿಯಲ್ಲಿ ಅನಿರುದ್ಧ ರೂಪದಿಂದ ತುಂಬಿದ್ದಾನೆ. ಹೀಗೆ ವಿಶ್ವ, ಜ್ಯೋತಿ, ಮನಸ್ಸಿನ ಬೆಳಕು (ಜ್ಞಾನ) ಸೃಷ್ಟಿ ಹಾಗೂ ಪ್ರಜೆಗಳು ಎಂಬ ಪ್ರಪಂಚದ 5 ಸ್ಥಾನಗಳಲ್ಲಿ 5 ರೂಪಗಳಿಂದ ತುಂಬಿಕೊಂಡಿದ್ದಾನೆ. ಹೀಗೆ ಪ್ರಪಂಚವನ್ನು 5 ರೂಪಗಳಿಂದ ವಿಂಗಡಿಸಬಹುದು. ಭಗವಂತನ ಮೇಲೆ ಹೇಳಿದ 5 ರೂಪಗಳೇ ಸಂಹಿತೆಯಲ್ಲಿಯೂ ತುಂಬಿದೆ. ಸಂಹಿತೆಗೆ 4 ಮುಖಗಳಿವೆ. ಪೂರ್ವವರ್ಣ, ಉತ್ತರವರ್ಣ, ಸಂಧಿ ಹಾಗೂ ಸಂಧಾನಗಳಾದಾಗ ಸಂಹಿತೆ ರಚಿಸಲ್ಪಡುತ್ತದೆ. ಈಗ ಅಗ್ನಿ ಎಂಬ ಶಬ್ದವನ್ನು ಉಚ್ಚರಿಸಬೇಕಾದರೆ 'ಅ' ಶಬ್ದವನ್ನು ಮೊದಲು ಉಚ್ಚರಿಸಬೇಕು. ನಂತರ 'ಗ್ನಿ' ಶಬ್ದವನ್ನು ಉಚ್ಚರಿಸಬೇಕು.

'ಅ' ವನ್ನು ಇವತ್ತು ಉಚ್ಚರಿಸಿ 'ಗ್ನಿ' ಶಬ್ದವನ್ನು ನಾಳೆ ಉಚ್ಚರಿಸಿದರೆ ಅದನ್ನು ಅಗ್ನಿ ಎಂದು ಯಾರೂ ಹೇಳುವದಿಲ್ಲ. ಆದ್ದರಿಂದ ಪೂರ್ವ ವರ್ಣ, ಹಾಗೂ ಉತ್ತರವರ್ಣಗಳಿಗೆ ಸಾಮೀಪ್ಯವಿರಬೇಕು. ಇದನ್ನೇ ಸಂಧಿ ಎನ್ನುತ್ತಾರೆ. ಪೂರ್ವವರ್ಣ, ಉತ್ತರವರ್ಣ ಹಾಗೂ ಅವುಗಳಿಗೆ ಸಾಮೀಪ್ಯವಿದ್ದು ನಾವು ಉಚ್ಚರಿಸದಿದ್ದರೆ ಅದು ಅಗ್ನಿ ಶಬ್ದ ಆಗಲಾರದು. ಇದನ್ನು ಸಂಧಾನ ಎಂದು ಹೇಳುತ್ತಾರೆ. ಪೂರ್ವವರ್ಣ, ಉತ್ತರವರ್ಣ, ಸಂಧಿ, ಸಂಧಾನಗಳಲ್ಲಿ ಭಗವಂತನ 4 ರೂಪಗಳಿವೆ. ಆದ್ದರಿಂದ ಸಂಹಿತೆಯನ್ನು ಉಪಾಸನೆ ಮಾಡಿದರೆ ಐದು ರೂಪಗಳನ್ನು ಉಪಾಸನೆ ಮಾಡಿದ ಹಾಗೆ ಆಗುತ್ತದೆ. **(ಸಶೇಷ)**

# ಶ್ರೀಹರಿಭಕ್ತಿಸಾರ

-ವಿ॥ ಹಯವದನ ಪುರಾಣಿಕ, ತಿರುಪತಿ

**ಒಡೆಯ ನೀನೆಂದರಿದು ನಾನಿ**
**ಮ್ಮಡಿಯ ಭಜಿಸದೆ ದುರುಳನಾದೆನು**
**ಮಡದಿ ಮಕ್ಕಳ ಮೋಹದಲಿ ಮನ ಸಿಲುಕಿತಡಿಗಡಿಗೆ ।**
**ಮಡದಿ ಯಾರೀ ಮಕ್ಕಳಾರೀ**
**ಒಡಲಿಗೊಡೆಯನು ನೀನು ನೀ ಕೈ**
**ವಿಡಿದು ಮುದದಲಿ ಬಿಡದೆ ರಕ್ಷಿಸು ನಮ್ಮನನವರತ ॥೨೦॥**

ನೀನು ಒಡೆಯನೆಂದು ನಾನರಿಯದೆ ಹೋದೆ. ನಿಮ್ಮಡಿಗಳನ್ನು ಭಜಿಸದೆ ದುರುಳನಾದೆ. ಮಡದಿಮಕ್ಕಳ ಮೋಹದಲ್ಲಿ ಅಡಿಗಡಿಗೆ ನನ್ನ ಮನ ಸಿಲುಕಿತು. ಯಾರು ಈ ಮಡದಿ? ಯಾರು ಈ ಮಕ್ಕಳು? ನನ್ನ ಈ ಶರೀರಕ್ಕೆ ಒಡೆಯ ನೀನು. ನೀನು ಸಂತೋಷದಿಂದ ನನ್ನ ಕೈ ಹಿಡಿದು ಬಿಡದೆ ನಮ್ಮನ್ನು ಸದಾ ರಕ್ಷಿಸು.

## ಒಡೆಯ ನೀನೆಂದರಿದು ನಾ ನಿಮ್ಮಡಿಯ ಭಜಿಸದೆ ದುರುಳನಾದೆ

ನೀನು ನಮ್ಮೊಡೆಯ. ನಮ್ಮೊಳಗೆ ಕರುಣೆಯಿಂದ ನಿಂತು ನಮ್ಮನ್ನು ಸದಾ ಸೂತ್ರದ ಬೊಂಬೆಯಂತೆ ಕುಣಿಸುತ್ತಿರುವವನು. ನೀ ಕುಣಿಸಿದಂತೆ ನಾನು ಕುಣಿಯುತ್ತಿದ್ದರೂ ನಾನು ನಿನ್ನನ್ನು ಅರಿಯದೆ ಹೋದೆ. ನಿನ್ನ ಪಾದ ಭಜನೆ ಮಾಡದೆ ಹೋದೆ. ದುರುಳನಾದೆ.

ನಾನು ಬೊಂಬೆ ನೀನು ಕುಣಿಸುವವ. ಬೊಂಬೆಯು ಕುಣಿಸುವವನನ್ನು ಕಾಣುವುದುಂಟೆ? ಭಜಿಸುವುದುಂಟೆ? ನಿಜ. ಅದು ಅಚೇತನ. ನಾನು ಚೇತನ. ಕಾಣುವ ಅರಿಯುವ ಶಕ್ತಿ ನನಗಿದೆ. ನೀನೆ ಆ ಶಕ್ತಿಯನ್ನು ನನಗೆ ನೀಡಿರುವೆ. ಆದರೂ ಕಾಣಲಿಲ್ಲ, ಭಜಿಸಲಿಲ್ಲ ಎಂದರೆ ಅದು ದುರುಳತನವಲ್ಲದಿನ್ನೇನು?

## ಮಡದಿ ಮಕ್ಕಳ ಮೋಹದಲಿ ಮನ ಸಿಲುಕಿತಡಿಗಡಿಗೆ

ಅರಿತು ನನ್ನೊಳಗೇ ನಿನ್ನ ಪಾದಭಜನೆ ಮಾಡುತ್ತಿದ್ದರೆ ಎಲ್ಲ ಸುಖವೂ ಸಿಗುತ್ತಿತ್ತು. ನಾನು ಅದನ್ನು ಬಿಟ್ಟು, ಹೊರಗೆ, ಹೆಂಡತಿ ಮಕ್ಕಳು ಮುಂತಾದವರಲ್ಲಿ ಸುಖ ಕಾಣಲು

ಬಯಸಿದೆ. ಅವರಲ್ಲಿಯೂ ನಿನ್ನನ್ನೇ ಕಂಡು ಸುಖಿಸಬಹುದಾಗಿತ್ತು. ಅದನ್ನೂ ಮಾಡದೆ ಅವರಲ್ಲಿಯೆ ಮನಸ್ಸನ್ನಿಟ್ಟೆ. ಅವರಲ್ಲಿಯೆ ಸುಖವನ್ನು ಅರಸಿ ಸೋತೆ, ದಣಿದೆ. ಅವರ ಮೋಹದಲ್ಲಿ ಅಡಿಗಡಿಗೆ ನನ್ನ ಮನ ಸಿಲುಕಿತು. ಈಚೆಗೆ ಬಾರದೆ ಅಲ್ಲಿಯೂ ನಿಲ್ಲಲಾರದೆ ಅದೀಗ ಅತ್ತಿಂದಿತ್ತ ಹೊಯ್ದಾಡುತ್ತಿದೆ.

ಅಂದು ಕನಸಿನಲ್ಲಿ ನೀ ಬಂದು ಮೈದೋರಿ ಆಜ್ಞೆ ಮಾಡಿದಾಗ ನಾನು ಮಡದಿ ಮಕ್ಕಳನ್ನೇನೋ ಬಿಟ್ಟು ಬಿಟ್ಟೆ. ದಾಸಯ್ಯನಾದೆ, ಆದರೆ, ಅವರ ಮೋಹವನ್ನು ಬಿಡಲಾರದೆ ಹೋದೆ. ನೀನೇ ಬಿಡಿಸಬೇಕು, ತಂದೆ! ನನ್ನೊಳಗೆ ನಿಮ್ಮಡಿಗಳನ್ನು ತೋರಿಸಬೇಕು. ನಿಮ್ಮ ಭಜನೆಯ ಆನಂದದಲ್ಲಿ ನನ್ನ ಮನವನ್ನು ನಿಲ್ಲಿಸಬೇಕು. ಮೋಹವನ್ನು ಕಳೆಯಬೇಕು.

## ಮಡದಿ ಯಾರೀ ಮಕ್ಕಳಾರೀ ಒಡಲಿಗೊಡೆಯನು ನೀನು

ಈ ಮಡದಿ ಮಕ್ಕಳು ನನಗೆ ಯಾರು? ನನಗೇನಾಗಬೇಕು? ಇದನ್ನು ಅಲೋಚಿಸಲಿಲ್ಲ ನಾನು. ಇವರು ನನ್ನ ಶರೀರಕ್ಕೆ ಸಂಬಂಧಿಸಿದವರು. ಶರೀರ ನನ್ನದು. ಅದರಿಂದ ಇವರು ನನ್ನವರು ಎನ್ನುವ ಭ್ರಮೆ. ನಿಜ ಹೇಳಬೇಕೆಂದರೆ ನನ್ನ ಈ ಶರೀರವೆ ವಾಸ್ತವದಲ್ಲಿ ನನ್ನದಲ್ಲ. ಅದರ ಮೇಲೆ ನನಗೆ ಯಾವ ಹತೋಟಿಯೂ ಇಲ್ಲ. ನನ್ನ ಮುಖವನ್ನೇ ನಾನು ಕಾಣಲಾರೆ. ಎಲ್ಲರ ಮುಖವನ್ನು ಕಾಣುವ ನನ್ನ ಕಣ್ಣು ನನ್ನ ಮುಖವನ್ನು ಕಾಣದು. ಕನ್ನಡಿ ಹಿಡಿಯಬೇಕು. ಅದರಲ್ಲಿ ನನ್ನ ಮುಖದ ಪ್ರತಿಬಿಂಬವನ್ನು ಕಂಡು ತೃಪ್ತಿಪಡಬೇಕು. ನನ್ನ ಹೊಟ್ಟೆ ನೋವಾದರೆ ಏನಾಗಿದೆ ಎಂದು ವೈದ್ಯರನ್ನು ಕೇಳಬೇಕು. ನನ್ನೆದೆ ಬಡಿತ ತಿಳಿಯಲು ಅದಕ್ಕೆ ಮಾಪಕ ಬೇಕು. ಜ್ವರವೆಷ್ಟಿದೆ ಎಂದು ತಿಳಿಯಲು ಜ್ವರಮಾಪಕ ಬೇಕು. ರಕ್ತದೊತ್ತಡ ತಿಳಿಯಲು ಒತ್ತಡಮಾಪಕ ಬೇಕು. ಹೀಗೆ ನನ್ನ ಶರೀರವನ್ನು ತಿಳಿಯುವಲ್ಲಿ ನಾನು ಪರಾಧೀನ. ಈ ಮಾಪಕಗಳಿಲ್ಲದಿದ್ದರೆ ವೈದ್ಯರೂ ಶಕ್ತರಲ್ಲ. ಮಾಪಕಗಳಿಂದ ತಿಳಿದು ಚಿಕಿತ್ಸೆ ಮಾಡಿದರೂ ಸಾಯುವವನನ್ನು ಬದುಕಿಸಲು ವೈದ್ಯರೂ ಶಕ್ತರಲ್ಲ. ಕೈಲಾದಷ್ಟು ಯತ್ನ ಮಾಡಿ ಇನ್ನು ದೈವೇಚ್ಛೆ ಎಂದು ಕೈಕಟ್ಟಿ ಕುಳಿತು ಬಿಡುತ್ತಾರೆ. **'ನ ವೈದ್ಯಃ ಪ್ರಭುರಾಯುಷಃ'** ಹೀಗೆ ಈ ಶರೀರವೇ ನನ್ನದಲ್ಲವೆಂದಮೇಲೆ ಅದಕ್ಕೆ ಸಂಬಂಧಿಸಿರುವ ಹೆಂಡತಿ ಮಕ್ಕಳೆಲ್ಲ ನನಗೆ ಯಾರು? ಶರೀರ ನಿನ್ನದು. ಒಳಗೆ ನಿಂತು ಅದನ್ನು ನಡೆಸುವವನು ನೀನು. ಮಡದಿ ಮಕ್ಕಳೂ ನಿನಗೆ ಸಂಬಂಧಿಸಿದವರು. ನಿನಗೆ ಅವರನ್ನು ನಾನು ಒಪ್ಪಿಸಬೇಕು. ಆದರೆ

(...28ನೇ ಪುಟದಲ್ಲಿ)

ಅವಲೋಕನ

# ಮುಕ್ತರಷ್ಟೇ ಮತ್ಯೈಕ್ಯವುಳ್ಳವರು

–ಸಗ್ರಿ ರಾಘವೇಂದ್ರ ಉಪಾಧ್ಯಾಯ

ಶಾಸ್ತ್ರದಲ್ಲಿ ಕೆಲವೆಡೆ ಮುಕ್ತರಿಗೆ ಭಗವಂತನಿಂದ ಐಕ್ಯ ಹೇಳಲಾಗಿದ್ದು ಅದಕ್ಕೆ ಒಂದು ಕಾರಣ ಮತ್ಯೈಕ್ಯ. ಅಂದರೆ ಭಗವಂತನ ಮತಿಗೆ ಸಮಾನವಾದ ಮತಿಯನ್ನೇ ಮುಕ್ತರು ಹೊಂದಿರುವುದರಿಂದ ಭಗವಂತನಿಂದ ಅಭಿನ್ನರು– ಎಂದು ಮುಕ್ತರನ್ನು ಹೇಳಲಾಗುವುದು.

## ಕಾಮೇನ ಮೇ ಕಾಮ ಆಗಾತ್

ಮುಕ್ತಾತ್ಮರಿಗೆ ಭಗವಂತನಿಂದ ಮತ್ಯೈಕ್ಯ ಇದೆ ಎಂದು ಹೇಗೆ ಸಿದ್ಧಿಸುವುದೆಂಬ ಸಂದೇಹದ ಪರಿಹಾರಕ್ಕೆ ಮುಮುಕ್ಷುವಿನ ಪ್ರಾರ್ಥನೆವೊಂದನ್ನು ಹೀಗೆ ಉಲ್ಲೇಖಿಸಲಾಗುವುದು.

**ಕಾಮೇನ ಮೇ ಕಾಮ ಆಗಾತ್ ಹೃದಯಾದ್ ಹೃದಯಂ ಮೃತ್ಯೋಃ।**
**ಯದಮೀಷಾಮದಃ ಪ್ರಿಯಂ ತದೈತೂಪಮಾಮಭಿ ॥**

ವಿಷ್ಣು ತತ್ವವಿನಿರ್ಣಯವೇ ಮುಂತಾದ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ ಈ ಮಾತಿನ ಆಶಯ ಹೀಗಿದೆ.

ಸಂಹಾರಕನಾದ ಭಗವಂತನ ಇಚ್ಛಾನುಸಾರವಾಗಿಯೇ ನನ್ನ ಇಚ್ಛೆಯು ಮೂಡಲಿ. ಅವನ ಸಂಕಲ್ಪಕ್ಕನುಗುಣವಾಗಿಯೇ ನನ್ನಲ್ಲಿ ಸಂಕಲ್ಪ ಉಂಟಾಗಲಿ. ಅವನಿಗೆ ಪ್ರಿಯವಾದದ್ದೇ ನನಗೂ ಪ್ರಿಯವಾಗಲಿ. ಹೀಗೆ ಮುಮುಕ್ಷು ಮುಂದೆ ಮೋಕ್ಷಾವಸ್ಥೆಯಲ್ಲಿ ಹೀಗಾಗುವಂತಾಗಲಿ ಎಂದು ಬಯಸುವುದರಿಂದ ಮೋಕ್ಷಾವಸ್ಥೆಯಲ್ಲಿ ಮುಕ್ತಾತ್ಮನ ಬಯಕೆ–ಸಂಕಲ್ಪ–ಪ್ರೀತಿವಿಷಯ– ಇವೆಲ್ಲ ಭಗವಂತನ ಬಯಕೆ ಇತ್ಯಾದಿಗಳಿಗೆ ಸಮಾನಗಳಾಗಿರುವುದರಿಂದ ಮುಕ್ತಾತ್ಮರು ಭಗವಂತನಿಂದ ಮತ್ಯೈಕ್ಯವುಳ್ಳವರೆಂದು ಸಮರ್ಥಿಸಲಾಗುವುದು.

## ಕಾಮಮಯ ಏವಾಯಂ ಪುರುಷ

ಆದರೆ ಬೃಹದಾರಣ್ಯಕೋಪನಿಷತ್ತಿನಲ್ಲಿ (6–4–5) ಭಗವಂತನು ಜೀವನನ್ನು ಹೇಗೆ

ಮಾಡುವನೋ ಹಾಗೆ ಅವನು ಆಗುವನು. **ಸ ಯಥಾ ಕರೋತಿ ಪುರುಷಂ ತಥೈವಾಯಂ ಭವಿಷ್ಯತಿ.** ಭಗವಂತನು ಒಳ್ಳೆಯವನನ್ನಾಗಿ ಮಾಡಿದರೆ ಒಳ್ಳೆಯವನಾಗುವನು. ಅವನ ಪ್ರೇರಣೆಗನುಗುಣವಾಗಿಯೇ ಪುಣ್ಯವನ್ನು ಮಾಡುವನು. ಪಾಪವನ್ನು ಮಾಡುವನು ಎಂದೆಲ್ಲ ತಿಳಿಸಿ ಆದುದರಿಂದಲೇ **ಆಹುಶ್ಚ ತತ್ಕಾಮಾಧೀನಂ ಜೀವಮೇನಂ ಸದೈವ ಹಿ–** ಭಗವಂತನ ಕಾಮಾಧೀನನಾಗಿ ಜೀವನು ಯಾವಾಗಲೂ ಇರುವನು. **'ತತ್ಕಾಮಾದಸ್ಯ ಕಾಮಃ ಸ್ಯಾದ್ ಯಥಾ ಕಾಮಸ್ತಥಾ ಭವೇತ್'** ಭಗವಂತನ ಕಾಮಕ್ಕೆ ಅನುಗುಣವಾಗಿಯೇ ಜೀವನಲ್ಲೂ ಕಾಮ ಉಂಟಾಗುವುದು. ಕಾಮಕ್ಕನುಗುಣವಾಗಿಯೇ ನಿಷ್ಠೆ, ನಿಷ್ಠೆಗನುಗುಣವಾಗಿ ಕರ್ಮ, ಕರ್ಮಕ್ಕನುಗುಣವಾಗಿ ಫಲ, ಆದುದರಿಂದ ಜೀವನು ಯಾವಾಗಲೂ ಭಗವಂತನ ಇಚ್ಛೆಗನುಗುಣವಾಗಿಯೇ ಇರುವವನಾದುದರಿಂದ, ಅವನನ್ನು 'ಕಾಮಮಯ' ಎನ್ನುವರು.

**'..........ವಿಷ್ಣೋಃ ಕಾಮಮಯಸ್ತತಃ ।**
**ಜೀವೋಽಯಂ ಸರ್ವದೈವ ಸ್ಯಾನ್ನಾನ್ಯಥಾತು ಕಥಂಚನ'॥**

ಹೀಗೆ ಬೃಹದಾರಣ್ಯಕೋಪನಿಷತ್ತಿನ **'ಕಾಮಮಯ ಏವಾಯಂ ಪುರುಷಃ'** ಎಂಬ ಮಾತಿನ ಆಂತರ್ಯವನ್ನು ಶ್ರೀ ಮಧ್ವಗುರುಗಳು ಹೀಗೆ ಸ್ಪಷ್ಟಪಡಿಸಿರುವರು.

ಆದುದರಿಂದ ಜೀವನ ಇಚ್ಛೆ ಇತ್ಯಾದಿಗಳು ಭಗವಂತನ ಇಚ್ಛೆ ಇತ್ಯಾದಿಗಳಿಗೆ ಅನುಗುಣವಾಗಿ ಇರುವುದು ಮೋಕ್ಷದಲ್ಲಿ ಮಾತ್ರವಲ್ಲ, ಯಾವಾಗಲೂ (ನಾನ್ಯಥಾ ತು ಕಥಂಚನ) ಇರುವುದು. 'ಸತ್ಯ ಸಂಕಲ್ಪ'ನಾದ, 'ಸತ್ಯಕಾಮ'ನಾದ ಭಗವಂತನ ಸಂಕಲ್ಪಕ್ಕೆ, ಬಯಕೆಗೆ ವಿರುದ್ಧವಾಗಿ ಜೀವನ ಸಂಕಲ್ಪವಾಗಲೀ, ಕಾಮವಾಗಲೀ ಇರುವುದಾದರೂ ಹೇಗೆ?

ಹೀಗಿರುವುದರಿಂದ ಜೀವರಿಗೆ ಭಗವಂತನಿಂದ ಮತ್ಯೈಕ್ಯ ಯಾವಾಗಲೂ ಇರುವುದು, ಮೋಕ್ಷದಲ್ಲಿ ಮಾತ್ರ ಮುಕ್ತಾತ್ಮರಿಗೆ ಭಗವಂತನಿಂದ ಮತ್ಯೈಕ್ಯ, ಆದುದರಿಂದಲೇ ಮುಕ್ತರು ಭಗವಂತನಿಂದ ಅಭಿನ್ನರೆಂದು ಶಾಸ್ತ್ರದಲ್ಲಿ ಕೆಲವೆಡೆ ನಿರೂಪಿಸಲಾಗಿದೆ ಎಂಬ ಉಪಪಾದನೆ ಎಷ್ಟರ ಮಟ್ಟಿಗೆ ಸೂಕ್ತ?

## ಬುದ್ಧಿ ಪೂರ್ವಕತ್ವಾಬುದ್ಧಿಪೂರ್ವಕತ್ವೇನ ಭೇದಃ

ಈ ಸಂದೇಹಕ್ಕೆ ಭಗವದ್ಗೀತೆಯ **'ಯೇ ಭಜಂತಿ ತು ಮಾಂ ಭಕ್ತ್ಯಾ ಮಯಿತೇ ತೇಷು ಚಾಪ್ಯಹಮ್'** (9–29) ಎಂಬ ಮಾತಿನ ವ್ಯಾಖ್ಯಾನದಿಂದ ಸಮಾಧಾನವನ್ನು

ಪಡೆದುಕೊಳ್ಳಬಹುದಾಗಿದೆ.

ಆ ಮಾತಿನಲ್ಲಿ ಗೀತಾಚಾರ್ಯನು ತನ್ನನ್ನು ಯಾರು ಭಕ್ತಿಪೂರ್ವಕವಾಗಿ ಸೇವಿಸುವರೋ ಅವರು ನನ್ನ ಅಧೀನರಾಗಿರುವರು. 'ಮಯಿತೇ' ಎಂದು ತಿಳಿಸಿರುವನು.

ಭಗವಂತನನ್ನು ಭಜಿಸದಿದ್ದವರೂ, ಭಜಿಸುವವರೂ ಭಜಿಸುವುದಕ್ಕಿಂತ ಮುಂಚೆಯು ಭಗವಂತನಿಗೆ ಅಧೀನರಾಗಿಯೇ ಇರುವರು ತಾನೇ? ಹೀಗಿರುವಾಗ ಗೀತಾಚಾರ್ಯ ತನ್ನನ್ನು ಭಕ್ತಿಯಿಂದ ಭಜಿಸುವರಷ್ಟೇ ತನ್ನ ಅಧೀನರಾಗಿರುವರೆಂದು ಹೇಗೆ ತಿಳಿಸಿರುವನು? ಎಂಬುದನ್ನು ಪೂರ್ವಪಕ್ಷವನ್ನಾಗಿ ಇಟ್ಟುಕೊಂಡು **ತದ್ವಶಾ ಏವತೇ ಸರ್ವದಾ**–ಆದರೆ **'ತಥಾಽಪಿ ಬುದ್ಧಿಪೂರ್ವಕತ್ವಾಬುದ್ಧಿಪೂರ್ವಕತ್ವೇನ ಭೇದಃ** ಯಾವಾಗಲೂ ಎಲ್ಲರೂ ಭಗವದಧೀನರೇ ಆಗಿರುವರಾದರೂ ಭಗವಂತನ ಭಕ್ತರು ತಾವು ಭಗವಂತನಿಗೆ ಅಧೀನರಾಗಿದ್ದೇವೆ ಎಂಬ ಅನುಸಂಧಾನದೊಂದಿಗೆ ಭಗವದಧೀನರಾಗಿರುವರು. ಭಗವಂತನ ಭಕ್ತರಲ್ಲದಿರುವವರು ಭಗವಂತನಿಗೆ ಅಧೀನರೇ ಆಗಿರುವರಾದರೂ ಅವರಿಗೆ ತಾವು ಭಗವದಧೀನರಾಗಿರುವೆವೆಂಬ ಅನುಸಂಧಾನ ಇರುವುದಿಲ್ಲಷ್ಟೇ. ಹೀಗೆ ಈ ಅನುಸಂಧಾನ ಇರುವುದನ್ನೂ, ಇಲ್ಲದಿರುವುದನ್ನೂ ಇಟ್ಟುಕೊಂಡು ಭಗವದ್ ಭಕ್ತರಷ್ಟೇ ಅಧೀನರು, ಎಂದು ನಿರೂಪಿಸಲಾಗಿದೆ.

ಅಂತೆಯೇ ಮುಕ್ತರೂ, ಅಮುಕ್ತರೂ ಭಗವಂತನ ಕಾಮಾದಿಗಳಿಗೆ ಅಧೀನವಾಗಿ ಕಾಮಾದಿಗಳನ್ನು ಹೊಂದುವವರು. ಆದರೆ ಮುಕ್ತರು ತಾವು ಭಗವಂತನ ಕಾಮಾದಿಗಳಿಗೆ ಅಧೀನವಾಗಿ ಕಾಮಾದಿಗಳನ್ನು ಹೊಂದಿರುವವರು ಎಂಬ ಅನುಸಂಧಾನಕ್ಕೆ, ಒಳಗಾಗಿರುವವರು. ತಮಗೆ ಯಾವುದಾದರೊಂದು ಬಯಕೆ ಮೂಡಿದಾಕ್ಷಣ ಭಗವಂತನಿಗೂ ಈ ಬಯಕೆ ಮೂಡಿದೆ, ಆದ್ದರಿಂದಲೇ ನನಗೆ ಈ ಬಯಕೆ ಮೂಡಿದೆ ಎಂದು ಅನುಸಂಧಾನ ತಾಳುವರು. ಅಮುಕ್ತರಿಗಾದರೂ ಈ ಬಗೆಯ ಅನುಸಂಧಾನ ಇರುವುದಿಲ್ಲ.

ಆದ್ದರಿಂದಲೇ ಮುಕ್ತಾತ್ಮರು ಭಗವಂತನ ಮತ್ತೈಕ್ಯಕ್ಕೆ ಒಳಗಾದವರೆಂದೂ, ಆದುದರಿಂದಲೇ ಕೆಲವೆಡೆ ಅವರು ಭಗವದಭಿನ್ನರೆಂದೂ ವ್ಯವಹರಿಸಲ್ಪಡುವರು.

ಅಮುಕ್ತರಲ್ಲಿ ಭಗವಂತನಿಂದ ಮತ್ತೈಕ್ಯವಿರುವುದಾದರೂ ಅದರ ಅನುಸಂಧಾನ ಇಲ್ಲದಿರುವುದರಿಂದ ಅವರು ಮತ್ತೈಕ್ಯಕ್ಕೆ, ಒಳಗಾಗಿರುವವರೆಂದಾಗಲೀ, ಭಗವಂತನಿಂದ ಅಭಿನ್ನರೆಂದಾಗಲೀ ವ್ಯವಹಾರ ಬಂದಿಲ್ಲವಷ್ಟೆ. ★

# ಅವಗಣನೆಯಿಂದ ಅಧಃಪತನ

–ವಿ|| ರಾಮವಿಟ್ಠಲಾಚಾರ್ಯ ಬೆಂಗಳೂರು

ಯಯಾತಿ ತಾರುಣ್ಯವನ್ನು ಪೂರುವಿಗೆ ಹಿಂತಿರುಗಿಸಿ ವೃದ್ಧಾಪ್ಯವನ್ನು ಹಿಂದೆ ಪಡೆದು ವಿರಕ್ತನಾದ. ಪೂರು! ನೀನು ನನ್ನ ಪ್ರಿಯಪುತ್ರ. ರಾಜ್ಯವನ್ನು ಸ್ವೀಕರಿಸು. ಬಯಸುವವರೆಗೆ ಯೌವನವನ್ನು ಅನುಭವಿಸಿ ದೀರ್ಘಾಯುಷ್ಮಂತನಾಗು ಎಂದು ಹರಸಿದ. ಪೂರುವಿಗೆ ಪಟ್ಟಾಭಿಷೇಕದ ಸಿದ್ಧತೆ ಮಾಡಿಸಿದ. ಬ್ರಾಹ್ಮಣರೆಲ್ಲ ಕೇಳಿದರು. ದೇವಯಾನಿಯ ಜ್ಯೇಷ್ಠ ಮಗ ಯದುವನ್ನು ಬಿಟ್ಟು ಶರ್ಮಿಷ್ಠೆಯ ಕೊನೆಯ ಮಗ ಪೂರುವಿಗೆ ಹೇಗೆ ರಾಜ್ಯಾಭಿಷೇಕದ ನಿರ್ಧಾರ ಮಾಡಿರುವಿ?

ಯಯಾತಿ ಹೇಳಿದ– ಬ್ರಾಹ್ಮಣರೆ! ನನ್ನ ಮಾತು ಕೇಳಿ. ನನ್ನ ಜ್ಯೇಷ್ಠ ಪುತ್ರ ನನ್ನ ಆಜ್ಞೆಯನ್ನು ಪಾಲಿಸಲಿಲ್ಲ. ಅಂದ ಮೇಲೆ ಅವನ ಹಿರಿತನಕ್ಕೆ ಅರ್ಥವಿಲ್ಲೆಂದು ನಿರ್ಧರಿಸಿದ್ದೇನೆ.

**ಪ್ರತಿಕೂಲಃ ಪಿತುರ್ಯಶ್ಚ ನ ಸ ಪುತ್ರಃ ಸತಾಂ ಮತಃ ॥**

**ಮಾತಾಪಿತ್ರೋಃ ವಚನಕೃತ್ ಹಿತಃ ಪಥ್ಯಶ್ಚ ಯಃ ಸುತಃ ।**

**ಸ ಪುತ್ರಃ ಪುತ್ರವದ್ಯಶ್ಚ ವರ್ತತೇ ಪಿತೃಮಾತೃಷು ॥**

ತಂದೆ ತಾಯಿಗಳಿಗೆ ಪ್ರತಿಕೂಲನಾದವನನ್ನು ಪುತ್ರನೆಂದು ಸಜ್ಜನರು ಒಪ್ಪುವುದಿಲ್ಲ. ತಾಯ್ತಂದೆಗಳ ಮಾತನ್ನು ಕೇಳುವವನು, ಅವರಿಗೆ ಹಿತವಾಗಿ ಪಥ್ಯವಾಗಿ ನಡೆದುಕೊಳ್ಳುವವನು, ಪುತ್ರ ಎನಿಸುವನು.

ಪುತ್ ಎಂದರೆ ನರಕ. ಅದರಿಂದ ತಾಯ್ತಂದೆಯರನ್ನು ಪಾರು ಮಾಡುವವನು ಪುತ್ರ ಎನಿಸುವವನು.

**ಮೂಕೋಽಂಧೋ ಬಧಿರೋಶ್ವಿತ್ರೀ ಸ್ವಧರ್ಮಾನ್ನಾನುತಿಷ್ಠತಿ ।**

**ಚೋರಃ ಕಿಲ್ಬಿಷಿಕಃ ಪುತ್ರೋ ಜ್ಯೇಷ್ಠೋ ನಜ್ಯೇಷ್ಠ ಉಚ್ಯತೇ ॥**

ಮೂಕ, ಕುರುಡ, ಕಿವುಡ, ಕುಷ್ಠರೋಗಿ, ಸ್ವಧರ್ಮಪರಿತ್ಯಾಗೀ, ಕಳ್ಳ, ಪಾಪಿಯಾದ ಜ್ಯೇಷ್ಠಪುತ್ರನು ಜ್ಯೇಷ್ಠಪುತ್ರನೆನಿಸುವುದಿಲ್ಲ.

ಸದ್ಗುಣವಂತನೇ ಪುತ್ರ. ಯದು, ತುರ್ವಸು, ದ್ರುಹ್ಯು, ಅನು ಇವರಾರೂ ನನ್ನ ಮಾತು ಕೇಳಲಿಲ್ಲ. ನನ್ನನ್ನು ತಿರಸ್ಕಾರ ಬುದ್ಧಿಯಿಂದ ಕಂಡರು. ಪೂರು ನನ್ನ ಮಾತಿಗೆ

ಮರ್ಯಾದೆಕೊಟ್ಟು ಅದರಂತೆ ನಡೆದುಕೊಂಡ. ನನ್ನನ್ನು ಗೌರವದಿಂದ ಕಂಡ. ನನ್ನ ಮುಪ್ಪು ಪಡೆದು ತಾರುಣ್ಯ ಕೊಟ್ಟವ. ಶುಕ್ರಾಚಾರ್ಯರೂ ವರ ಕೊಟ್ಟಿರುವರು. ಯಾವ ಪುತ್ರ ನಿನ್ನ ಮಾತಿನಂತೆ ನಡೆದುಕೊಳ್ಳುವನೋ ಅವನು ಪೃಥಿವೀಪತಿಯಾಗುತ್ತಾನೆ. ರಾಜನಾಗುತ್ತಾನೆಂದು. ಆದುದರಿಂದ ಬ್ರಾಹ್ಮಣರೇ! ನಿಮ್ಮಲ್ಲಿ ವಿಜ್ಞಾಪನೆ ಮಾಡುತ್ತೇನೆ. ನನ್ನ ಮನೋರಥವನ್ನು ಸಲ್ಲಿಸಿದ ಪೂರುವಿಗೆ ರಾಜ್ಯಾಭಿಷೇಕ ಮಾಡಿರಿ.

ಪ್ರಜೆಗಳು ಉತ್ತರಿಸಿದರು. ಯಾವ ಪುತ್ರ ಗುಣಸಂಪನ್ನನೂ ಸದಾ ಮಾತಾಪಿತೃಗಳಿಗೆ ಹಿತನೂ ಆಗಿರುವನೋ ಅವನು ಕಿರಿಯನಾದರೂ ಎಲ್ಲವನ್ನೂ ಪಡೆಯಲು ಅರ್ಹನಾಗುವನು. ನಿನಗೆ ಪ್ರಿಯಕಾರಿಯಾದ ಪೂರುವು ರಾಜ್ಯಾರ್ಹನಾಗುವನು. ಶುಕ್ರಾಚಾರ್ಯರ ವರವೂ ಹಾಗಿದ್ದ ಮೇಲೆ ನಮ್ಮದೇನೂ ಉತ್ತರವಿಲ್ಲ. ಬ್ರಾಹ್ಮಣರ ಹಸ್ತದಿಂದ ಪೂರುವಿಗೆ ರಾಜ್ಯಾಭಿಷೇಕ ಮಾಡಿಸಿ ತಾನು ದೀಕ್ಷಿತನಾಗಿ ದೇವಯಾನಿ–ಶರ್ಮಿಷ್ಠೆಯರೊಡಗೂಡಿ ವಾನಪ್ರಸ್ಥಾಶ್ರಮಿಯಾಗಿ ನಡೆದ. ಯದುವಿಗೆ, ಯಾದವರು, ತುರ್ವಸುವಿನಿಂದ ಯವನರು, ದ್ರುಹ್ಯುವಿನಿಂದ ಭೋಜರು, ಅನುವಿನಿಂದ ಮ್ಲೇಚ್ಛಜಾತಿಯವರು ಹುಟ್ಟಿದರು.

ಪೂರುವಂಶದಿಂದ ಕೌರವರು ಬಂದರು. ಜನಮೇಜಯ! ನೀನು ಈ ಪೂರುವಂಶದ ಪೌರವ. ಸಾವಿರವರ್ಷ ಈ ರಾಜ್ಯವನಾಳುವುದು ನಿನ್ನ ದೇವರ ಸೇವೆ.

ಯಯಾತಿ ವಾನಪ್ರಸ್ಥಾಶ್ರಮಿಯಾಗಿ ವನದಲ್ಲಿ ಬಹುಕಾಲ ತಪಸ್ಸು ಮಾಡಿದ. ಅತಿಥಿ ಪೂಜೆ, ಶಿಲೋಂಛವೃತ್ತಿಯಿಂದ ಸಾವಿರ ವರ್ಷ ಸಾಧನೆಗೈದ, ಬಳಿಕ ನೀರೇ ಆಹಾರವುಳ್ಳವನಾಗಿ ಮೂವತ್ತುವರ್ಷ, ವಾಯುಭಕ್ಷನಾಗಿ ಸಂವತ್ಸರಕಾಲ, ಆರು ತಿಂಗಳು ಪಂಚಾಗ್ನಿ ಮಧ್ಯದಲ್ಲಿ ಏಕಪಾದನಾಗಿ ನಿಂತು ತಪಸ್ಸು ಮಾಡಿ ಧನ್ಯನಾದ. ಮುಂದೆ ಪುಣ್ಯದ ಫಲವಾಗಿ ಸ್ವರ್ಗ ಸೇರಿದ. ಅಲ್ಲಿಯೂ ದೇವತೆಗಳಿಂದ ಪೂಜಿತನಾಗಿ ದೇವಲೋಕ–ಬ್ರಹ್ಮಲೋಕಗಳಿಗೆ ಸಂಚರಿಸುತ್ತ ಭೋಗಗಳನ್ನು ಅನುಭವಿಸಿದ. ಒಂದೊಮ್ಮೆ ಪುಣ್ಯ ಬರಿದಾಯಿತೆಂದು ಶಕ್ರ ಯಯಾತಿಯನ್ನು ಸ್ವರ್ಗದಿಂದ ಕೆಳಗೆ ಹಾಕುವ ಸಂಕಲ್ಪ ಮಾಡಿದ. ಅದಕ್ಕೆ ಮೊದಲು ಯಯಾತಿಯಲ್ಲಿ ಕೇಳಿದ. ನೀನು ಪೂರುವಿಗೆ ರಾಜ್ಯ ಕೊಟ್ಟ ಬಳಿಕ ಏನು ಉಪದೇಶ ನೀಡಿದಿ?

ಗಂಗಾಯಮುನೆಗಳ ಮಧ್ಯದಲ್ಲಿರುವ ಸಮಗ್ರದೇಶ ನಿನ್ನ ಸಾಮ್ರಾಜ್ಯ. ಮನುಷ್ಯ ಮಾತ್ರನು ದೈನ್ಯ, ಶಾಠ್ಯ, ಕ್ರೋಧ, ವಂಚನೆ, ಮತ್ಸರ, ವೈರ ಇವುಗಳನ್ನು ಯಾರ ವಿಷಯದಲ್ಲಿಯೂ ಮಾಡಬಾರದು. ತಂದೆ, ತಾಯಿ,ಅಣ್ಣ, ತಪೋಧನರಾದ ವಿದ್ವಾಂಸರು, ಕ್ಷಮಾಶೀಲ ಇವರನ್ನು ಎಂದಿಗೂ ಅವಮಾನಿಸಬಾರದು. ಸಮರ್ಥನಾದವನು ಕ್ಷಮಿಸುತ್ತಾನೆ.

ಅಸಮರ್ಥನಾದವನು ಕೋಪಗೊಳ್ಳುತ್ತಾನೆ. ದುರ್ಜನರು ಸಜ್ಜನರನ್ನು, ದುರ್ಬಲನು ಪ್ರಬಲರನ್ನು, ರೂಪವಿಲ್ಲದವನು ರೂಪವಂತನನ್ನು, ದರಿದ್ರನು ಸಿರಿವಂತನನ್ನು, ಸೋಮಾರಿಯು ಕ್ರಿಯಾಶೀಲನನ್ನು, ಅಧಾರ್ಮಿಕನು ಧಾರ್ಮಿಕನನ್ನು, ನಿರ್ಗುಣನು ಗುಣವಂತನನ್ನು ದ್ವೇಷಿಸುವುದು ಕಲಿಯುಗದ ಲಕ್ಷಣ. ಇದು ವಿಪರೀತವಾದರೆ ಅದು ಕೃತಯುಗದ ಲಕ್ಷಣ.

ಯಾರೇ ಆಗಲಿ ಪ್ರಶಸ್ತವಾದುದರಲ್ಲಿ ಪ್ರಸಕ್ತನಾದರೆ ಪ್ರಶಂಸಾರ್ಹನಾಗುತ್ತಾನೆ. ನೀನೂ ಪ್ರಶಸ್ತವಾದ ಕಾರ್ಯಗಳಲ್ಲಿ ಪ್ರವೃತ್ತನಾಗು. ಹೀಗೆ ಪುತ್ರನಿಗೆ ತಾನು ಮಾಡಿದ ಉಪದೇಶವನ್ನು ಇಂದ್ರನಿಗೆ ತಿಳಿಸಿದನು.

ಬಳಿಕ ದೇವೇಂದ್ರನು ಯಯಾತಿಗೆ ನೀನು ಧಾರ್ಮಿಕನಾದವನು. ಉತ್ತಮ ಧರ್ಮವನ್ನು ತಿಳಿದವನು. ಧರ್ಮದ ನೆಲೆಯಲ್ಲಿ ಲೋಕದ ನಡೆ ಹೇಗಿರಬೇಕು? ತಿಳಿಸು ಎಂದನು.

ಕೋಪಿಗಿಂತ ಕೋಪಗೊಳ್ಳದವನು ಶ್ರೇಷ್ಠ. ಸಹನೆಯ ಸ್ವಭಾವದವನು. ಸಹನೆಯಿಲ್ಲದವನಿಗಿಂತ, ಮನುಷ್ಯೇತರ ಪ್ರಾಣಿಗಳಿಗಿಂತ ಮನುಷ್ಯನು, ಅವಿದ್ವಾಂಸನಿಗಿಂತ ವಿದ್ವಾಂಸನು ಶ್ರೇಷ್ಠ.

ಯಾರು ಎಷ್ಟೇ ಬೈದರೂ ಕೆರಳದೆ ಸಹನೆಯಿಂದಿರುವುದನ್ನು ಕಲಿಯಬೇಕು. ಸಹನಶೀಲನು ಬೈಯುವವನ ಪುಣ್ಯವನ್ನು ಪಡೆಯುವನು. ಕೋಪವೇ ಬೈಯುವವನನ್ನು ಬಲಿ ತೆಗೆದುಕೊಳ್ಳುತ್ತದೆ. ಇನ್ನೊಬ್ಬರನ್ನು ನೋಯಿಸುವಂತಹ ಮಾತನ್ನೆಂದೂ ಆಡಬಾರದು. ಸಂತರು ಸತ್ಕರಿಸುವಂತೆ ನಮ್ಮ ನಡೆಯಿರಬೇಕು. ಬೆನ್ನ ಹಿಂದೆ ಸಜ್ಜನರು ನಿಂತು ನಮ್ಮನ್ನು ರಕ್ಷಿಸುವರು. ದಯಾ ಮೈತ್ರೀ ದಾನ ಮಧುರವಾದ ಮಾತು ಇವುಗಳಿಂದ ಎಲ್ಲರನ್ನು ವಶಮಾಡಿಕೊಳ್ಳಬಹುದು. ಆದ್ದರಿಂದ ಸದಾ ಸಾಂತ್ವವಚನಗಳನ್ನೇ ಆಡುತ್ತಿರಬೇಕು. ಎಂದಿಗೂ ನಿಷ್ಠುರವಾಗಿ ಮಾತನಾಡಬಾರದು. ಪೂಜ್ಯರನ್ನು ಪೂಜಿಸಬೇಕು. ಇನ್ನೊಬ್ಬರಿಗೆ ಕೊಡಬೇಕೆ ಹೊರತು ತಾನು ಯಾರಿಂದಲೂ ಏನನ್ನೂ ಯಾಚನೆ ಮಾಡಬಾರದು. ಇಷ್ಟೆಲ್ಲ ಉಪದೇಶಿಸಿದ ಯಯಾತಿಯನ್ನು ದೇವೇಂದ್ರ ಮತ್ತೊಂದು ಪ್ರಶ್ನೆಯನ್ನು ಕೇಳಿದನು. ಎಲ್ಲ ಕರ್ತವ್ಯಗಳನ್ನು ಪೂರೈಸಿ ಮನೆ ಬಿಟ್ಟು ಕಾಡಿಗೆ ಹೋಗಿ ಉತ್ತಮ ತಪಸ್ಸು ಮಾಡಿದಿ. ತಪಸ್ಸಿನಲ್ಲಿ ನೀನು ಯಾರಿಗೆ ಸದೃಶನಾಗಿರುವಿ? ಹೇಳೆಂದ.

ದೇವತೆಗಳಲ್ಲಿ ಮನುಷ್ಯರಲ್ಲಿ ಗಂಧರ್ವರಲ್ಲಿ ತಪಸ್ಸಿನಲ್ಲಿ ನನಗೆ ಸದೃಶರು ಯಾರೂ ಇಲ್ಲೆಂದು ಭಾವಿಸಿದ್ದೇನೆ ಎಂದ. ದೇವೇಂದ್ರ ನುಡಿದ. ನಿನಗೆ ಸದೃಶರಾದವರನ್ನು ನಿನಗಿಂತ

ಹಿರಿಯರನ್ನು ಅಹಂಕಾರದಿಂದ ಕಡೆಗಣಿಸಿರುವಿಯಾದ ಕಾರಣ ಪುಣ್ಯ ಖಾಲಿಯಾದ ನೀನು ಧರೆಗುರುಳುವಿ ಈಗ.

ದೇವೇಂದ್ರ! ನನ್ನ ಗರ್ವದ ನುಡಿಯಿಂದ ಪುಣ್ಯಲೋಕಗಳು ನನಗಿಲ್ಲದಂತಾಗಿ ಧರೆಗುರುಳುವುದಾದರೆ ಸಜ್ಜನರಿರುವಲ್ಲಿ ಕೆಳಗೆ ಹಾಕೆಂದ ಯಯಾತಿ. ಹಾಗೆ ಆಗಲಿ. ಸಜ್ಜನರು ನೀಡಿದ ಪುಣ್ಯದ ಫಲದಿಂದ ಮತ್ತೆ ಇಲ್ಲಿಗೆ ಬಾ ಎಂದ.

ಯಯಾತಿಯ ಮೊಮ್ಮಕ್ಕಳಾದ ಅಷ್ಟಕ, ಪ್ರತರ್ದನ, ಶಿಬಿ ಮುಂತಾದವರು ಬೀಳುತ್ತಿರುವ ಯಯಾತಿಯನ್ನು ಕಂಡರು. ಸ್ವರ್ಗಚ್ಯುತನಾದ ನೀನು ಯಾರು? ಹೆದರದಿರು. ಸಜ್ಜನರು ನಿನಗೆ ನೆಲೆಯಾಗುವರು.

ನಾನು ನಹುಷಪುತ್ರ ಯಯಾತಿ. ಪೂರುವಿನ ತಂದೆ. ಹಿರಿಯರನ್ನು ನಿಂದಿಸಿದ ಫಲವಾಗಿ ಸ್ವರ್ಗಚ್ಯುತನಾಗಿ ಕೆಳಗೆ ಬರುತ್ತಿದ್ದೇನೆ. ನಾನು ನಿಮಗಿಂತ ವಯಸ್ಸಿನಲ್ಲಿ ಹಿರಿಯನಾದುದರಿಂದ ನಮಸ್ಕಾರ ಸಲ್ಲಿಸುತ್ತಿಲ್ಲ. ಯಾರು ವಿದ್ಯೆ ತಪಸುಗಳಿಂದ ವೃದ್ಧನಾಗಿರುತ್ತಾನೆ ಅವನು ಬ್ರಾಹ್ಮಣರಿಗೆ ಪೂಜ್ಯನಾಗುತ್ತಾನೆ. ಕೇವಲ ವಯೋವೃದ್ಧನಲ್ಲ. ಸುಖವಾಗಲಿ ದುಃಖವಾಗಲಿ ಅದು ದೈವಾಧೀನ. ಆದ್ದರಿಂದ ಸಂಪತ್ತು ಬಂದಾಗ ಹಿಗ್ಗಬಾರದು. ಕಳೆದುಕೊಂಡು ಕುಗ್ಗಬಾರದು ಕೂಡ. ನನಗೂ ರಾಜ್ಯವಿತ್ತು. ಧನವಿತ್ತು. ಯೌವನವಿತ್ತು. ತಪಸ್ಸು ಇತ್ತು. ಮಹಾತ್ಮರ ನಿಂದೆಯ ಪರಿಣಾಮವಾಗಿ ಇಂದು ಕೆಳಗೆ ಬೀಳುತ್ತಿರುವೆ. ನಿಮ್ಮ ಪುಣ್ಯದಿಂದ ಫಲದಿಂದ ಮತ್ತೆ ಸ್ವರ್ಗಸೇರುವಂತೆ ಮಾಡಿ. ಯಯಾತಿ ಮೊರೆಯಿಟ್ಟ.

ಪೂಜ್ಯರೆ! ಅಷ್ಟಕ, ಪ್ರತರ್ದನ, ಶಿಬಿ ನಾವೆಲ್ಲ ನಿಮ್ಮ ಮಗಳ ಮಾಧವಿಯ ಮಕ್ಕಳು. ನೀವು ನಮಗೆ ಮಾತಾಮಹ. ನಮ್ಮ ಪುಣ್ಯದಿಂದ ಮತ್ತೆ ನೀವು ಸ್ವರ್ಗ ಸೇರುವಿಯೆಂದು ಅಷ್ಟಕನುಡಿದ. ನಾವು ನಿಮ್ಮವರೇ ಆದುದರಿಂದ ನಮ್ಮ ಸಂಪತ್ತೆಲ್ಲ ನಿಮಗೇ ಸೇರಬೇಕಾದದ್ದು. ಆದ್ದರಿಂದ ನಮ್ಮ ಪುಣ್ಯದ ಪ್ರತಿಗ್ರಹದಿಂದ ಪಾಪದ ಭಯಬೇಡ ಎಂದು ಹೇಳಿ ತಮ್ಮ ಪುಣ್ಯವನ್ನು ಧಾರೆಯಿತ್ತನು. ಅದರ ಫಲದಿಂದ ಅಂತರಿಕ್ಷದಲ್ಲಿ ಐದು ರಥ ಬಂದವು. ಅದನ್ನೇರಿಕೊಂಡು ಯಯಾತಿ ಸ್ವರ್ಗಸೇರಿದ.

ತುಂಬಾ ಸಾಧನೆಗೈದ ಯಯಾತಿಗೂ ಅಹಂಕಾರ ಬಂತಲ್ಲ! ನಮ್ಮ ಪಾಡೇನು? ಅಂತಹ ಚಕ್ರವರ್ತಿಗೂ ಮಹಾತ್ಮರನ್ನೂ ಅಹಂಕಾರದಿಂದ ಕಡೆಗಣಿಸಿದುದರಿಂದ ಅಧಃಪತನವಾಯಿತು. ಎಂದೆಂದೂ ಜೀವನದಲ್ಲಿ ಹಿರಿಯರನ್ನು ಕಡೆಗಣಿಸಿ ತನ್ನ ಮಹಿಮೆಯನ್ನು ಹೇಳಿಕೊಳ್ಳುವ ಚಪಲವಿರಬಾರದು. ★

ಉಪನಿಷತ್ ಸಂದೇಶ

ಭಾಗ–29

# ಕಠೋಪನಿಷತ್

ಡಾ। ಎನ್. ವೇಂಕಟೇಶಾಚಾರ್ಯ

**ವಿದ್ಯಾರ್ಥೀ ಚೇತ್ ತ್ಯಜೇತ್ ಸುಖಂ ।**

ವಿದ್ಯೆ ಬೇಕಾದರೆ ಸುಖದ ಆಸೆ ಬಿಡು ಎಂಬ ಮಾತೇ ಬಂದಿದೆ. ಹೀಗಾಗಿ ನಿಜವಾದ ವಿದ್ಯೆ ಎಂದರೆ ಸಂಯಮವನ್ನು ಕಲಿಸುವ ಬ್ರಹ್ಮವಿದ್ಯೆ. ಇಂದಿನ ವಿದ್ಯೆ ವಿಷಯಾರ್ಥಿಗಳನ್ನು ಸೃಷ್ಟಿಸುತ್ತದೆ. ಯಮ ನಚಿಕೇತನನ್ನು ವಿದ್ಯೆಗಾಗಿ ಹಂಬಲಿಸುವ ವಿದ್ಯಾರ್ಥಿ ಎಂದು ಹಾಡಿ ಹೊಗಳಿದ್ದಾನೆ.

ಇಂದು ಡಿಗ್ರಿ ಕಲಿತವರಿದ್ದಾರೆ. ಆದರೆ marksಗಿಂತ remarksಗಳೇ ಹೆಚ್ಚಾಗಿ ಇರುವವರನ್ನು ನಾವು ಕಂಡಿದ್ದೇವೆ. ಹೀಗಾಗಿ ವಿನಯ ಕಲಿಸದ ಈ ಭೌತಿಕ ವಿದ್ಯೆಯನ್ನು ಅವಿದ್ಯೆ ಎಂದು ಯಮ ಜರಿದಿದ್ದಾನೆ. ನಿಜವಾದ ವಿದ್ಯೆ ಕಾಣುವುದರಿಂದ ಆರಂಭಿಸಿ ಕಾಣದಿರುವ ಅಂತರ್ಯಾಮಿಯ ಅನ್ವೇಷಣೆಗೆ ಸಹಾಯಕವಾಗಬೇಕು. ಹಾಗಾದಾಗ ಜಗತ್ತಿನ ಸೂಕ್ಷ್ಮ ಕಂಡುಹಿಡಿಯುವ ಸಂಶೋಧನೆಯೂ ವಿದ್ಯೆ ಆದೀತು. ಆದರೆ ಅದು ಅಲ್ಲಿಗೆ ನಿಲ್ಲದೆ ಭಗವಂತನ ಬಗೆಗೆ ತೊಡಗಬೇಕಲ್ಲವೆ? ಇಲ್ಲವಾದರೆ ಆ ವಿದ್ಯೆ ಅವಿದ್ಯೆಯೇ ಸರಿ.

**ಅವಿದ್ಯಾಯಾಂ ಅಂತರೇ ವರ್ತಮಾನಾಃ**
**ಸ್ವಯಂ ಧೀರಾಃಪಂಡಿತಂ ಮನ್ಯಮಾನಾಃ ।**
**ದಂದ್ರಮ್ಯಮಾಣಾಃ ಪರಿಯಂತಿ ಮೂಢಾಃ**
**ಅಂಧೇನೈವ ನೀಯಮಾನಾಃ ಯಥಾಂಧಾಃ ॥**

ಅವಿದ್ಯೆಯ ಮಧ್ಯದಲ್ಲಿಯೇ ಮುಳುಗಿರುವವರು. ತಮ್ಮನ್ನೇ ಬುದ್ಧಿವಂತರೆಂದು ಹೇಳಿಕೊಳ್ಳುವವರು. ಪಂಡಿತ ಎಂಬ ಪದವಿಯು ತಮಗಾಗಿಯೇ ಇದೆ ಎಂದು ತಿಳಿದುಕೊಂಡವರು. ಸದಾ ವಂಚನೆಗಾಗಿ ವಕ್ರಗತಿಯಲ್ಲಿಯೇ ವ್ಯವಹರಿಸುವವರು. ಇವರು ಸ್ವರ್ಗ–ನರಕಗಳ ಪರಿಧಿಯಲ್ಲಿಯೇ ತಿರುಗಾಡುವವರು (ಇವರಿಗೆ ಗುರುವು ಇಲ್ಲ–ಆದ್ದರಿಂದ ಹೀಗೆ ಎಂದು ಅನುಕಂಪಿಸಬೇಡಿ) ಅಂಧರನ್ನೇ ಗುರುವನ್ನಾಗಿ ಮಾಡಿಕೊಂಡು ಅವರ ಹಾದಿಯಲ್ಲಿಯೇ ದಾರಿ ನಡೆಸುವವರು.

ಭೌತಿಕವಿದ್ಯೆಯೇ ಪರಮಗುರಿ ಎಂದುಕೊಂಡು ಅದನ್ನೇ ಕಲಿತವರು. ಈ ಜಗತ್ತಿನಲ್ಲಿ ಜಾಗ ಪಡೆದಿರುವುದು ಭೋಗಮಾಡಲಿಕ್ಕಾಗಿಯೇ ಎಂದು ಸದಾ ಭಾವಿಸಿರುವ ಇವರು ಅವಿದ್ಯೆಯ ಸುಳಿಯಲ್ಲಿ ಸಿಕ್ಕಿರುವವರು. ಇವರ ಮುಂದೆ ಪದವಿಗಳು ಬೆಳೆಯುತ್ತಾ ಹೋಗುತ್ತದೆ. ಆದರೆ ಜ್ಞಾನ-ಭಕ್ತಿ-ವೈರಾಗ್ಯ ಬೆಳೆಯಲಿಲ್ಲ. ತನಗೆ ಉಳಿದವರು ಗೌರವ ಕೊಡಬೇಕು. ಕೊಡದಿದ್ದರೆ ಹೀಗೆ ಪಡೆದುಕೊಳ್ಳಬೇಕು ಎಂಬ management technique ತಿಳಿಯಿತು. ಆದರೆ ತಾನು ದೇವರಿಗೆ ಎಷ್ಟು ಗೌರವ ತೋರಬೇಕು. ಅವನ ಅನುಗ್ರಹ ಎಷ್ಟಿದೆ ಎಂಬುದನ್ನು ತಿಳಿಸುವ ತಿಳಿವು ಬರಲಿಲ್ಲ. ಕೆಲಸ ಮುಗಿದು ವಿಶ್ರಾಂತಿ ಪಡೆದ. ಆದರೂ ತನ್ನ ಹಿಂದಿನ ಪದವಿ-ವಿದ್ಯೆಗಳನ್ನು ಹೆಮ್ಮೆಯಿಂದ ಹೇಳುತ್ತಾನೆ. ಆದರೆ ತನಗೆ ಅದನ್ನೆಲ್ಲಾ ನೀಡಿದ ದೇವರ ಅನುಗ್ರಹ ತಿಳಿಯಲಿಲ್ಲ ಎಂದರೆ ಅವಿದ್ಯೆಯೇ ಅಲ್ಲವೇ? ಇದೇನಿದು ಕಾಲೇಜು ಮೆಟ್ಟಿಲು ಹತ್ತುವವರನ್ನು ಪ್ರಯೋಗ ಶಾಲೆಯಲ್ಲಿ ಮುಳುಗಿರುವವರನ್ನು ಭೌತಿಕ ಸಂಶೋಧಕರನ್ನು ಅವಿದ್ಯೆ ಮಾರ್ಗದವರು ಎನ್ನುವುದೇ? ಹಾಗಿದ್ದರೆ ಬೇರೆ ಯಾರಾದರೂ ಆಕ್ಷೇಪಿಸುತ್ತಿರಲಿಲ್ಲವೇ? ಎಂಬ ಪ್ರಶ್ನೆ ಸಹಜ.

ಆದರೆ ಯಮನ ಉತ್ತರ ಹೀಗಿದೆ. ಬೇರೆ ಮಾರ್ಗದಲ್ಲಿರುವವರು ಯಾರು? ಯಾರೂ ಇಲ್ಲ. ಎಲ್ಲರೂ ಅವಿದ್ಯೆಯಲ್ಲಿಯೇ ಮುಳುಗಿರುವವರು. ಹೀಗಾಗಿ ಸಮಾಜ ಅವರಿಗೆ ಎಚ್ಚರಿಸದು.

ಇನ್ನು ಅವರೇ ಎಚ್ಚೆತ್ತುಕೊಳ್ಳಬೇಕು! ಅದೂ ಸಾಧ್ಯವಿಲ್ಲ. ಏಕೆಂದರೆ ಅವರು ತಾವೇ ಧೀಮಂತರು ಎಂದು ಭಾವಿಸಿಕೊಂಡಿದ್ದಾರೆ. ತಾನೇ ಬೃಹಸ್ಪತಿ ಎಂದು ಕೊಂಡವನಿಗೆ ಆತ್ಮ ಜಾಗೃತಿ ಬಂದೀತೆ?

ಇದರೊಂದಿಗೆ ತಾವು ಕೇವಲ ಬುದ್ಧಿವಂತರಷ್ಟೇ ಅಲ್ಲ. ಎಲ್ಲಾ ವಿದ್ಯೆ ಕರಗತ ಮಾಡಿಕೊಂಡರವರು, ಇನ್ನು ಪಂಡಿತರಾಗಿದ್ದೇವೆ, ಕಲಿಯುವುದು ಏನೂ ಉಳಿದಿಲ್ಲ ಎಂದೇ ಭಾವಿಸಿಕೊಂಡಿದ್ದಾರೆ. **'ಪಂಡಿತಂ ಮನ್ಯಮಾನಾಃ'** ಪಂಡಿತ ಎಂದೇ ತಿಳಿದಿದ್ದಾರೆ.

ಕಲಿತದ್ದೆಲ್ಲಾ ಆಗಿದೆ ಇನ್ನು ಉಳಿದಿರುವುದು ಸಮಾಜ ಗೌರವಿಸುವುದು ಮಾತ್ರ, ಅವಿದ್ಯಾವಂತ ಸಮಾಜ ತಾನೇ ಗೌರವಿಸೀತು. ಇಲ್ಲವಾದರೆ ಸಮಾಜವನ್ನು ವಂಚಿಸಲು ತಾವೇ ಗುಂಪು ಕಟ್ಟಿ ಸನ್ಮಾನ ಮಾಡಿಸಿಕೊಳ್ಳುತ್ತಾರೆ. ಪ್ರಶಸ್ತಿ ಪಡೆದುಕೊಳ್ಳುತ್ತಾರೆ. ಪಾಠ ಕಲಿಯದವರಿಗೂ ಜ್ಞಾನಪೀಠಪ್ರಶಸ್ತಿ ಸಿಗುತ್ತದೆ. ಸದಾ ವಕ್ರಗತಿಯಲ್ಲೇ ಇರುತ್ತಾರೆ. 'ದಂದ್ರಮ್ಯಮಾಣಾಃ'

**(ಸಶೇಷ)**

ಸ್ತೋತ್ರ ಚಿಂತನೆ

ಭಾಗ-17

# ಶ್ರೀನಾರಾಯಣವರ್ಮ

-ಬೆ.ನಾ ವಿಜಯೀಂದ್ರಾಚಾರ್ಯ, ಮೈಸೂರು

**ಭಗವಂತನು ಜೀವಿಗಳಿಗೆ ಆತ್ಮನೆನಿಸಿದ್ದಾನೆ**

**ಹರಿರ್ಹಿ ಸಾಕ್ಷಾದ್ಭಗವಾನ್ ಶರೀರಿಣಾಮಾತ್ಮಾ** (ಭಾ 5-18-13)

ಭಗವಂತನು ಎಲ್ಲ ಜೀವಿಗಳ ಆತ್ಮ. ಎಂದರೆ ನಾವೆಲ್ಲರೂ ಭಗವಂತರೇನು? ಎಂದರೆ ಅದಕ್ಕಾಗಿ **'ಝುಷಾಣಾಮಾತ್ಮಾ'** ಎಂದರು. ಜಲಚರಗಳಿಗೆ ಜಲವು ಆಶ್ರಯವಾದಂತೆ ಜೀವರಿಗೆ ಮುಖ್ಯಾಶ್ರಯ ನರಸಿಂಹ. ಎಂದಷ್ಟೇರ್ಥ. ಇಂತಹ ಭಗವಂತನನ್ನು ನಿರಂತರ ಹೀಗೆ ಜಪಿಸಬೇಕು-

**ಓಂ ನಮೋ ಭಗವತೇ ನೃಸಿಂಹಾಯ ನಮಸ್ತೇಜಸ್ತೇಜಸೇ ಆವಿರಾವಿರ್ಭವ ವಜ್ರನಖ ವಜ್ರದಂಷ್ಟ್ರ ಕರ್ಮಾಶಯಾನ್ ರಂಧಯ ರಂಧಯ ತಮೋ ಗ್ರಸ ಗ್ರಸ ಓಂ ಸ್ವಾಹಾ ಅಭಯಮಭಯಮಾತ್ಮನಿ ಭೂಯಿಷ್ಠಾ ಓಂ ಕ್ಷ್ರೌಂ॥** (ಭಾ 5-18-8)

ವಜ್ರದಂತಹ ಕೋರೆದಾಡೆಗಳುಳ್ಳ ವಜ್ರನಖದ ನರಸಿಂಹನೇ! ಸಹಸ್ರ ಸೂರ್ಯರ ತೇಜಸ್ಸನ್ನೂ ಮೀರಿರುವವನೇ! ಪ್ರತಿದಿನವು ವ್ಯಕ್ತನಾಗು. ಕರ್ಮದ ಗಂಟನ್ನು ಅಂತಃಕರಣವನ್ನು ಸುಟ್ಟುಬಿಡು! ಅಜ್ಞಾನವನ್ನು ಕಬಳಿಸು. ಅಭಯಪ್ರದನಾದ ಪರಮಾತ್ಮನೇ ನಿನಗೆ ಸದಾ ನನ್ನ ನಮನಗಳಿರಲಿ!.'

## ಧರಾಲಿಂಗಿತ ವರಾಹನು ರಕ್ಷಿಸಲಿ

**"ರಕ್ಷತ್ವಸೌ ಮಾಽಧ್ವನಿ ಯಜ್ಞಕಲ್ಪಃ ಸ್ವದಂಷ್ಟ್ರಯೋನ್ನೀತಧರೋ ವರಾಹಃ"**

ತನ್ನ ಅಂಗಗಳಿಂದ ಯಜ್ಞಗಳನ್ನು ಅಭಿವ್ಯಕ್ತಿಗೊಳಿಸಿದ. ತನ್ನಕೋರೆ ದಾಡೆಯಿಂದ ಭೂಮಿಯನ್ನು ಉದ್ಧರಿಸಿದ, ವರಾಹರೂಪಿ ಶ್ರೀಹರಿಯು ಮಾರ್ಗಮಧ್ಯದಲ್ಲಿ ನಮ್ಮನ್ನು ರಕ್ಷಿಸಲಿ. ಜ್ಞಾನ ಮಾರ್ಗದಲ್ಲಿಯೂ ರಕ್ಷಿಸಲಿ.

ಬ್ರಹ್ಮನು ಸೃಷ್ಟಿಸಿದ ವಿಸ್ತಾರವಾದ ಪ್ರಪಂಚ ನೀರಿನಲ್ಲಿ ಮುಳುಗಿಹೋಯಿತು. ಮುಳುಗಿದ ಭೂಮಿಯನ್ನು ರಕ್ಷಿಸುವುದು ಹೇಗೆ? ಎಂದು ಅಜ್ಞ ಜನರಂತೆ ಕಮಲೋದ್ಭವನು ಚಿಂತಿಸುತ್ತಿರಲು ಬ್ರಹ್ಮದೇವನ ನಾಸಾಪುಟದಿಂದ ವರಾಹರೂಪಿ ಶ್ರೀಹರಿ ಪ್ರಕಟಗೊಂಡ. ನೀರಿನಲ್ಲಿ ಮುಳುಗುತ್ತಿದ್ದ ಬ್ರಹ್ಮನ ಸೃಷ್ಟಿರೂಪವಾದ ಭೂಮಿಯನ್ನು ಉದ್ಧರಿಸಿದ ಜಗತ್ತಿನ ಆಪತ್ತನ್ನು ಪರಿಹರಿಸಿದ ಯಜ್ಞವರಾಹನ ಕರುಣೆ ಅಪಾರ.

ಯಜ್ಞ ಎಂದರೆ **'ದೇವತಾ ಉದ್ದೇಶೇನ ದ್ರವ್ಯತ್ಯಾಗಃ'** ಎಂದು. ಕೇವಲ ಹವಿಸ್ಸನ್ನು ಅಗ್ನಿಗೆ ಅರ್ಪಿಸುವುದೇ ಯಜ್ಞವಲ್ಲ. ನಮ್ಮ ದೈನಂದಿನದ ಎಲ್ಲ ಕ್ರಿಯೆಗಳೂ ಯಜ್ಞವಾಗಬೇಕು. ಭಗವತ್ಪ್ರೀತಿಯನ್ನು ಉದ್ದೇಶವಾಗಿಟ್ಟು ಕೊಂಡು ಮಾಡುವ ಪರೋಪಕಾರ ರೂಪವಾದ ತ್ಯಾಗವೇ ಯಜ್ಞ ಎನಿಸಿದೆ. ಸ್ವಾರ್ಥರಹಿತ ತ್ಯಾಗ ಮತ್ತು ಭಗವದ್ಭಕ್ತಿಗಳು ಬದುಕಿನಲ್ಲಿ ಸಮ್ಮಿಲನ ಗೊಂಡಾಗ ಜೀವನವೂ ಯಜ್ಞ ಎನಿಸುತ್ತದೆ. ಭಕ್ತಿ ತ್ಯಾಗರೂಪವಾದ ಯಜ್ಞವೇ ಭಗವಂತನ ಶರೀರ. ಇಂತಹ ಯಜ್ಞವರಾಹ ಪ್ರಕಟಗೊಂಡಾಗ ಮುಳುಗುವ ಪ್ರಪಂಚ ಮತ್ತೆ ಉಳಿಯಿತು ಬೆಳೆಯಿತು.

ಇಂದು ನಮ್ಮಜಗತ್ತೂ ಮುಳುಗುತ್ತಿದೆ. ನೀರಿನಲ್ಲಿ ಮುಳುಗದಿದ್ದರೂ ಅನೈತಿಕ, ಅನ್ಯಾಯಗಳ ತೆರೆಗಳಲ್ಲಿ ತೂರಿಕೊಂಡು ಅಧಃಪತನಕ್ಕೆ ತುತ್ತಾಗುತ್ತಿದೆ. ಜಗತ್ತೆಲ್ಲವೂ ಮುಳುಗಿಹೋಗುವಷ್ಟು ಅನರ್ಥದ ಸ್ಥಿತಿಯಲ್ಲಿ ದ್ದೇವೆ. ಆದರೆ ಈ ಜಗತ್ತು ಮುಳುಗಬಾರದು. ಬೆಳೆಯಬೇಕು. ಬೆಳೆಯ ಬೇಕಾದರೆ ಇದಕ್ಕೆ ಒಂದೇ ಮಾರ್ಗ! ಯಜ್ಞ! ಬ್ರಹ್ಮಸೃಷ್ಟಿಯನ್ನು ಉಳಿಸಿಕೊಳ್ಳಲು ಯಜ್ಞವರಾಹನ ಅನುಗ್ರಹ ಬೇಕಾದಂತೆ ಅಧಃಪತನದ ಮುಂಚೂಣಿಯಲ್ಲಿರುವ ನಮ್ಮ ಜಗತ್ತು ಮೇಲೆ ಬರಬೇಕಾದರೆ ಆ ಯಜ್ಞವರಾಹನ ಅನುಗ್ರಹವೇ ಬೇಕು. ಇವೆರಡನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಮ್ಮ ಜಗತ್ತು ಉಳಿಯಲು ಸಾಧ್ಯ.

ಆದಿ ಹಿರಣ್ಯಾಕ್ಷನೆಂಬ ಅಸುರನನ್ನು ಸದೆ ಬಡಿದು ಬ್ರಹ್ಮಸೃಷ್ಟವಾದ ಧರೆಯನ್ನು ಉದ್ಧರಿಸಿದ ಕರುಣಾಳು ಶ್ರೀಹರಿ ಯಜ್ಞವರಾಹನೆನಿಸಿದ್ದಾನೆ. ಈ ಜಗಚ್ಚಕ್ರ ನಡೆಯುತ್ತಿರುವುದೇ ಯಜ್ಞಗಳಿಂದ. ಯಜ್ಞಗಳಿಗೆ ಆಧಾರ ಭೂಮಿ. ಭೂಮಿಗೂ ಆಧಾರ ವರಾಹ. ವರಾಹನಿಗೆ ವರಾಹನೇ ಆಧಾರ.

**ಮಹಾನ್ ಹಿ ರಕ್ಷಕೋಲ್ಪಸ್ಯ ಮಹಾಂತಂ ಸ ನ ರಕ್ಷತಿ ।**
**ಉದ್ಧಧಾರ ಮಹೀಮಾದೌ ವರಾಹಸ್ತಂ ದಧಾರ ಕಃ ॥** (ಶುದ್ಧಿಸೌರಭ.)

ಸಣ್ಣವರನ್ನು ದೊಡ್ಡವರು ಉದ್ಧರಿಸುವರೇ ವಿನಾ ದೊಡ್ಡವರನ್ನು ಸಣ್ಣವರಲ್ಲ. ಅಂತೆಯೇ ಭೂಮಿಯನ್ನು ಉದ್ದರಿಸುವ ಶ್ರೀಹರಿಯೇ ವಿನಾ ಶ್ರೀಹರಿಯಾದ ವರಾಹನನ್ನು ಧರಿಸಿದವರು ಯಾರೂ ಇಲ್ಲ. ಆದ್ದರಿಂದ 'ಗರುಡ ವಾಹನ–ವಾಯು ವಾಹನ–ರಥಸ್ಥ ಕೇಶವ' ಎಂಬಲ್ಲೆಲ್ಲ ಗರುಡ–ವಾಯು ಮುಂತಾದವರಿಗೆ ಅನುಗ್ರಹಿಸುತ್ತಿದ್ದಾನೆ ಎಂದಿಷ್ಟೇ ಭಾವಿಸಬೇಕು. ಹರಿಗೆ ಆಧಾರ ಯಾವುದೂ ಬೇಕಿಲ್ಲ. ಇಂಥಹ ವರಾಹನಿಂದಲೇ ಯಜ್ಞಗಳ ರಕ್ಷಣೆ. ಭೂಮಿಯ ರಕ್ಷಣೆಯೂ ಕೂಡ. ಬ್ರಹ್ಮದೇವನು ಭೂಮಿಯನ್ನು ಸೃಷ್ಟಿಸಿ ಪ್ರಜೆಗಳನ್ನೂ ಸೃಷ್ಟಿಸಿ ಅವರ ಜೊತೆಗೆ ಯಜ್ಞವನ್ನು ಸೃಷ್ಟಿಸಿದ. **(ಸಶೇಷ)**

ಪುರಾಣಸಂದೇಶ

# ಮಾರ್ಕಂಡೇಯಪುರಾಣ

ವಿ॥ ಅಡ್ವೇಲಕ್ಷ್ಮೀಶಾಚಾರ್ಯ

ತಾಯಿಯ ಆದೇಶದಂತೆ ರಾಜ್ಯಸೂತ್ರವನ್ನು ಕೈಗೊಂಡ ಅಲರ್ಕ ಅದರಲ್ಲೇ ತತ್ಪರನಾದ **'ವೈರಾಗ್ಯಂ ನಾಸ್ಯ ಸಂಜಜ್ಞೇ ಭುಂಜತೋ ವಿಷಯಾನ್ ಪ್ರತಿ'** ಸಹೋದರನು ದಾರಿ ತಪ್ಪುವುದನ್ನು ಮನಗಂಡ ಅಣ್ಣ ಸುಬಾಹು ಈ ಪ್ರಯತ್ನ ಮಾಡುತ್ತಾನೆ. ನೆರೆಯ ಕಾಶಿರಾಜನೊಂದಿಗೆ ರಾಜ್ಯದಾಸೆಯಿಂದ ಅಲರ್ಕನ ರಾಜ್ಯವನ್ನು ಆಕ್ರಮಣ ಮಾಡಿದ. ರಾಜ್ಯ ಶತ್ರು ವಶವಾಗುವುದನ್ನು ಕಂಡ ಅಲರ್ಕ ಈ ಪರಿಸ್ಥಿತಿಯಲ್ಲಿ ತಾಯಿಯ ಉಂಗುರವನ್ನು ಕೇಳಿದ. ಅದರಲ್ಲಿ ಬಂದ ಉತ್ತರ ಅಲರ್ಕನ ಜೀವನವನ್ನೇ ಬದಲಿಸಿತು.

**ಸಂಗಃ ಸರ್ವಾತ್ಮನಾತ್ಯಾಜ್ಯಃ ಸಚೇತ್ತ್ಯಕ್ತುಂ ನಶಕ್ಯತೇ ।**
**ಸ ಸದ್ಭಿಃಕರ್ತವ್ಯಃ ಸತಾಂ ಸಂಗೋ ಹಿ ಭೇಷಜಂ ॥**
**ಕಾಮಃ ಸರ್ವಾತ್ಮನಾತ್ಯಾಜ್ಯಃ ಸಚೇತ್ತ್ಯಕ್ತುಂ ನಶಕ್ಯತೇ ।**
**ಮುಮುಕ್ಷಾಂ ಪ್ರತಿತತ್ಕಾರ್ಯಂ ಸೈವ ತಸ್ಯಾಪಿ ಭೇಷಜಂ ॥**

ಸಂಗವು ದುಃಖಕ್ಕೆ ಹೇತು, ಬಿಡುವುದಾಗದಿದ್ದಲ್ಲಿ ಸಜ್ಜನರ ಸಹವಾಸ ಮಾಡು. ಕಾಮ ಬಿಡಲೇ ಬೇಕಾದ್ದು ಸಾಧ್ಯವಾಗದಿದ್ದಲ್ಲಿ ಮೋಕ್ಷಕಾಮನೆ ಪ್ರಶಸ್ತ.

ಈ ಸಂದೇಶವನ್ನು ಆಲಿಸಿದ ಅಲರ್ಕ ರಾಜ್ಯ ತೊರೆದ. ದತ್ತಾತ್ರೇಯರಲ್ಲಿ ಶಿಷ್ಯತ್ವ ವಹಿಸಿದ. ಅವರ ಉಪದೇಶವನ್ನು ಪಡೆದು, ಆಧ್ಯಾತ್ಮದ ಎತ್ತರಕ್ಕೇರಿದ. ರಾಜ್ಯ ಕೋಶಾದಿಗಳನ್ನು ತೊರೆದು ಭಗವಚ್ಚಿಂತನೆಗೆ ತೊಡಗಿದ. ತನ್ನ ಪ್ರಯತ್ನ ಸಾರ್ಥಕವಾದುದನ್ನು ಮನಗಂಡ ಸೋದರ ಸುಬಾಹು ತಾನೂ ಭಗವಚ್ಚಿಂತನೆಯಲ್ಲಿ ರತನಾದ. ಅಣ್ಣ ತಮ್ಮಂದಿರ ಈ ನಿಲುವಿನಿಂದ ಮಧ್ಯವರ್ತಿ ಕಾಶೀರಾಜ ಅವಕ್ಕಾಗಿ ಹೋದ.

**ಯಥಾಘಟೇ ಕುಂಭ ಕಮಂಡಲುಸ್ಥಂ ಆಕಾಶಂ ಏಕಂ ಬಹುಧಾಹಿದೃಷ್ಟಂ ।**
**ತಥಾ ಸುಬಾಹುಃ ಸ ಚ ಕಾಶಿಪೋಹಂ ಮನ್ಯೇಚ ದೇಹೇಷು ಶರೀರಭೇದೈಃ ।**

ಇದು ಅಲರ್ಕ ಕಂಡ ವೇದಾಂತದ ಅರಿವಿನ ಉದ್ಧಾರ. ಮೇಲ್ನೋಟಕ್ಕೆ ಭ್ರಾಮಕವಾಗಿ ಐಕಾತ್ಮ್ಯವಾದಕ್ಕೆ ಪುಷ್ಟಿಕೊಡುವಂತೆ ಕಂಡರೂ ಶಾಸ್ತ್ರೋಕ್ತವಾದ ಅನುಭವದ ಹಿನ್ನಲೆಯಲ್ಲಿ ಚಿಂತಿಸಿದಾಗ ಭಗವಂತನ ಸರ್ವಾಂತರ್ಯಾಮಿತ್ವವು ಸ್ಫುಟವಾಗವುದು. **ಸದಾ ಮುರಾರಿಂ ಹೃದಿಚಿಂತಯೇಥಾಃ** ಎಂಬ ಪೂರ್ವ ವಾಕ್ಯವು ಐಕಾತ್ಮ್ಯವಾದಕ್ಕೆ ತೊಡಕಾಗುವುದು. ಸಂಸಾರ ಬಂಧನದ ಬಿಡುಗಡೆಗೆ ಭಗವದ್ಧ್ಯಾನವನ್ನು ವಿಧಾನ ಮಾಡುವ ಈ ವಿಧಿ ವಾಕ್ಯವು

ಧ್ಯೇಯನಾದ ಭಗವಂತನಿಗೂ ಧ್ಯಾತೃವಾದ ಜೀವನಿಗೂ ಭೇದವನ್ನೇ ಹೇಳುತ್ತಿದೆ.

ಮೇಲಿನ ಶ್ಲೋಕದಲ್ಲಿ, ಒಂದೇ ಆಕಾಶ, ಘಟ ಕುಂಭ ಕಮಂಡಲು ಎಂಬ ಉಪಾಧಿಯಿಂದ ಬೇರೆ ಕಾಣುವಂತೆ ಒಬ್ಬನೇ ಆತ್ಮ ಶರೀರ ಭೇದದಿಂದ ಸುಬಾಹು, ಕಾಶೀರಾಜ, ಅಲರ್ಕ ಎಂಬುದಾಗಿ ಭೇದ ವ್ಯವಹಾರ. ಈ ಭೇದ ವ್ಯಾವಹಾರಿಕ. ಪಾರಮಾರ್ಥಿಕವಲ್ಲ. ಹೀಗೆ ಐಕಾತ್ಮ್ಯವಾದವನ್ನು ಸಮರ್ಥಿಸುವಂತೆ ಈ ಶ್ಲೋಕ ಕಂಡರೂ ಭಗವಂತನ ಸರ್ವಾಂತರ್ನಿಯಾಮಕತ್ವವನ್ನು ಎಚ್ಚರಿಸುತ್ತದೆ. ಉಪಾಧಿ ಭೇದದಿಂದ ಆಕಾಶ ಬೇರೆ ಬೇರೆಯಾಗಿ ಕಾಣುವಂತೆ ಸರ್ವಗತನಾಗಿ ಸರ್ವಾಂತರ್ಯಾಮಿಯಾದ ಭಗವಂತ ಆಯಾಯಾ ಹೆಸರಿನಿಂದ ಕರೆಯಲ್ಪಡುವವನಾಗಿದ್ದಾನೆ. ಅವ ಅನ್ಯಾಯ ಮಾಡಿದ. ಇವ ಉಪಕರಿಸಿದ. ಆತ ದ್ವೇಷಿ ಈತ ಮಿತ್ರ ಎಂಬುದಾಗಿ ಆ ಶರೀರದೊಳಗಿರುವ ಜೀವನನ್ನು ಮಾತ್ರ ಗುರುತಿಸುತ್ತೇವೆ. ನಮ್ಮ ಪ್ರಾರಬ್ಧಕ್ಕನುಗುಣವಾಗಿ ಇತರರಿಂದ ಉಪಕಾರವನ್ನೋ ಉಪದ್ರವವನ್ನೋ ಮಾಡಿಸುವ ಸರ್ವನಿಯಾಮಕನಾದ ಸರ್ವಸಮನಾದ ಭಗವಂತನನ್ನು ಮರೆಯುವುದೇ ದುಃಖದ ಮೂಲ. ಇದು ಶ್ಲೋಕದ ಭಾವಾರ್ಥ.

ಮಾರ್ಕಂಡೇಯ ಪುರಾಣದಲ್ಲಿ ಅಲರ್ಕನಿಗೆ ಮದಾಲಸೆ ಮಾಡಿದ ಧರ್ಮೋಪದೇಶ ಮತ್ತು ದತ್ತಾತ್ರೇಯ ಮಾಡಿದ ಆಧ್ಯಾತ್ಮಿಕ ಉಪದೇಶಗಳು ವಿಸ್ತಾರವಾಗಿ ಹೆಣೆಯಲ್ಪಟ್ಟಿವೆ. ಅತ್ಯಂತ ಮಹತ್ವದ್ದು ಆಗಿದೆ. ಇಲ್ಲಿ ಪ್ರಾಣಾಯಾಮದ ಮಹತ್ವ, ಪ್ರಾಣಾಯಾಮದ ವಿಧಾನ. ಅದರ ಫಲ. ವಿಪರೀತ ಪರಿಣಾಮ. ಅಣಿಮಾದಿ ಯೋಗಸಿದ್ಧಿಗಳು. ಯೋಗಿಚರ್ಯ, ಪ್ರಣವೋಪಾಸನೆ, ದುಷ್ಟಾರಿಷ್ಟಗಳು. ಆ ಅರಿಷ್ಟಗಳ ಪರಿಹಾರೋಪಾಯಗಳೇ ಮುಂತಾದ ವಿಚಾರಗಳು ಪ್ರಸ್ತುತವಾಗಿವೆ.

ಮುಂದೆ ದತ್ತೋಪದೇಶದಿಂದ ಪ್ರಭಾವಿತನಾದ ಅಲರ್ಕ ಮಗನಿಗೆ ರಾಜ್ಯ ಒಪ್ಪಿಸಿ ಸನ್ಯಾಸಿಯಾಗಿ ರಾಜಯೋಗಿಯಾದ. **'ಯೋಗಾನ್ನಾಸ್ತಿ ಪರಂ ಸುಖಂ'** (ಭಗವದ್ಯೋಗಕ್ಕಿಂತ ಮೇಲಿನ ಸುಖ ಇಲ್ಲವೇ ಇಲ್ಲ) ಇದು ಅವನ ಅನುಭವದ ಉದ್ಗಾರ.

ಹೀಗೆ ಸುಮತಿ ತನ್ನ ತಂದೆಗೆ ಹೇಳಿ ತಪಸ್ಸಿಗೆ ತೆರಳಿದ. ಮಗನಿಂದ ತಿಳುವಳಿಕೆ ಪಡೆದ ತಂದೆಯೂ ಸನ್ಯಾಸಿಯಾಗಿ ಎತ್ತರಕ್ಕೇರಿದ. ಹೀಗೆಂದು ಗೃಧ್ರ ಪಕ್ಷಿಗಳು ಜೈಮಿನ್ಯಾಚಾರ್ಯರಿಗೆ ತಿಳಿಸಿ ಮೌನವಾದವು. ಪಕ್ಷಿಗಳ ಅದ್ಭುತ ಮೇಧಾಶಕ್ತಿಗೆ ತಲೆದೂಗಿದ ಜೈಮಿನ್ಯಾಚಾರ್ಯರು ಪುನಃ ಬ್ರಹ್ಮಾಂಡೋತ್ಪತ್ತಿಯ ಬ್ರಹ್ಮಾಂಡದ ಆಯುಷ್ಯ, ಪೃಥ್ವಿ ಸಂಚಾರ, ಮನ್ವಂತರಗಳು, ಭೂಗೋಳ ಖಗೋಳ, ಇತ್ಯಾದಿ ವಿಷಯಗಳ ಬಗ್ಗೆ ಪ್ರಶ್ನಿಸಿದರು. ಅದಕ್ಕೆ ಉತ್ತರವಾಗಿ ಕ್ರೌಷ್ಟಿಕಿ ಎಂಬ ಋಷಿಗೆ ಮಾರ್ಕಂಡೇಯರು ಹೇಳಿದ ವಿಚಾರವನ್ನು ಹೇಳಿದವು.

**(ಸಶೇಷ)**

ಮುಖಪುಟಲೇಖನ

# ಹುಸಿಗೆ ಹಾಕದಿರೋ ಎನ್ನ ಹೃಷೀಕೇಶನೇ

–ಬೊಮ್ಮಾರಬೆಟ್ಟು ಶ್ರೀನಿವಾಸ ಭಟ್ಟ

ಭಗವಂತನ ಕೇಶವಾದಿ ದ್ವಾದಶಮೂರ್ತಿಗಳಲ್ಲಿ ಹತ್ತನೆಯದ್ದಾದ ಹೃಷೀಕೇಶರೂಪವು ಭಾದ್ರಪದ ಮಾಸದ ನಿಯಾಮಕ ದೇವತೆ. ಶ್ರೀಹೃಷೀಕೇಶರೂಪಿ ಪರಮಾತ್ಮನು ಮೇಲಿನ ಬಲಗೈಯಲ್ಲಿ ಚಕ್ರವನ್ನು ಎಡಗೈಯಲ್ಲಿ ಪದ್ಮವನ್ನು ಕೆಳಗಿನ ಎಡಗೈಯಲ್ಲಿ ಶಂಖವನ್ನು ಬಲಗೈಯಲ್ಲಿ ಗದೆಯನ್ನು ಧರಿಸಿರುವನು ಎಂದು ಶ್ರೀಮಧ್ವಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ತಿಳಿಸಿದ್ದಾರೆ. ಹೃಷೀಕೇಶ ಶಬ್ದದ ಅರ್ಥವನ್ನು ಈ ರೀತಿಯಾಗಿ ತಿಳಿಯಬಹುದಾಗಿದೆ.

**ಹೃಷೀಕಾಣಾಂ ಈಶಃ ಹೃಷೀಕೇಶಃ:–** ಹೃಷೀಕ ಶಬ್ದಕ್ಕೆ ಇಂದ್ರಿಯ ಎಂದು ಅರ್ಥ. ಶಬ್ದನಿರ್ಣಯದಲ್ಲಿ **"ವಧ್ರಯಸ್ತ್ವಿಂದ್ರಿಯಾಣ್ಯಾಹುಃ ಹೃಷೀಕಾಣೀತಿ ಚಾಚ್ಯುತ"** ಎಂದು ಇಂದ್ರಿಯಗಳಿಗೆ ಹೃಷೀಕ ಎಂಬುದಾಗಿ ಹೆಸರಿಸಿದ್ದಾರೆ. ಹಾಗೆಯೇ ಶ್ರೀಮದ್ಭಾಗವತ ಮಹಾಪುರಾಣದ ರಚಯಿತೃಗಳಾದ ಶ್ರೀವೇದವ್ಯಾಸರೂ ಕೂಡ ಭಾಗವತದಲ್ಲಿ **"ನಮೇ ಹೃಷೀಕಾಣಿ ಪತಂತ್ಯಸತ್ಪಥೇ"** ಎಂಬುದಾಗಿ ಇಂದ್ರಿಯ ಎಂಬ ಅರ್ಥದಲ್ಲಿ ಹೃಷೀಕ ಎಂಬ ಶಬ್ದವನ್ನು ಉಪಯೋಗಿಸಿದ್ದಾರೆ. ಆದ್ದರಿಂದ ಹೃಷೀಕ ಶಬ್ದಕ್ಕೆ ಇಂದ್ರಿಯಗಳು ಎಂಬ ಅರ್ಥ ತಿಳಿದುಬರುತ್ತದೆ. ಹೃಷೀಕಾಣಾಂ=ಇಂದ್ರಿಯಗಳಿಗೆ ಈಶಃ=ಒಡೆಯನಾದ್ದರಿಂದ ಭಗವಂತನಿಗೆ ಹೃಷೀಕೇಶ ಎಂಬ ಹೆಸರು. ಅಂದರೆ ನಮ್ಮೆಲ್ಲರ ಇಂದ್ರಿಯದೊಳಗಿದ್ದುಕೊಂಡು ಅವುಗಳನ್ನು ನಿಯಂತ್ರಿಸುವವನು ಎಂದು ಅರ್ಥ. ಈ ಅಭಿಪ್ರಾಯವು **"ಯಃ ಪ್ರಾಣೇ ತಿಷ್ಠನ್ ಪ್ರಾಣಾದಂತರಃ ಯಂ ಪ್ರಾಣೋ ನವೇದ"** ಎಂಬ ಬೃಹದಾರಣ್ಯಕೋಪನಿಷತ್ತಿನ ವಾಕ್ಯದಲ್ಲಿ ಅಭಿವ್ಯಕ್ತವಾಗಿದೆ.

**ಹೃಷೀಕಾಣಿ ಇಂದ್ರಿಯಾಣ್ಯಾಹುಃ ತೇಷಾಮೀಶೋ ಯತೋ ಭವಾನ್।**

**ಹೃಷೀಕೇಶಃ ತತೋ ವಿಷ್ಣೋ ಖ್ಯಾತೋ ದೇವೇಷು ಕೇಶವ॥**

ಎಂಬ ಹರಿವಂಶಪುರಾಣದ ವಾಕ್ಯದಲ್ಲಿಯೂ ಕೂಡ ಭಗವಂತನಿಗೆ ಹೃಷೀಕೇಶಶಬ್ದವಾಚ್ಯತ್ವವು ಇದೇ ಪ್ರಕಾರವಾಗಿ ಬಣ್ಣಿಸಲ್ಪಟ್ಟಿದೆ.

2. **ಹೃಷ್+ಈ+ಕ+ಈಶ:–** ಹೃಷ್=ನಿತ್ಯ ಮುಕ್ತಳಾದ, ಸುಖಸ್ವರೂಪಳಾದ, ಈ=ಲಕ್ಷ್ಮಿಯ, ಕ=ಸುಖಕ್ಕೆ ಈಶ=ಒಡೆಯನಾದವನು ಅಂದರೆ ಸದಾ ಸುಖಸ್ವರೂಪಳಾದ

ಲಕ್ಷ್ಮಿಗೂ ಸುಖವನ್ನು ಇತ್ತವನು ಎಂದು ಅರ್ಥ.

ಕನಕದಾಸರು **ಹುಸಿಯನಾಡಿ ಹೊಟ್ಟೆಹೊರೆವೆ ವಿಷಯದಲ್ಲಿ ರಸಿಕನೆಂದು ಹುಸಿಗೆ ಹಾಕದಿರೊ ಎನ್ನ ಹೃಷೀಕೇಶನೇ।** ಎಂದು ಸ್ತುತಿಸಿದ್ದಾರೆ. ಮಾನವರು ಹೊಟ್ಟೆಯನ್ನು ತುಂಬಿಸಿಕೊಳ್ಳುವುದಕೋಸ್ಕರ ಅಸತ್ಯಾದಿ ಅಧರ್ಮ ಮಾರ್ಗವನ್ನು ಅನುಸರಿಸುವುದು ಸರ್ವೇ ಸಾಮಾನ್ಯ. ಭಗವಂತ ಕರುಣಿಸಿರುವ ಅಮೂಲ್ಯ ಸಂಪತ್ತುಗಳಾದ ಕರ್ಮೇಂದ್ರಿಯ ಹಾಗೂ ಜ್ಞಾನೇಂದ್ರಿಯಗಳನ್ನು ಕೂಡ ವಿಷಯಪದಾರ್ಥಗಳ ಭೋಗಕ್ಕಾಗಿಯೇ ಉಪಯೋಗಿಸುತ್ತಾರೆ. ಆದರೆ ಆ ಇಂದ್ರಿಯಾದಿಗಳನ್ನು ಅದಕ್ಕೆ ಆಧಾರವಾದ ದೇಹವನ್ನು ಕರುಣಿಸಿದಂತಹ ಭಗವಂತನನ್ನು ಮರೆತೇ ಬಿಡುತ್ತಾರೆ. ಈ ದೇಹಾದಿಗಳನ್ನು ದಯಪಾಲಿಸಿದ ಭಗವಂತನಿಗೆ ಕೃತಜ್ಞತೆಗಳನ್ನು ಅರ್ಪಿಸಿದಿದ್ದರೆ ಭಗವಂತ ನಮಗೆ ಸತ್ಯಾದಿ ಲೋಕವನ್ನು ಕರುಣಿಸಲಾರ. ದುರ್ಗತಿಯನ್ನೇ ಕೊಡುತ್ತಾನೆ. ಆದ್ದರಿಂದಲೇ ಕನಕದಾಸರು ಇಂದ್ರಿಯ ನಿಯಾಮಕನಾದ ಹೃಷೀಕೇಶನನ್ನು ಪ್ರಾರ್ಥಿಸುತ್ತಾ "ನಾನು ಹೊಟ್ಟೆ ತುಂಬಿಸುವುದಕೋಸ್ಕರ ಅನೇಕ ಸುಳ್ಳುಗಳನ್ನು ಹೇಳಿದ್ದೇನೆ. ಸತ್ಕರ್ಮಕ್ಕಾಗಿ ಉಪಯೋಗಿಸಬೇಕಾದ ಇಂದ್ರಿಯಾದಿಗಳನ್ನು ವಿಷಯಪದಾರ್ಥದ ಭೋಗಕ್ಕಾಗಿಯೇ ಉಪಯೋಗಿಸಿದ್ದೇನೆ. ಅದಕ್ಕಾಗಿ ನನಗೆ ದುರ್ಗತಿಯನ್ನು ಕೊಡಬೇಡ. ಕರುಣಾಶಾಲಿಯಾದ ನೀನು ಅದೆಲ್ಲವನ್ನು ಕೂಡ ಮನ್ನಿಸಿ ಇನ್ನು ಮುಂದಾದರೂ ಸತ್ಯಾದಿ ಧರ್ಮಮಾರ್ಗದಲ್ಲಿ ನಡೆಯುವಂತೆ ಮಾಡು. ಇಂದ್ರಿಯಗಳನ್ನೆಲ್ಲಾ ನಿನ್ನ ಪೂಜೆಗೋಸ್ಕರ ಉಪಯೋಗಿಸುವಂತೆ ಪ್ರೇರೇಪಿಸು" ಎಂದು ಪ್ರಾರ್ಥಿಸಿದ್ದಾರೆ. ಆದ್ದರಿಂದ ನಾವು ನಮ್ಮ ಇಂದ್ರಿಯಗಳನ್ನೆಲ್ಲಾ ಭಗವಂತನಿಗೋಸ್ಕರ ಮೀಸಲಿಟ್ಟರೆ ಭಗವಂತ ನಮಗೆ ಸದ್ಗತಿಯನ್ನೇ ಪಾಲಿಸುತ್ತಾನೆ. ಆದ್ದರಿಂದ ಇಂದ್ರಿಯಗಳಿಗೆ ನಿಯಾಮಕನಾದ ಹೃಷೀಕೇಶನನ್ನು ನಮಗೆ ನಮ್ಮೆಲ್ಲ ಇಂದ್ರಿಯಗಳನ್ನು ನಿನಗೆ ಅರ್ಪಿಸುವಂತಹ ಬುದ್ಧಿಯನ್ನು ಕರುಣಿಸು ಎಂದು ಪ್ರಾರ್ಥಿಸೋಣ.

---

**Mobile ಪಂಚಾಂಗ**

ಪಾಶ್ಚಾತ್ಯ ಸಂಸ್ಕೃತಿಯ ಸುಳಿಯಲ್ಲಿ ಸಿಕ್ಕಿರತಕ್ಕ ಯುವಜನಾಂಗಕ್ಕೆ ಸನಾತನ ಸಂಸ್ಕೃತಿಯನ್ನು ಪರಿಚಯಿಸುವ ಮೊದಲ ಹೆಜ್ಜೆಯಾಗಿ ಪಂಚಾಂಗದ ಪರಿಚಯವನ್ನು ಮಾಡಿಸಿಕೊಡಬೇಕು ಎನ್ನುವ ಉದ್ದೇಶದಿಂದ ಶ್ರೀಮಠದ ದೃಗ್ಗಣಿತ ಪಂಚಾಂಗವನ್ನು ಇನ್ನು ಮುಂದೆ ಮಾಧ್ವ ಬಂಧುಗಳು ಉಚಿತವಾಗಿ ತಮ್ಮ ತಮ್ಮ mobile ಗಳಲ್ಲಿ ಪಡೆಯಬಹುದು. ಇದರಲ್ಲಿ ತಿಥಿ–ವಾರ–ನಕ್ಷತ್ರ–ದಿನವಿಶೇಷಗಳು ಇರುತ್ತದೆ. ಇದನ್ನು ಪಡೆಯಬೇಕಾದರೆ

ON PANCHANGA ಎಂದು ಟೈಪ್ ಮಾಡಿ ಈ 09870807070 ಇದಕ್ಕೆ sms ಮಾಡಿ.

ಇದು ಸಂಪೂರ್ಣ ಉಚಿತವಾದ ಸೇವೆಯಾಗಿರುತ್ತದೆ. ಹೆಚ್ಚಿನ ವಿವರಕ್ಕೆ ಸಂಪರ್ಕಿಸಿ.

info@palimarumatha.org, mobile@palimarumatha.org

# ಹರಿಕಥಾಮೃತಸಾರ

## ಶ್ರೀ ಜಗನ್ನಾಥದಾಸರ ಜೀವನ ಬೆಳದಿಂಗಳು

-ವಿದ್ವಾನ್ ಅಪ್ಪಣಾಚಾರ್ಯ, ಕೌತಾಳಂ

ಬ್ಯಾಗವಾಟ ಚಿಕ್ಕ ಗ್ರಾಮ. ಅನೇಕ ಶ್ರೋತ್ರಿಯ ಕುಟುಂಬಗಳಿಂದ ಮಾನ್ವಿಕ್ಷೇತ್ರದಿಂದ ಸುಮಾರು ಇಪ್ಪತ್ತೈದು ಕಿ.ಲೋ ಮೀಟರುಗಳ ದೂರದಲ್ಲಿರುವುದು. ಈ ಗ್ರಾಮದ ಕರಣೀಕರು ನರಸಿಂಹದಾಸರು. ರಾಯರ ಮಠದ ಶ್ರೀ ಉಪೇಂದ್ರ ತೀರ್ಥರಿಂದ ಶಾಸ್ತ್ರಾಭ್ಯಾಸ ಮಾಡಿ ಸಾಧನೆಯ ಮಾರ್ಗದಲ್ಲಿ ಮಹಾ ತಪಸ್ವಿಗಳಂತೆ ಜೀವನ ನಡೆಸುತ್ತಿದ್ದ ಪುಣ್ಯ ಜೀವಿಗಳು. ಇವರಿಗೆ ದೈವದತ್ತವಾಗಿ ಬಂದ ಸಂಪತ್ತು ಮಧುರವಾದ ಕಂಠಸ್ವರ. ಹರಿದಾಸರ ಕೃತಿಗಳನ್ನು ನರಸಿಂಹದಾಸರು ಹಾಡಿದರೆ **'ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂಫಣೀ'** ಎಂಬ ಆರ್ಯೋಕ್ತಿ ಸತ್ಯವಾಗುತ್ತಿತ್ತು. ಜನರು ದಾಸರ ಸಂಗೀತಕ್ಕೆ ಮೈಮರೆಯುತ್ತಿದ್ದರು. ಉಪೇಂದ್ರತೀರ್ಥರು ಇವರ ಗಾನ ಮಾಧುರ್ಯಕ್ಕೆ ಮನ ಸೋತು ಇವರನ್ನು 'ಪರಾವಸು ಗಂಧರ್ವ' ರೆಂದು ಹೊಗಳುತ್ತಿದ್ದರು.

ಈ ಎಲ್ಲ ಸದ್ಗುಣಗಳಿಗೆ ಮುಕುಟವಿಟ್ಟಂತೆ ದಾಸರು ದಯಾರ್ದ್ರ ಹೃದಯಿಗಳು. ಕಷ್ಟದಲ್ಲಿದ್ದ ಜನರಿಗೆ ಸಹಾಯ ಮಾಡುವುದರಲ್ಲಿ ಇವರದು ಎತ್ತಿದ ಕೈ. ಹಸಿದು ಅನ್ನಬೇಕೆಂದು ಬಂದ ವ್ಯಕ್ತಿಗಳಿಗೆ ಮೃಷ್ಟಾನ್ನ ನೀಡುವ ಉದಾರ ಸ್ವಭಾವ ಇವರದ್ದು. ಹರಿದಾಸ ಸಾಹಿತ್ಯವನ್ನು ಬಾಲ್ಯದಿಂದಲೇ ಮೈಗೂಡಿಸಿಕೊಂಡ ನರಸಿಂಹದಾಸರು ಪುರಂದರದಾಸಾದಿ ಹರಿದಾಸರ ಆರಾಧನೆಗಳನ್ನೂ ವಿಜೃಂಭಣೆಯಿಂದ ಮಾಡುತ್ತಿದ್ದರು.

ಬೇಡಿ ಬಂದ ವ್ಯಕ್ತಿಗಳಿಗೆ ಕೈ ತುಂಬ ಸಹಾಯ ಮಾಡುತ್ತಿದ್ದ ನರಸಿಂಹದಾಸರು, ಆಗಾಗ ತಮ್ಮಲ್ಲಿದ್ದ ಸರಕಾರದ ಹಣವನ್ನು ಸಹ ಖರ್ಚು ಮಾಡುತ್ತಿದ್ದರು. ಆದರೆ ಪುನಃ ಅದನ್ನೂ ಸರ್ಕಾರದ ಬೊಕ್ಕಸಕ್ಕೆ ಸೇರಿಸುತ್ತಿದ್ದರು. ನರಸಿಂಹದಾಸರ ಜೀವನದಲ್ಲಿ ಮೋಸ, ವಂಚನೆ, ಅಹಂಕಾರ ಪ್ರತಿಷ್ಠೆಗಳು ಎಂದು ಇಣುಕಿ ನೋಡಿದವುಗಳಲ್ಲ. ಇದರಿಂದಾಗಿ ಬ್ಯಾಗವಾಟದ ಗ್ರಾಮದಲ್ಲಿ ಮಾತ್ರವಲ್ಲದೆ ಸುತ್ತಲಿನ ಎಲ್ಲ ಊರುಗಳಲ್ಲಿ ಪ್ರಸಿದ್ಧರಾಗಿದ್ದರು.

ಬ್ಯಾಗವಾಟದ ಗ್ರಾಮದ ಪುರೋಹಿತರಾದ ಹನುಮಂತಾಚಾರ್ಯರಿಗೆ ಮಾತ್ರ ಅದೇಕೋ ನರಸಿಂಹದಾಸರ ಬಗ್ಗೆ ಅಸೂಯೆ. ನರಸಿಂಹದಾಸರ ಕೀರ್ತಿಯನ್ನು ಸಹಿಸದ ಆಚಾರ್ಯರು ಸರಕಾರಕ್ಕೆ 'ನರಸಿಂಹದಾಸರು ಸರಕಾರದ ದುಡ್ಡನ್ನು ದುರ್ವಿನಿಯೋಗ ಮಾಡುತ್ತಿರುವದಾಗಿಯೂ

ತಮ್ಮ ಸ್ವಾರ್ಥಕ್ಕೆ ಉಪಯೋಗಿಸುತ್ತಿರುವುದಾಗಿಯೂ' ದೂರು ಸಲ್ಲಿಸಿದರು.

ನವಾಬನಿಂದ ವಿಚಾರಣೆಗೆ ಆದೇಶ ಹೊರಟಿತು. ಬಂದ ವಿಚಾರಣಾಧಿಕಾರಿ, ಜನರೆಲ್ಲರೂ ನರಸಿಂಹದಾಸರನ್ನು ಗೌರವಿಸುತ್ತಿರುವುದನ್ನು, ನರಸಿಂಹದಾಸರ ಬಗ್ಗೆ ಅವರ ಹೇಳಿಕೆಗಳನ್ನು ತಿಳಿದುಕೊಳ್ಳುವುದರೊಟ್ಟಿಗೆ ಸ್ವತಃ ನರಸಿಂಹದಾಸರ ದಯಾರ್ದ್ರ ಹೃದಯವನ್ನು ದೀನದಲಿತರಲ್ಲಿ ಅವರು ತೋರುತ್ತಿರುವ ಕರುಣೆಯನ್ನು ಉದ್ಯೋಗದಲ್ಲಿ ಅವರು ತೋರುತ್ತಿರುವ ಸತ್ಪ್ರವೃತ್ತಿಯನ್ನು ಕಂಡು ನರಸಿಂಹದಾಸರಿಗೆ ತಾನೇ ಶರಣಾಗತನಾಗಿ ಅವರಿಂದ ಆಶೀರ್ವಾದವನ್ನು ಪಡೆದನು. ಈ ಸಂದರ್ಭದಲ್ಲಿ ಹನುಮಂತಾಚಾರ್ಯರು ಎಸಗುತ್ತಿರುವ ತಪ್ಪನ್ನು ಸಹ ದಾಸರಿಗೆ ತಿಳಿಸಿದರು. ಎಲ್ಲೆಡೆಯಲ್ಲಿಯೂ ಭಗವಂತನ ವ್ಯಾಪ್ತಿಯನ್ನು ಅವನ ಪ್ರೇರಣಾಶಕ್ತಿಯನ್ನು ಜೀವಿಯ ಅಸ್ವಾತಂತ್ರ್ಯವನ್ನೂ ಚೆನ್ನಾಗಿ ಅರಿತಿದ್ದ ನರಸಿಂಹದಾಸರು ಹನುಮಂತಾಚಾರ್ಯರ ಬಗ್ಗೆ ಯಾವ ತರಹದ ಕೋಪತಾಪಗಳನ್ನು ಪ್ರದರ್ಶಿಸಲಿಲ್ಲ. ಶತ್ರುಗಳನ್ನೂ ಸಹ ಪ್ರೇಮಿಸುವ ಸ್ವಭಾವ ದಾಸರದು.

ಈ ಎಲ್ಲವನ್ನೂ ಚೆನ್ನಾಗಿ ತಿಳಿದಿದ್ದ ಉಪೇಂದ್ರತೀರ್ಥರು ತಮ್ಮ ಶಿಷ್ಯನನ್ನು ಮನಸಾರ ಹೊಗಳಿ, ಗರುಡಾರೂಢನಾಗಿದ್ದ ನರಸಿಂಹನ ಮೂರು ವಿಗ್ರಹಗಳನ್ನು ದಾಸರಿಗೆ ಕರುಣಿಸಿಕೊಟ್ಟರು. ಈ ಮೂರು ವಿಗ್ರಹಗಳಲ್ಲಿ ಒಂದು ವಿಗ್ರಹ ಪ್ರಸ್ತುತ ಮಾನವಿಯಲ್ಲಿ ಜಗನ್ನಾಥದಾಸರ ಗರ್ಭಾಲಯದಲ್ಲಿದೆ. ಎರಡನೇ ವಿಗ್ರಹ ಹರಪ್ಪನ ಹಳ್ಳಿಯಲ್ಲಿರುವ ಜಗನ್ನಾಥದಾಸರ ಶಿಷ್ಯರ ವಂಶಕ್ಕೆ ಸೇರಿದ, ವೈದ್ಯರ ಮನೆಯಲ್ಲಿದೆ. ಮೂರನೇ ವಿಗ್ರಹವು ಎಲ್ಲಿದೆ ಎಂಬುದು ಇಲ್ಲಿಯವರೆಗೂ ತಿಳಿದು ಬಂದಿಲ್ಲ.

ನರಸಿಂಹದಾಸರು ದಾಸ ಜೀವನದೊಟ್ಟಿಗೆ, ಕೃತಿಗಳನ್ನೂ ಸಹ ರಚಿಸಿರುವರು. ಇವರು ವಾಗ್ಗೇಯಕಾರರೂ ಹೌದು. ಎಲ್ಲದರಿಂದಲೂ ಪೂರ್ಣರಾಗಿ ತೃಪ್ತಿಯ ಜೀವನವನ್ನು ನಡೆಸುತ್ತಿದ್ದ ದಾಸರಿಗೆ ಮಕ್ಕಳಿಲ್ಲವೆಂಬುದೇ ಒಂದು ಕೊರತೆಯಾಗಿತ್ತು. ಸತ್ಪುತ್ರನನ್ನು ಕರುಣಿಸೆಂದು ಕುಲದೈವ ಶ್ರೀನಿವಾಸನಲ್ಲಿ ಪತ್ನೀ ಸಮೇತರಾಗಿ ಸೇವೆ ಸಲ್ಲಿಸಿದರು. ಶ್ರೀನಿವಾಸನು ಪ್ರೀತನಾಗಿ ಕ್ರಿ.ಶಕೆ 1727ರಲ್ಲಿ ದಂಪತಿಗಳಿಗೆ ಒಂದು ಗಂಡು ಮಗು ಹುಟ್ಟಿತು. ಶ್ರೀನಿವಾಸನ ಪ್ರಸಾದದಿಂದ ಹುಟ್ಟಿದ ಮಗುವಿಗೆ ದಾಸರು 'ಶ್ರೀನಿವಾಸ' ನೆಂದೇ ನಾಮಕರಣ ಮಾಡಿದರು. ಮಗು ಶ್ರೀನಿವಾಸನಿಗೆ ಚೌಲೋಪನಯನಾದಿ ಸಂಸ್ಕಾರಗಳು ಸಾಂಗವಾಗಿ ನಡೆದವು.

ಅಂದಿನ ಕಾಲದಲ್ಲಿ ಶ್ರೀಗುರುರಾಘವೇಂದ್ರ ಮಠದ ಆಸ್ಥಾನ ವಿದ್ವಾಂಸರು ಬಲರಾಮಾಚಾರ್ಯರು ಶ್ರೇಷ್ಠ ವಿದ್ವನ್ಮಣಿಗಳು. ಷಟ್ ಶಾಸ್ತ್ರಗಳಲ್ಲಿ ಪೂರ್ಣ ಪಾಂಡಿತ್ಯವನ್ನು ಪಡೆದವರು. ವೇದಾಂತವನ್ನು ಅನುಷ್ಠಾನದಲ್ಲಿಟ್ಟುಕೊಂಡವರು.

ನರಸಿಂಹದಾಸರು ತಮ್ಮ ಮಗ ಶ್ರೀನಿವಾಸನನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬಲರಾಮಾಚಾರ್ಯರ ಪಾದ ಸನ್ನಿಧಿಗೆ ಒಪ್ಪಿಸಿದರು. ಶಿಷ್ಯ ವತ್ಸಲರಾದ ಬಲರಾಮಾಚಾರ್ಯರು ಶ್ರೀನಿವಾಸನನ್ನೂ ಮಹಾ ಪಂಡಿತೋತ್ತಮನನ್ನಾಗಿ ಮಾಡಿದರು. ಶ್ರೀನಿವಾಸಾಚಾರ್ಯರ ವಿದ್ಯಾಭ್ಯಾಸವು ಪೂರ್ತಿಯಾಗುತ್ತಿದ್ದಂತೆ ಸಂತತ ವೇದಾಂತ ಚಿಂತನೆಯಿಂದ ಪಕ್ವವು, ವೈರಾಗ್ಯೋಪೇತವಾದ ಮನಸ್ಸುಳ್ಳ ಬಲರಾಮಾಚಾರ್ಯರು ಸನ್ಯಾಸಾಶ್ರಮವನ್ನು ಸ್ವೀಕರಿಸಿದರು.

ಶ್ರೀ ಗುರುರಾಘವೇಂದ್ರರು **'ಸಪ್ತಮೋ ಮತ್ಸಮೋ ಭವಿಷ್ಯತಿ'** ಎಂದು ಹೇಳಿದ್ದರಂತೆ. ಗುರುರಾಜರಿಂದ ಏಳನೇಯವರಾಗಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದ ಮಹಾ ಪೂಜ್ಯ ಜೀವಿಗಳು ಬಲರಾಮಾಚಾರ್ಯರು. ಆಶ್ರಮ ನಾಮ 'ವರದೇಂದ್ರ ತೀರ್ಥರು'. ಅಂದಿನ ಸಮಾಜದಲ್ಲಿ ವರದೇಂದ್ರರು ಎರಡನೇಯ ರಾಘವೇಂದ್ರರಾಗಿ ಪ್ರಸಿದ್ಧರಾಗಿದ್ದರು. ಆಸೇತುಹಿಮಾಚಲ ಸಂಚರಿಸಿ ಧರ್ಮ ಸ್ಥಾಪನೆಯನ್ನು ಮಾಡಿದ ಧೀಮಂತ ಯತಿಗಳು. ಹರಿದಾಸ ಸಾಹಿತ್ಯವನ್ನು ಬೆಳಗಿಸಿದ ತಪಸ್ವಿಗಳು.

ಯತಿಗಳ ಪರಂಪರೆಯಲ್ಲಿ ಸತ್ಯಬೋಧರ ನಂತರದಲ್ಲಿ ಹರಿದಾಸರೊಡನೆ ಸಂಪರ್ಕ ಬೆಳಸಿಕೊಂಡ ಮಹಿತಾತ್ಮರು ವರದೇಂದ್ರರು. ಹರಿದಾಸರಿಂದ ಹೊಗಳಿಸಿಕೊಂಡ ಯತಿಗಳಲ್ಲಿ ರಾಘವೇಂದ್ರರು ಮೊದಲಿಗರಾದರೆ, ಎರಡನೆಯ ಸ್ಥಾನ ವರದೇಂದ್ರರದು. ಜಗನ್ನಾಥದಾಸರು ಪ್ರಾಣೇಶದಾಸರು, ಗುರುಜಗನ್ನಾಥದಾಸರು ವರದೇಶವಿಠ್ಠಲದಾಸರೇ ಮೊದಲಾದ ದಾಸಾಗ್ರೇಸರರು ವರದೇಂದ್ರರನ್ನು ತಮ್ಮ ಅನೇಕ ಸಂಸ್ಕೃತ ಕನ್ನಡ ಕೃತಿ ಪುಷ್ಪಗಳಿಂದ ಅರ್ಚಿಸಿರುವರು. ★

---

(.......10ನೇ ಪುಟದಿಂದ)

ನಾನು ಮಾಡಿದುದೇನು? ನನ್ನವರೆಂದುಕೊಂಡು ಮೋಹದಲ್ಲಿ ಬಿದ್ದೆ.

## ನೀ ಕೈವಿಡಿದು ಮುದದಲಿ ಬಿಡದೆ ರಕ್ಷಿಸು ನಮ್ಮನನವರತ

ಇದೀಗ ನನಗೆ ಎಚ್ಚರವಾಗುತ್ತಿದೆ. ಮೋಹ ಸುರಿಯುತ್ತಿದೆ. ನಿಮ್ಮಡಿಯ ಭಜನೆ ಬೇಕೆನಿಸುತ್ತಿದೆ. ಎಲ್ಲವನ್ನೂ ನಿನಗೊಪ್ಪಿಸುತ್ತಿದ್ದೇನೆ. ನೀನೇ ನನಗೆ ಎಲ್ಲವೂ. ನನ್ನೆಲ್ಲ ತಪ್ಪನ್ನು ಮನ್ನಿಸಿ ಕೈ ಹಿಡಿದು ಸಂತೋಷದಿಂದ ನಿನ್ನವನೆಂದು ಸ್ವೀಕರಿಸು. ಬಿಡದೆ ಸದಾ ರಕ್ಷಿಸು.

# ‘ಮಿತವಾದ ಶಬ್ದ-ಅಮಿತವಾದ ಅರ್ಥ’

## ಇದು ಆಚಾರ್ಯರ ಕೃತಿಯ ವೈಶಿಷ್ಟ್ಯ

–ಅನಂತಕೃಷ್ಣಾಚಾರ್ಯ

‘ಗುರುಗಳೇ, ವಿಷ್ಣು ದ್ವೇಷಿಗಳ; ತತ್ವವಾದ ದ್ವೇಷಿಗಳ ತಲೆಗಳಲ್ಲಿ ಕಾಲಿಟ್ಟು ಮೆಟ್ಟಿ ನಿಂತ ಒಬ್ಬಂಟಿ ಹೋರಾಟಗಾರನಾದ ‘ಶ್ರೀವಿಷ್ಣುತತ್ವನಿರ್ಣಯ’ವೆಂಬ ಪಾರ್ಥನನ್ನು ಯಾರು ತಾನೇ ಗೌರವಿಸದವನು?

ತ್ರಿವಿಕ್ರಮರು ಈ ಮಾತಿನಲ್ಲಿ ಆಚಾರ್ಯರಿಂದ ರಚಿತವಾದ ‘ಶ್ರೀವಿಷ್ಣುತತ್ವನಿರ್ಣಯ’ವನ್ನು ಪಾರ್ಥನಿಗೆ ಹೋಲಿಸಿದ್ದಾರೆ. ಪಾರ್ಥನೆಂದರೆ ಸಾಮಾನ್ಯವಾಗಿ ಅರ್ಜುನನೆಂದು ಪ್ರಸಿದ್ಧಿ ಇದ್ದರೂ ಭೀಮಸೇನನೂ ಪಾರ್ಥನೇ ಅಲ್ಲವೆ. ವಿಷ್ಣುದ್ವೇಷಿಗಳಾದ ದುರ್ಯೋಧನಾದಿಗಳ ತಲೆಯ ಮೇಲೆ ಕಾಲಿಟ್ಟು ಮೆಟ್ಟಿ ನರ್ತಿಸಿದ, ಒಬ್ಬಂಟಿಗನಾಗಿ ಹೋರಾಡಿ ಎದುರಾಳಿಗಳನ್ನು ಸದೆ ಬಡಿದ ಆ ಭೀಮಸೇನನನ್ನೇ ತ್ರಿವಿಕ್ರಮಪಂಡಿತರು ಇಲ್ಲಿ ಪಾರ್ಥನೆಂದಿದ್ದಾರೆಂದು ಊಹಿಸಬಹುದು. ‘ತತ್ವನಿರ್ಣಯ’ವು ಆ ಪಾರ್ಥನಂತೆ ನಾಸ್ತಿಕಾದಿ ಪರಮತಗಳನ್ನು ಖಂಡಿಸುವುದರಲ್ಲಿ; ವೇದಪ್ರಾಮಾಣ್ಯವನ್ನು ಸಮರ್ಥಿಸುವುದರಲ್ಲಿ; ವಿಷ್ಣುವಿನ ಪಾರಮ್ಯವನ್ನು ಸ್ಥಾಪಿಸುವುದರಲ್ಲಿ ಸಮರ್ಥವಾಗಿದೆಯೆಂದು ಅಭಿಪ್ರಾಯ.

‘ಗಾಳಿಯಿಂದ ಉತ್ತೇಜಿತವಾದ ಬೆಂಕಿಯ ಕಿಡಿಗಳು ಇಡೀ ಕಾಡನ್ನೇ ಸುಡುವಂತೆ ತಮ್ಮ ವಾದ (ತತ್ವೋದ್ಯೋತ) ಮಾಯವಾದಿದೂಷಣ (ಖಂಡನ); ಉಪಾಧಿದೂಷಣ (ಖಂಡನ); ಮಿಥ್ಯಾತ್ವಾನುಮಾನದೂಷಣ; ತತ್ವವಿವೇಕ, ತತ್ವಸಂಖ್ಯಾನವೇ ಮೊದಲಾದ ಪ್ರಕರಣಗ್ರಂಥಗಳೆಂಬ ಬೆಂಕಿಯ ಕಿಡಿಗಳು ಗಾಳಿದೇವರಾದ ತಮ್ಮಿಂದ ರಚಿತವಾಗಿ ಪರವಾದಿಗಳ ಸಮೂಹವೆಂಬ ಕಾಡನ್ನೇ ಸುಟ್ಟು ಬಿಡುತ್ತವೆ’ ಎಂದು ತ್ರಿವಿಕ್ರಮರ ಹೊಗಳಿಕೆ.

ಶಾಸ್ತ್ರಾರ್ಥಗಳಲ್ಲಿ ಯಾವುದಾದರೊಂದು ವಿಷಯವನ್ನು ಕುರಿತಾದ ಗ್ರಂಥಕ್ಕೆ ಪ್ರಕರಣವೆಂದು ಹೆಸರು. ಆಚಾರ್ಯರಿಂದ ರಚಿತವಾದ ಇಂತಹ ಪ್ರಕರಣಗ್ರಂಥಗಳು ಗಾತ್ರದಲ್ಲಿ ಸಣ್ಣದಿದ್ದರೂ ಪರವಾದಿಗಳನ್ನು ನಿಗ್ರಹಿಸುವಲ್ಲಿ ಸಮರ್ಥವಾಗಿವೆಯೆಂಬ ಅರ್ಥದಲ್ಲಿ ಅವುಗಳನ್ನು ಬೆಂಕಿಯ ಕಿಡಿಗಳಿಗೆ ಹೋಲಿಸಿದ್ದಾರೆ. ವಾಯುದೇವರ ಅವತಾರರಾದ ಆಚಾರ್ಯರಿಂದ ರಚಿತವಾದ್ದರಿಂದ ಅದಕ್ಕಿನ್ನಷ್ಟು ಮಹತ್ವ.

'ಹಿಂದೆ ಶ್ರೀಕೃಷ್ಣನು ತಾನು ದೇವರೆಂದು ತಿಳಿಸಲು ಯಶೋದೆಗೆ ಬಾಯಿಯಲ್ಲಿಯೆ ಬ್ರಹ್ಮಾಂಡವನ್ನು ತೋರುವಂತೆ ತಾವು ವಾಯುದೇವರೆಂದು ತಿಳಿಸಲು 'ಅಣುಭಾಷ್ಯಸಂಗ್ರಹ'ದಲ್ಲಿ ಅನಂತ ಅರ್ಥಗಳನ್ನೇ ತೋರಿಸಿಬಿಟ್ಟಿರಿ. ಆಹಾ ಏನಾಶ್ಚರ್ಯ! ಎಂಬುದು ತ್ರಿವಿಕ್ರಮಪಂಡಿತರ ಗುರುಸ್ತವನ.

'ಅಣುಭಾಷ್ಯ' ಅಥವಾ 'ಸರ್ವಶಾಸ್ತ್ರಾರ್ಥಸಂಗ್ರಹ' ಅಥವಾ 'ಅಣುವೇದಾಂತ ಭಾಷ್ಯ' ವು ಬ್ರಹ್ಮಸೂತ್ರಗಳ ನಾಲ್ಕು ಅಧ್ಯಾಯಗಳ ಅರ್ಥಸಾರವನ್ನು ಒಂದೊಂದು ಪದದಲ್ಲಿ ವಿವರಿಸುವ, ನಿತ್ಯ ಪಾರಾಯಣಕ್ಕೆ ಅನುಕೂಲವಾದ ಆಚಾರ್ಯರ ಪುಟ್ಟಕೃತಿ. ಈ ಕೃತಿಯ ಪದಗಳು ಚಿಕ್ಕದಿರಬಹುದು. ಆದರೆ ಅರ್ಥಮಾತ್ರ ಅನಂತವಾಗಿದೆ ಎಂಬುದು ಅಸಾಧಾರಣ ಪಾಂಡಿತ್ಯವುಳ್ಳ ಪಂಡಿತಾಚಾರ್ಯರ ಉದ್ಗಾರ.

'ಹೇ ಭಗವನ್, ಲೌಕಿಕವಾದ ಶಬ್ದಪ್ರಾಸವುಳ್ಳ ಕಾವ್ಯದ ಪರಿಯನ್ನು ತೋರುವವರಾಗಿ ಜಗತ್ತನ್ನೇ ವಿಸ್ಮಯಗೊಳಿಸುವ, ಗೋಪ್ಯವಾದ ಭಾರತ ಸಂಕ್ಷಿಪ್ತಸಾರವನ್ನು ರಚಿಸಿದಿರಿ'.

ತ್ರಿವಿಕ್ರಮಪಂಡಿತರ ಈ ಮಾತು 'ಮಹಾಭಾರತತಾತ್ಪರ್ಯ' ಅಥವಾ 'ಯಮಕಭಾರತ' ಗ್ರಂಥದ ಕುರಿತಾಗಿದೆ. ವೈದಿಕ ವಾಙ್ಮಯದಲ್ಲಷ್ಟೆ ಆಚಾರ್ಯರು ಚತುರರು, ಲೌಕಿಕ ಕಾವ್ಯ ಜಗತ್ತಿನಲ್ಲಲ್ಲ ಎಂಬ ಕೆಲವರ ಮಾತಿಗೆ ಉತ್ತರವಾಗಿ 'ಯಮಕ'ದಿಂದ ಕೂಡಿದ ಕೃತಿಯನ್ನು ಆಚಾರ್ಯರು ರಚಿಸಿದರೆಂದು ಅಂಬೋಣ.

ಆಚಾರ್ಯರೇ, ಸಮುದ್ರದಂತಿರುವ ತಮ್ಮಿಂದ ರಚಿತವಾದ ನಾನಾ ಬಗೆಯ ಸುಭಾಷಿತಗಳು, ಸ್ತೋತ್ರಗಳು, ಗಾಥಾ ಮುಂತಾದ ಕೃತಿರತ್ನಗಳನ್ನು ಗಣನೆ ಮಾಡಲು ಸಾಧ್ಯವೆ? ಇಂತಹ ತಮ್ಮ ಅದ್ಭುತವಾದ ಕೃತಿಗಳನ್ನು ಕಂಡು ಇವು ಸಾಮಾನ್ಯ ಕೃತಿಗಳೆಂದು ತಿಳಿಯುವ ಅಲ್ಪಬುದ್ಧಿಯುಳ್ಳವರನ್ನು ಕಂಡು ಸಜ್ಜನರ ಸಭೆಯು ಗಟ್ಟಿಯಾಗಿ ನಗುತ್ತದೆ. ಏಕೆಂದರೆ ತಮ್ಮ ಕೃತಿಗಳು ಮಿತವಾದ ಶಬ್ದಗಳಿಂದ ಕೂಡಿದ್ದರೂ ಅಮಿತವಾದ ಅರ್ಥವುಳ್ಳವುಗಳು. ಸ್ವರ್ಗದ ಚಿಂತಾಮಣಿ ಗಾತ್ರದಲ್ಲಿ ಚಿಕ್ಕದಾದರೂ ಅಮಿತ ಅಭೀಷ್ಟಗಳನ್ನು ಕರುಣಿಸುವುದಿಲ್ಲವೆ?

ಈ ಎಲ್ಲ ಗ್ರಂಥಗಳಿದ್ದರೂ ನಮಗೆ ಇನ್ನೊಂದು ಗ್ರಂಥ ಬೇಕೆಂಬ ಆಸೆ. ಹಿಂದೆ ಇಂದ್ರಾದಿಗಳಿದ್ದರೂ ದೇವತೆಗಳು ತಾರಕಾಸುರ ಸಂಹಾರಕ್ಕೆ ಸುಬ್ರಹ್ಮಣ್ಯನನ್ನು ಬಯಸಲಿಲ್ಲವೆ. ಅರಿಯಲಾಗದ ಆಳವುಳ್ಳ ತಮ್ಮ ಕೃತಿಗಳಲ್ಲಿ ಬಂದ ಯುಕ್ತಿಗಳನ್ನು ತಿಳಿಯಲು ನಮ್ಮ ದಡ್ಡತನದಿಂದಾಗಿ ಸಾಧ್ಯವಾಗಿಲ್ಲ. ಅದರಿಂದ ಆ ಯುಕ್ತಿಗಳನ್ನು ಎತ್ತಿ ತೋರಿಸುವ ಒಂದು ಗ್ರಂಥವನ್ನು ರಚಿಸಬೇಕು' ಎಂದು ತ್ರಿವಿಕ್ರಮಪಂಡಿತರು ಪ್ರಾರ್ಥಿಸಲು ಆಚಾರ್ಯರು

(.....40ನೇ ಪುಟದಲ್ಲಿ)

**ಕಾಳಿಯ ಮರ್ದನನೆಡೆಗೆ ಸಾಗಿದ**

**ಶ್ರೀ ಶ್ರೀ ವಿಬುಧೇಶ ತೀರ್ಥರಿಗೆ ಚರಮಾಂಜಲಿ**

★ ಅದಮಾರು ಮಠದ ಯತಿಪರಂಪರೆಯಲ್ಲಿ ಮೂವತ್ತೆರಡನೆಯ ಯತಿಗಳಾಗಿ ಉಡುಪಿ ಶ್ರೀಕೃಷ್ಣಮುಖ್ಯಪ್ರಾಣರ ಸೇವೆಗೈದ....

★ ತಮ್ಮ ಪ್ರಥಮ ಪರ್ಯಾಯಾವಧಿಯಲ್ಲಿ ಉಡುಪಿ ಶ್ರೀಕೃಷ್ಣನಿಗೆ ರಜತ ರಥವನ್ನು ನಿರ್ಮಿಸಿಸಮರ್ಪಿಸಿರುವ.....

★ ತಮ್ಮ ಆಶ್ರಮಗುರುಗಳಾದ ಪಲಿಮಾರು ಮಠದ ಶ್ರೀರಘುಮಾನ್ಯತೀರ್ಥರು ಆರಂಭಿಸಿದ್ದ ಉಡುಪಿ ಸಂಸ್ಕೃತಮಹಾಪಾಠಶಾಲೆಯ ಬೃಹತ್ ಕಟ್ಟಡವನ್ನು ಪೂರ್ಣಗೊಳಿಸಿರುವ....

★ ಶ್ರೀ ಶ್ರೀ ವಿಶ್ವಪ್ರಿಯತೀರ್ಥರಿಗೆ ಆಶ್ರಮಕೊಟ್ಟು ತಮ್ಮ ಉತ್ತರಾಧಿಕಾರಿಯನ್ನಾಗಿ ನಿಯೋಜಿಸಿ, ಅವರ ಮೂಲಕ ಎರಡು ಶ್ರೀಕೃಷ್ಣಪೂಜಾಪರ್ಯಾಯಗಳನ್ನು ಯಶಸ್ವಿಯಾಗಿ ನೆರವೇರಿಸಿದ.

★ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರಿಗೆ ಪಲಿಮಾರು ಮಠಾಧಿಪತ್ಯವನ್ನು ದೊರಕಿಸುವಲ್ಲಿ ತುಂಬ ಶ್ರಮಿಸಿದ್ದ....

★ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಕುಲಪತಿತ್ವದಲ್ಲಿ ಅದಮಾರು ಗ್ರಾಮದ ಅದಮಾರು ಮಠದಲ್ಲಿ ಆದರ್ಶಗುರುಕುಲ ಹತ್ತು ವರ್ಷ ಕಾಲ ನಡೆದು ಆ ಅವಧಿಯಲ್ಲಿ ನಾಲ್ಕು ಪೀಠಾಧಿಪತಿಗಳ ಹಾಗೂ ಅನೇಕ ಇತರ ವಿದ್ಯಾರ್ಥಿಗಳ ವಿದ್ಯಾಭ್ಯಾಸ ನಡೆಯುವುದಕ್ಕೆ ಪರಿಪೂರ್ಣ ಆಶ್ರಯವನ್ನು ನೀಡಿದ್ದ...

★ **"ಶ್ರೀ ಅದಮಾರು ಮಠ ಎಜುಕೇಶನ್ ಕೌನ್ಸಿಲ್"** ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ರಾಜ್ಯದ ಬೇರೆ ಬೇರೆ ಕಡೆ ಸುಮಾರು ಇಪ್ಪತ್ತೈದಕ್ಕೂ ಅಧಿಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ನಡೆಸುತ್ತಿದ್ದ....

ಶ್ರೀ ಶ್ರೀ ವಿಬುಧೇಶತೀರ್ಥರು ತಮ್ಮ ಈ ಸಾಧನಾಶರೀರದ ಸಾಧನೆಗಳನ್ನು ಪೂರೈಸಿ ತಮ್ಮ ಆರಾಧ್ಯ ಕಾಳಿಯಮರ್ದನ ಶ್ರೀಕೃಷ್ಣನೆಡೆಗೆ ಸಾಗಿದ ಶ್ರೀಪಾದರ ಅಂತರ್ಯಾಮಿಗೆ 'ಸರ್ವಮೂಲ' ದ ಚರಮಾಂಜಲಿ–

**'ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ'**

ಪುರಾಣ ಪರಿಚಯ

ಭಾಗ-35

# ಶ್ರೀವಿಷ್ಣುಪುರಾಣ

## ಪ್ರಹ್ಲಾದನ ಪ್ರಭಾವದ ಗುಟ್ಟು

-ಸ್ಫೂರ್ತಿ

ದೈತ್ಯ ಪುರೋಹಿತರು ಪ್ರಹ್ಲಾದನನ್ನು ಕುರಿತು 'ನಾವು ಮತ್ತೊಮ್ಮೆ ಹೀಗೆ ನುಡಿಯುವುದಿಲ್ಲವೆಂದು ನಂಬಿ ನಿನ್ನನ್ನು ಬೆಂಕಿಯಿಂದ ಕಾಪಾಡಿದೆವು. ನೀನು ತಿಳಿಗೇಡಿಯಾಗಿರುವಿ ಎಂದು ನಮಗೆ ತಿಳಿದಿರಲಿಲ್ಲ. ಒಂದೊಮ್ಮೆ ನೀನು ನಮ್ಮ ಮಾತಿನಂತೆ ನಿನ್ನ ಮನಸ್ಸಿನೊಳಗಿರುವ ಮಂಕುತನದ ಆಗ್ರಹವನ್ನು ಬಿಡದಿದ್ದರೆ ನಿನ್ನನ್ನು ಕೊಲ್ಲಲು ದುಷ್ಟ ಶಕ್ತಿಗಳನ್ನೇ ಸೃಷ್ಟಿಸುತ್ತೇವೆ' ಎಂದು ನುಡಿದರು.

ಪ್ರಹ್ಲಾದನಾದರೋ ಸ್ವಲ್ಪವೂ ಹೆದರದೆ 'ಯಾರು ಯಾರನ್ನು ಕೊಲ್ಲುತ್ತಾರೆ? ಯಾರು ಯಾರನ್ನು ರಕ್ಷಿಸುತ್ತಾರೆ? ನಮ್ಮ ಕೆಟ್ಟ ಹಾಗೂ ಒಳ್ಳೆಯ ಕರ್ಮಗಳಿಗನುಗುಣವಾಗಿ ಕೊಲ್ಲುವವನು ಹಾಗೂ ರಕ್ಷಿಸುವವನು ಒಬ್ಬನೇ ಭಗವಂತ. ಪ್ರತಿಯೊಂದು ಕರ್ಮಪ್ರೇರಕನಾಗಿ 'ಕರ್ಮ' ಎಂದು ಕರೆಸಲ್ಪಡುವ ಭಗವಂತನಿಂದಲೆ ಎಲ್ಲವೂ ಹುಟ್ಟುತ್ತದೆ. ಕರ್ಮನಾಮಕನಾದ ಭಗವಂತನೆ ಎಲ್ಲರ ಸತ್ಕರ್ಮ ಹಾಗೂ ದುಷ್ಕರ್ಮಗಳಿಗೆ ಕಾರಣನಾಗಿದ್ದಾನೆ. ಆದ್ದರಿಂದ ಆತನ ಪ್ರೀತಿಗಾಗಿ ಸತ್ಕರ್ಮವನ್ನೇ ಆಚರಿಸಬೇಕು' ಎಂದು ನುಡಿದನು.

ಈ ಮಾತಿನಿಂದ ಸಿಟ್ಟಿಗೆದ್ದ ದೈತ್ಯಪುರೋಹಿತರು ಅಗ್ನಿಯಂತೆ ಪ್ರಜ್ವಲಿಸುತ್ತಿರುವ ದುಷ್ಟಶಕ್ತಿಯನ್ನು ಹುಟ್ಟಿಸಿದರು. ಅತ್ಯಂತ ಭಯಂಕರವಾದ ಆ ದುಷ್ಟಶಕ್ತಿಯು ತನ್ನ ನಡಿಗೆಯಿಂದಲೆ ಭೂಮಿಯನ್ನು ನಡುಗಿಸುತ್ತ ಶೂಲವನ್ನು ಹಿಡಿದು ಪ್ರಹ್ಲಾದನ ಬಳಿಗೆ ಬಂದಿತು. ಸಿಟ್ಟಿನಿಂದ ಶೂಲವನ್ನು ಪ್ರಹ್ಲಾದನ ಮೇಲೆ ಎಸೆಯಿತು. ಆ ಶೂಲವು ಪ್ರಹ್ಲಾದನ ಎದೆಗೆ ತಾಕಿ ತುಂಡಾಗಿ ಕೆಳಗೆ ಬಿತ್ತು. ಅಲ್ಲಿಯೂ ಮತ್ತೆ ನೂರು ಚೂರಾಯಿತು.

**ಯತ್ರಾನಪಾಯೀ ಭಗವಾನ್ ಹೃದ್ಯಾಸ್ತೇ ಹರಿರೀಶ್ವರಃ ।**

**ಭಂಗೋ ಭವತಿ ವಜ್ರಸ್ಯ ತತ್ರ ಶೂಲಸ್ಯ ಕಾ ಕಥಾ** ॥ (ವಿ.ಪು. 1-18-36)

ಯಾವ ಹೃದಯದಲ್ಲಿ ಜಗದೊಡೆಯನಾದ, ಪೂಜ್ಯನಾದ, ನಾಶರಹಿತನಾದ ಹರಿಯು ನೆಲೆಸಿದ್ದಾನೋ ಅಲ್ಲಿ ವಜ್ರಾಯುಧವೇ ಮುರಿದು ಬೀಳುವಾಗ ಸಾಮಾನ್ಯ ಶೂಲದ ಕಥೆ ಏನು?

ಪಾಪ ರಹಿತನಾದ ಪ್ರಹ್ಲಾದನ ಮೇಲೆ ಪ್ರಯೋಗಿಸಿದ ಆ ದುಷ್ಟ ಶಕ್ತಿಯು ಪಾಪಿಗಳಾದ ಪುರೋಹಿತರ ಮೇಲೆಯು ಎರಗಿ ನಾಶಮಾಡತೊಡಗಿತು. ದೈತ್ಯ ಪುರೋಹಿತರು ಜೀವ

ಭಯದಿಂದ ತತ್ತರಿಸುತ್ತಿರುವುದನ್ನು ಕಂಡ ಪ್ರಹ್ಲಾದನು 'ಹೇ ಕೃಷ್ಣ, ಅನಂತ' ಎಂದು ಭಗವಂತನನ್ನು ಕರೆಯುತ್ತ ಅವರ ಬಳಿಗೆ ಓಡಿದನು. ಭಗವಂತನನ್ನು ಕುರಿತು 'ಹೇಗೆ ಭಗವಂತನು ಎಲ್ಲ ಕಡೆಯೂ ನೆಲೆಸಿದ್ದಾನೋ ಹಾಗೆಯೇ ಈ ಎಲ್ಲ ಪುರೋಹಿತರೂ ಬದುಕಲಿ. ಹೇಗೆ ಎಲ್ಲ ಕಡೆಯೂ ನೆಲೆಸಿರುವ ಭಗವಂತನು ನಾಶರಹಿತನೋ ಹಾಗೆಯೇ ಇವರು ಸಾವಿನಿಂದ ಪಾರಾಗಲಿ. ನನಗೆ ಯಾರು ವಿಷ ಉಣಿಸಿದರೋ, ಆನೆಯಿಂದ ತುಳಿಸಲು ಯತ್ನಿಸಿದರೋ, ಹಾವಿನಿಂದ ಕಚ್ಚಿಸಿದರೋ ಅವರೆಲ್ಲರನ್ನೂ ನಾನು ಮಿತ್ರರೆಂದೇ ಭಾವಿಸುತ್ತಿದ್ದರೆ ಅವರಲ್ಲಿ ಪಾಪ ಬುದ್ಧಿ ಇಲ್ಲದವನಾದರೆ ಆ ಸತ್ಯದಿಂದಲೆ ಈ ಪುರೋಹಿತರು ಬದುಕಲಿ' ಎಂದು ಪ್ರಾರ್ಥಿಸಿದನು. ದೈತ್ಯ ಪುರೋಹಿತರು ಕೂಡಲೆ ಆ ದುಷ್ಟಶಕ್ತಿಯಿಂದ ಪಾರಾದರು. ಪ್ರಹ್ಲಾದನನ್ನು ತುಂಬಿದ ಮನಸ್ಸಿನಿಂದ ಹರಸಿ ದೈತ್ಯ ರಾಜನ ಬಳಿ ತೆರಳಿ ನಡೆದ ವಿಷಯವನ್ನೆಲ್ಲ ತಿಳಿಸಿದರು.

ದುಷ್ಟಶಕ್ತಿಯೂ ವಿಫಲವಾದುದನ್ನು ಕಂಡ ಹಿರಣ್ಯಕಶಿಪು ಚಿಂತಾಕ್ರಾಂತನಾದ. ಮಗನಾದ ಪ್ರಹ್ಲಾದನನ್ನು ಕರೆಸಿದ. 'ಮಗೂ; ನೀನು ಭಾರಿ ಪ್ರಭಾವಶಾಲಿಯಾಗಿರುವಿ. ನಿನಗೆ ಇಂತಹ ಸಾಮರ್ಥ್ಯ ಸಹಜವಾಗಿ ಬಂದಿದೆಯೋ ಅಥವಾ ಮಂತ್ರಜಪ ಮುಂತಾದುವುಗಳಿಂದ ಉಂಟಾಗಿದೆಯೋ' ಎಂದು ಮಗನನ್ನು ಪ್ರಶ್ನಿಸಿದ. ಪ್ರಹ್ಲಾದನು ತಂದೆಯ ಪಾದಕ್ಕೆರಗಿ 'ಅಪ್ಪ; ಈ ಪ್ರಭಾವ ಮಂತ್ರಜಪ ಮುಂತಾದುವುಗಳಿಂದ ಬಂದದ್ದಲ್ಲ. ಸ್ವಾಭಾವಿಕವಾಗಿರುವುದೂ ಅಲ್ಲ. ಯಾರ ಹೃದಯದಲ್ಲಿ ನಾಶರಹಿತನಾದ ಶ್ರೀಹರಿ ನೆಲೆಸಿರುವನೋ ಅಂಥವರಲ್ಲಿ ಇಂತಹ ಪ್ರಭಾವ ಸಾಮಾನ್ಯವಾಗಿರುತ್ತದೆ.

**ಅನ್ಯೇಷಾಂ ಯೋ ನ ಪಾಪಾನಿ ಚಿಂತಯತ್ಯಾತ್ಮನೋ ಯಥಾ ।**
**ತಸ್ಯ ಪಾಪಾಗಮಸ್ತಾತ ಹೇತ್ವಭಾವಾನ್ನ ವಿದ್ಯತೇ ॥** (ವಿ.ಪು. 1-19-5)

ಯಾರು ತನ್ನಂತೆ ಇನ್ನೊಬ್ಬರ ಪಾಪವನ್ನೂ ಎಣಿಸುವುದಿಲ್ಲವೋ; ಅಂತವನಿಗೆ ಪಾಪ ಬರಲು ಬೇಕಾದ ಯಾವ ಕಾರಣವೂ ಇಲ್ಲದಿರುವುದರಿಂದ ಪಾಪ ಬರುವುದಿಲ್ಲ. ಯಾರು ಮಾತು-ಮನಸ್ಸು-ಕರ್ಮಗಳಿಂದ ಪರರಿಗೆ ಪೀಡೆಯನ್ನೇ ಉಂಟು ಮಾಡುತ್ತಾರೋ, ಅದೇ ಅವರ ಕಷ್ಟಕ್ಕೆ ಬೀಜವಾದ ಪಾಪಕ್ಕೆ ಕಾರಣವಾಗಿ ಕೆಟ್ಟದ್ದನ್ನು ಉಂಟುಮಾಡುತ್ತದೆ. ನಾನು ಯಾರಿಗೂ ಕೆಟ್ಟದ್ದನ್ನು ಇಚ್ಛಿಸುವುದಿಲ್ಲ. ಕೆಟ್ಟದ್ದನ್ನು ಮಾಡುವುದಿಲ್ಲ, ಕೆಟ್ಟದ್ದನ್ನು ಆಡುವುದಿಲ್ಲ. ಎಲ್ಲರಲ್ಲಿಯೂ ನನ್ನೊಳಗಿರುವ ಶ್ರೀಹರಿಯನ್ನೇ ಚಿಂತಿಸುತ್ತೇನೆ. ಹೀಗೆ ಎಲ್ಲ ಕಡೆಯೂ ಶುಭದೃಷ್ಟಿಯನ್ನೇ ಇಟ್ಟಿರುವುದರಿಂದ ನನಗೆ ಎಂದೂ ಕೆಡುಕಾಗುವುದಿಲ್ಲ. ಪ್ರತಿಯೊಬ್ಬರೂ ಹೀಗೆಯೇ ತಿಳಿದವರಿಂದ ಭಗವಂತನ ಬಗ್ಗೆ ತಿಳಿದು ಎಲ್ಲರೊಳಗಿರುವ ಶ್ರೀಹರಿಯಲ್ಲಿ ಅಚಲ ಭಕ್ತಿಯನ್ನು ಮಾಡಬೇಕು' ಎಂದು ನುಡಿದನು. **(ಸಶೇಷ)**

ಭಾಗ–5

# ವಿಶ್ವನ(ದ)ಲ್ಲಿ ವಿಶ್ವರೂಪದ(ನ) ದರ್ಶನ

**–ಶ್ರೀ ಡಿ. ಗುರುಪ್ರಸಾದ್ ಭಟ್**

ಅರ್ಜುನ ಶ್ರವಣಕ್ಕೆ ಯೋಗ್ಯ ಅಧಿಕಾರಿಯೆಂಬುದನ್ನು ನಾವು ನಿಸ್ಸಂದೇಹವಾಗಿ ತಿಳಿಯಬಹುದಾಗಿದೆ. ಯಾಕೆಂದರೆ ಶ್ರೋತ್ರಾನುಕೂಲ್ಯ, ಪ್ರಸಂಗಾನುಕೂಲ್ಯವಿಲ್ಲದಿದ್ದರೂ, ವಕ್ತೃವಾದ ಕೃಷ್ಣ ಹೇಳಿದ್ದನ್ನು ಅರ್ಜುನ ಚೆನ್ನಾಗಿ ಕೇಳಿದ ಅಲ್ಲವೇ? ಬಂಧುಮೋಹದಿಂದ ಕಳವಳಗೊಂಡ ಅರ್ಜುನ, ಶಸ್ತ್ರಸನ್ಯಾಸ ಮಾಡಿ ಯುದ್ಧ ಮಾಡೋಲ್ಲ ಅಂದಾಗ, ಕೃಷ್ಣನನ್ನು ಹೊರತಾಗಿ ಬೇರೆ ಯಾರೂ ಏನನ್ನು ಹೇಳಿದರೂ ಕೇಳುವ ಸ್ಥಿತಿಯಲ್ಲಿ ಇರಲಿಲ್ಲ ಅರ್ಜುನ. ಪ್ರಸಂಗವಂತೂ ಯುದ್ಧದ ಸಂದರ್ಭವಾಗಿದೆ ತಾನೇ? ಯುದ್ಧಾರಂಭದ ಸೂಚನಾರೂಪವಾಗಿ ಶಂಖ ನಾದಗಳೆಲ್ಲಾ ಮೊಳಗಿ ಆಗಿದೆ. ಇಂಥ ಪ್ರಸಂಗದಲ್ಲಿ ಕೃಷ್ಣ ನೀಡಿದ ಉಪದೇಶ ವ್ಯರ್ಥವಾಗಿಲ್ಲವೆಂದರೆ, ಅರ್ಜುನನ ಮೇಲಿನ ಅಪಾರವಾದ ಕಾರುಣ್ಯವೇ ಕೃಷ್ಣನ ಉಪದೇಶಕ್ಕೆ ಮೂಲಭೂತವಾಗಿ ಕಾರಣವಾಯಿತಲ್ಲವೇ?
ಅದಕ್ಕೋಸ್ಕರವೇ 11ನೇ ಅಧ್ಯಾಯವು

**'ಮದನುಗ್ರಹಾಯ ಪರಮಂ ಗುಹ್ಯಮಧ್ಯಾತ್ಮ ಸಂಜ್ಞಿತಂ ।**

**ಯತ್ ತ್ವಯೋಕ್ತಂ ವಚಸ್ತೇನ ಮೋಹೋಽಯಂ ವಿಗತೋಮಮ'॥**

ಎಂಬುದಾಗಿ ಪ್ರಾರಂಭವಾಗುತ್ತಾ ಇದೆ. ಈ ಸಂದರ್ಭದಲ್ಲಿ ಅರ್ಜುನ ಜೀವಿಗಳ ಹುಟ್ಟು, ಸಾವುಗಳ ಬಗ್ಗೆ ಮತ್ತು ಭಗವಂತನ ಅಳಿವಿರದ ಮಹಿಮೆಯ ಬಗ್ಗೆ ತಿಳಿದ ಮೇಲೆ, **'ದ್ರಷ್ಟು ಮಿಚ್ಛಾಮಿ ತೇರೂಪಂ ಐಶ್ವರಂ ಪುರುಷೋತ್ತಮ'** ಅಂದರೆ ನಿನ್ನ ರೂಪವನ್ನು ಕಾಣುವ ತವಕ ನನಗೆ ಅನ್ನುತ್ತಾನೆ. ಒಂದು ವಿಷಯದ ಬಗ್ಗೆ ಶ್ರೋತ್ರೇಂದ್ರಿಯದಿಂದ ಶಬ್ದದ ಮೂಲಕ ತಿಳಿದ ಮೇಲೆ, ಚಕ್ಷುರಿಂದ್ರಿಯದಿಂದ ರೂಪದ ಮೂಲಕ ಕಾಣಬೇಕೆಂಬ ತವಕ ಸಹಜವಾಗಿ ಉಂಟಾಗುತ್ತದೆಯಲ್ಲವೇ? ಅದರಂತೆ ಅರ್ಜುನನಿಗೆ ಕಾಣಬೇಕೆಂಬ ಬಯಕೆ ಉಂಟಾದಾಗ, ಸರ್ವಶಕ್ತನೇ? ಯೋಗಿಗಳ ಒಡೆಯನೇ? ಎಂಬುದಾಗಿ ಭಕ್ತಿಯಿಂದ ಸಂಬೋಧಿಸುತ್ತಾ ನನ್ನಿಂದ ಕಾಣಲು ಸಾಧ್ಯವೆಂದು ನೀನು ಭಾವಿಸುವುದಾದರೆ ನಿನ್ನ ಅಳಿವಿರದ ರೂಪವನ್ನು ನನಗೆ ತೋರಿಸು ಅನ್ನುತ್ತಾನೆ. ಈ ಸರ್ವಶಕ್ತ ಎಂಬ ಸಂಬೋಧನೆಯ ಹಿಂದೆ, ಸರ್ವಶಕ್ತನಾದ್ದರಿಂದ ನಿನ್ನ ರೂಪವನ್ನು ನನಗೂ ತೋರಿಸಲು ನೀನು ಸಮರ್ಥ

ಎಂಬ ಅಭಿಪ್ರಾಯ ಅರ್ಜುನನಿಗೆ ಪ್ರಾಯಶಃ ಇದ್ದಿರಬಹುದು. ಸರ್ವಶಕ್ತನಾಗಿದ್ದರೂ ಅವನು ಯೋಗಿಗಳ ಒಡೆಯ. ಸಾಮಾನ್ಯವಾಗಿ ಯೋಗಿಗಳಿಗೆ ಮಾತ್ರ ಅವನ ವಿಶ್ವರೂಪವನ್ನು ನೋಡಲು ಸಾಧ್ಯ ತಾನೇ?

**'ಯಮೇವೈಷ ವೃಣುತೇ ತೇನ ಲಭ್ಯಃ,**

**ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ'**

ಎಂಬ ಶ್ರುತಿವಾಕ್ಯದಂತೆ ಯೋಗಿಗಳಿಗೂ, ತಾನು ಇಚ್ಛಿಸಿದರೆ ಮಾತ್ರ ಅವರಿಗೆ ಕಾಣಿಸುತ್ತಾನೆ ಅಲ್ಲವೇ? ಆದ್ದರಿಂದ ಅರ್ಜುನ, ಪ್ರಕೃತ ತಾನು ಯೋಗಿಯಲ್ಲದಿದ್ದರೂ, ನಿನ್ನ ಕಾರುಣ್ಯದಿಂದ ನನಗೆ ಅನುಗ್ರಹ ಮಾಡುವುದಕ್ಕೋಸ್ಕರ ನಿನ್ನ ಅಳಿವಿರದ ರೂಪವನ್ನು ನನಗೆ ತೋರಿಸು ಎಂಬ ವಿನೀತ ಭಾವನೆಯಿಂದ ಅರ್ಜುನ ಪ್ರಾರ್ಥಿಸುತ್ತಾನೆ.

ಶ್ರೀಕೃಷ್ಣನ ವಿಶ್ವರೂಪವನ್ನು ಕಾಣಲು ಅರ್ಜುನನ ಯಾವೆಲ್ಲಾ ಗುಣಗಳು ಕಾರಣಗಳಾಗಿ ಕಂಡಿವೆ? ಎಂಬುದನ್ನು ಯಥಾಶಕ್ತಿ ಹಿಂದೆ ನಾವು ತಿಳಿದುಕೊಂಡಿದ್ದೇವೆ. ಅದಕ್ಕೋಸ್ಕರವೇ ಅರ್ಜುನ ಕೃಷ್ಣನಲ್ಲಿ ನನ್ನಿಂದ ಕಾಣಲು ಸಾಧ್ಯವೆಂದು ನೀನು ತೀರ್ಮಾನಿಸುವುದಾದರೆ ಮಾತ್ರ ತೋರಿಸು ಅನ್ನುತ್ತಾನೆ. ಇದರಿಂದ ತನಗೆ ವಿಶ್ವರೂಪವನ್ನು ಕಾಣುವ ಯೋಗ್ಯತೆ, ಸಾಮರ್ಥ್ಯವಿದೆಯೋ, ಇಲ್ಲವೋ ಎಂಬುದನ್ನು ಕೃಷ್ಣನಲ್ಲೇ ಪ್ರಶ್ನಿಸುತ್ತಾನೆ.

**'ಯಮೇವೈಷ ವೃಣುತೇ ತೇನ ಲಭ್ಯಃ,**

**ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ'**

ಎಂಬಂತೆ ನಾವು ಇಚ್ಛೆಪಟ್ಟರೂ ಕೂಡ, ಭಗವಂತನೇ ಕೃಪಾದೃಷ್ಟಿಯಿಂದ ತೋರಿಸಿದರೆ ಮಾತ್ರ ನಾವು ಅವನನ್ನು ಕಾಣಬಹುದಾಗಿದೆಯಲ್ಲವೆ? ಈ ಎಚ್ಚರ ಅರ್ಜುನನಿಗೆ ಇದ್ದದ್ದರಿಂದಲೇ ಅವನ ಪ್ರಾರ್ಥನೆ ಎಚ್ಚರದೆಡೆಗೆ ನಮ್ಮನ್ನು ಒಯ್ಯುತ್ತದೆಯಲ್ಲವೆ? ಅಲೌಕಿಕಗಳಾದ ಹಲವು ಬಣ್ಣ ಆಕಾರಗಳುಳ್ಳ ನೂರಾರು ಸಾವಿರಾರು ಬಗೆ ಬಗೆಯ ನನ್ನ ರೂಪಗಳನ್ನು ನೋಡು ಅನ್ನುತ್ತಾ ಕೃಷ್ಣ ಹಿಂದೆಂದೂ ಕಂಡಿರದ ಹಲವು ಅಚ್ಚರಿಗಳನ್ನು ನೋಡು! ಅನ್ನುತ್ತಾನೆ. ಚರಾಚರಗಳಿಂದ ಕೂಡಿದ ಇಡಿಯ ಜಗತ್ತು ನನ್ನ ಮೈಯಲ್ಲಿ ಒಂದುಗೂಡಿದ್ದನ್ನು ನೋಡು! ಅನ್ನುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಕೃಷ್ಣನ ಶರೀರ ಅಪ್ರಾಕೃತ. ಅವನು ತೋರಿಸತಕ್ಕ ರೂಪಗಳೂ ಅಲೌಕಿಕ. ಹಲವು ಬಣ್ಣಗಳುಳ್ಳ ರೂಪಗಳೂ ಕೂಡ ಲೌಕಿಕಗಳಲ್ಲ. ಅವೆಲ್ಲವೂ ಜ್ಞಾನಾನಂದಮಯವಾದ ರೂಪಗಳು ಅಲ್ಲವೆ? ಇವನ್ನೆಲ್ಲಾ ತಾನೊಬ್ಬ ಲೌಕಿಕನಾಗಿ (ಪ್ರಾಕೃತ ಶರೀರಿಯಾಗಿ) ಕಣ್ಣಿಗೆ ಕಾಣತಕ್ಕ ರೂಪ,

ಬಣ್ಣವುಳ್ಳವನಾಗಿ ಈ ಜಡವಾದ ಜಗತ್ತಿನಲ್ಲೇ ಇದ್ದುಕೊಂಡು ತನ್ನ ವಿಶ್ವರೂಪವನ್ನು ಅರ್ಜುನನಿಗೆ ತೋರಿಸುತ್ತಾ ಇದ್ದಾನೆ. ಇದು ಅವನ ಅಚಿಂತ್ಯಾದ್ಭುತ ಶಕ್ತಿಗೆ ದೃಷ್ಟಾಂತವಾಗಿದೆ. ಆದರೆ ಅರ್ಜುನನ ಶರೀರ ಪ್ರಾಕೃತ. ಅವನು ಪ್ರಾಕೃತವಾದ ಅಂದರೆ ಪಾಂಚಭೌತಿಕವಾದ ಕಣ್ಣುಗಳಿಂದಲೇ, ಈ ಜಗತ್ತಿನಲ್ಲಿ ಇದ್ದುಕೊಂಡು ಕಾಣಲು ಹೇಗೆ ಸಾಧ್ಯ? ಅದಕ್ಕೋಸ್ಕರವೇ ಕೃಷ್ಣ

**'ನತುಮಾಂ ಶಕ್ಯಸೇ ದ್ರಷ್ಟುಂ ಅನೇನೈವ ಸ್ವಚಕ್ಷುಷಾ ।**
**ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯಮೇ ಯೋಗಮೈಶ್ವರಂ'॥** (11–8–ಗೀತಾ)

ಅಂದರೆ ಈ ಪ್ರಾಕೃತವಾದ ಕಣ್ಣಿನಿಂದಲೇ ಅಂದರೆ ಹೊರಗಣ್ಣಿನಿಂದ ನನ್ನನ್ನು ನೋಡಲಾರೆ, ದಿವ್ಯವಾದ ಒಳಗಣ್ಣನ್ನು ನೀಡಿದ್ದೇನೆ. ನೋಡು ಎನ್ನುತ್ತಾನೆ. ಕೃಷ್ಣನ ಶರೀರ ಜ್ಞಾನಾನಂದಮಯವಾದ್ದರಿಂದ, ಅಜ್ಞಾನಾವೃತವಾದ ದೃಷ್ಟಿಯಿಂದಲೂ ಕೃಷ್ಣನು ಕಾಣುವುದಿಲ್ಲವಾದ್ದರಿಂದ ಜ್ಞಾನಾನಂದಮಯವಾದ ಕಣ್ಣನ್ನೇ ಅವನಿಗೆ ಅನುಗ್ರಹಿಸುತ್ತಾನೆ. ಇದು ಕೃಷ್ಣನ ಭಕ್ತ ವಾತ್ಸಲ್ಯಕ್ಕೆ ದ್ಯೋತಕವೆಂಬುದನ್ನು ಗಮನಿಸಬೇಕು. ಆದ್ದರಿಂದಲೇ ದುರ್ಯೋಧನಾದಿಗಳಿಗೆ ಶ್ರೀಕೃಷ್ಣನ ವಿಶ್ವರೂಪ ದರ್ಶನವಾಗಲಿಲ್ಲ. ಯಾರಿಗೆ ಕಾಣಬೇಕೋ ಅವರಿಗೆ ಮಾತ್ರ ಕಾಣಿಸಿದ. ಸಂಜಯನಿಗೆ ಮಾತ್ರ ಧೃತರಾಷ್ಟ್ರನಿಗೆ ಯುದ್ಧದ ವಿವರಣೆಯನ್ನು ತಿಳಿಸುವುದಕ್ಕೋಸ್ಕರ ವ್ಯಾಸರ ಅನುಗ್ರಹದಿಂದ ಆ ದಿವ್ಯವಾದ ದೃಷ್ಟಿ ಇತ್ತು ಎಂಬುದಾಗಿ ತಿಳಿಯುತ್ತದೆ. ಅರ್ಜುನ ಗುಡಾಕೇಶನಾಗಿ ಅಂದರೆ ನಿದ್ದೆಯನ್ನು ಗೆದ್ದವನಾಗಿ ಕೃಷ್ಣನ ವಿಶ್ವರೂಪವನ್ನು ಕಾಣುತ್ತಾನೆ. ಲೌಕಿಕ ಕಣ್ಣಿನಿಂದ ನಿದ್ದೆಯನ್ನು ಗೆಲ್ಲಲು ಸಾಧ್ಯವಿಲ್ಲ ತಾನೇ? ಸಂಜಯನಿಗೂ ಅರ್ಜುನನಂತೆ ಕಾಣುವ ಭಾಗ್ಯ ಒದಗಿದ್ದರಿಂದಲೇ ಜಗತ್ತನ್ನು ಆಳುವ ಹಿರಿಯ ರೂಪವನ್ನು ಅರ್ಜುನನಿಗೆ ತೋರಿಸಿದ! ಎಂಬುದನ್ನು ಧೃತರಾಷ್ಟ್ರನಿಗೆ ತಿಳಿಸಲು ಸಾಧ್ಯವಾಗುತ್ತದೆ. ಧೃತರಾಷ್ಟ್ರನಿಗೆ ಒಳಗಣ್ಣು ಮತ್ತು ಹೊರಗಣ್ಣು ಎರಡೂ ಕುರುಡಾದ್ದರಿಂದ ಅವನು ಸಂಜಯನಿಂದ ಕೇಳಿ ತಿಳಿದುಕೊಂಡ ಅಷ್ಟೇ. ಹಿಂದೆಂದೂ ಕಂಡಿರದ ಅಚ್ಚರಿಯನ್ನು ಅರ್ಜುನನಿಗೆ ಕೃಷ್ಣ ತೋರಿಸುತ್ತಾನೆ. ಏನದೂ ಅಂದರೆ ಎಣಿಕೆಗೆ ಸಿಗದ ಬಾಯಿ, ಕಣ್ಣುಗಳ ರೂಪ, ಅನುಭವೈಕವೇದ್ಯವಾದ ಆಶ್ಚರ್ಯದ ನೋಟಗಳ ರೂಪ, ಎಣಿಕೆಗೆ ಸಿಗದ ಆಭರಣಗಳುಳ್ಳ ರೂಪ, ಹೊಳೆಯುವ ಆಯುಧಗಳನ್ನು ಮೇಲೆ ಎತ್ತಿ ಹಿಡಿದ ರೂಪ, ಹೊಳೆವ ಉಡಿಗೆಗಳ ರೂಪ, ಹೊಳೆವ ಗಂಧ ಬಳಿದ ರೂಪ, ಈ ರೀತಿ ಎಲ್ಲ ಅಚ್ಚರಿಗಳನ್ನು ಕೃಷ್ಣನ ವಿಶ್ವರೂಪದಲ್ಲಿ ಈ ಜಗತ್ತಿನಲ್ಲೇ ಇದ್ದುಕೊಂಡು, ಅರ್ಜುನ ವಿಶ್ವರೂಪನನ್ನು ಕಾಣುತ್ತಾನೆ. **(ಸಶೇಷ)**

ಜ್ಯೌತಿಷ ಚಿಂತನೆ



# ಕವಿಶ್ಚ ಕವಿತಾಂ ದಿಶೇತ್

-ವಿ॥ ಕುಂಭಾಸಿ ಶ್ರೀ ಶ್ರೀಪತಿ ಉಪಾಧ್ಯಾಯ

ಭೋಗಕಾರಕನೆಂದೇ ಪ್ರಸಿದ್ಧನಾದವನು ಶುಕ್ರನು. ವೈಜ್ಞಾನಿಕವಾಗಿ ಸೂರ್ಯನಿಂದ ಎರಡನೇ ಗ್ರಹನು. ಗಾತ್ರ ಹಾಗೂ ಸಾಂದ್ರತೆಯಲ್ಲಿ ಭೂಮಿಗೆ ಸಾಮ್ಯವಿದೆ. ತಾಪ 400 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚು. ವಾತಾವರಣ ಇಂಗಾಲದ ಡೈಆಕ್ಸೈಡ್‌ನಿಂದ ಕೂಡಿದೆ. ಶುಕ್ರಗ್ರಹನು ಹಿಮ್ಮುಖವಾಗಿ ಚಲಿಸುವುದರಿಂದ ಇವನ ಕಕ್ಷೆಯಲ್ಲಿ ಸೂರ್ಯ ಪಶ್ಚಿಮದಲ್ಲಿ ಉದಯಿಸಿ ಪೂರ್ವದಲ್ಲಿ ಅಸ್ತಮಿಸಿದಂತೆ ಭಾಸವಾಗುವುದು. ಇಲ್ಲಿ ಜೀವಿಗಳಿಲ್ಲ. ಇವನಿಗೆ ಉಪಗ್ರಹವೂ ಇಲ್ಲ. ಸೂರ್ಯನ ಸುತ್ತ ತಿರುಗಲು 244.8 ದಿನಗಳು ಬೇಕು. ಈತನು ಸೂರ್ಯನಿಗಿಂತ ಮುಂಚೆ ಮೂಡುವುದರಿಂದ ಅತ್ಯಂತ ಸುಂದರನಾಗಿ ಕಾಣುವುದರಿಂದ 'ಬೆಳ್ಳಿ ಮೂಡಿತು' ಎನ್ನುವುದಾಗಿ ಜನರು ಕರೆಯುತ್ತಾರೆ. ಇದು ಸೂರ್ಯನಿಂದ 188.7 ದಶಲಕ್ಷ ಕಿ.ಮೀ ಅಂತರದಲ್ಲಿದೆ. ಇದರ ವ್ಯಾಸ 12,100 ಕಿ.ಮೀ ತನ್ನ ಸುತ್ತು ಒಂದು ಬಾರಿ ಭ್ರಮಿಸಲು 745 ದಿನಗಳು ಬೇಕು. ಸಾಮಾನ್ಯ ಆಕಾಶದಲ್ಲಿ ಸೂರ್ಯಾಸ್ತ ಯಾ ಸೂರ್ಯೋದಯದ ಮೊದಲು ಹೆಚ್ಚೆಂದರೆ ಅತ್ಯಂತ ಪ್ರಕಾಶಮಾನವಾಗಿ 3 ಗಂಟೆಗಳ ಕಾಲ ಕಾಣಿಸಿಕೊಳ್ಳುವನು. ಸೂರ್ಯನಲ್ಲಿರುವ ಮೋಡದ ವಾತಾವರಣ ಸೂರ್ಯನ ಬೆಳಕಿನ ಶೇ 75ರಷ್ಟು ಪ್ರತಿಫಲವಾಗಿ ಪ್ರಕಾಶಮಾನವಾಗಿ ಕಾಣುವಂತೆ ಮಾಡುತ್ತಿದೆ.

ಪೌರಾಣಿಕವಾಗಿ ಆದಿಯುಗದಲ್ಲಿ ರೋದಿಸುತ್ತಿರುವ ರುದ್ರದೇವರಿಗೆ ಬ್ರಹ್ಮದೇವರು 'ಭವ' ಎಂದು ಹೆಸರಿಟ್ಟನು. ಆ ರುದ್ರದೇವರ ಅಷ್ಟಮೂರ್ತಿಗಳಲ್ಲಿ ಒಂದಾದ ಜಲಮೂರ್ತಿಯು ಭೃಗುಕನ್ಯೆಯಾದಳು. ಅವಳಲ್ಲಿ ಉಶನಸ್‌ನು ಶುಕ್ರನನ್ನು ಉತ್ಪಾದಿಸಿದನು. ಈ ಶುಕ್ರನಾದರೂ ಹತ್ತುಸಾವಿರ ವರ್ಷಗಳ ಕಾಲ 'ಕಣಧೂಮ್ರ' ವ್ರತವನ್ನು ಆಚರಿಸಿ ರುದ್ರನನ್ನು ತೃಪ್ತಿಪಡಿಸಿ, ಆ ರುದ್ರದೇವರ ದಯೆಯಿಂದ ಸಕಲ ಧನಪತಿತ್ವ, ಶ್ರೇಷ್ಠ ಸುಂದರ ದೇಹ, ಪ್ರಜ್ಞೆ, ಪ್ರಭಾವ, ತಪಸ್ಸು, ವಿದ್ಯೆ, ತೇಜಸ್ಸಿನಲ್ಲಿ ಆದಿಕ್ಯವನ್ನು ಅಸುರ ಗುರುತ್ವವನ್ನು ಪಡೆದನು. ಬಲಿಯು ವಾಮನನಿಗೆ ದಾನ ಕೊಡುವಾಗ ಮಂಡೂಕರೂಪದಿಂದ ಅಡ್ಡಿಪಡಿಸಿ ಒಂದು ಕಣ್ಣನ್ನು ಕಳೆದುಕೊಂಡ ಈತನ ಬಗ್ಗೆ ಅನೇಕ ಕಥೆಗಳಿವೆ. ಈತನು ಯುದ್ಧದಲ್ಲಿ ಮೃತರಾದ ದೈತ್ಯರನ್ನು ಮೃತಸಂಜೀವಿನಿ ಮಂತ್ರದಿಂದ ಬದುಕಿಸುತ್ತಿದ್ದನೆಂದು ಪ್ರತೀತಿಯಿದೆ. ಸಂಹಿತಾ

ಗ್ರಂಥದಲ್ಲಿ ಈತನಿಗೆ 9ವೀಥಿಗಳೂ ಮೂರು ಮಾರ್ಗಗಳೂ, ಆರು ಮಂಡಲಗಳೂ ಅದರ ಫಲಗಳೂ ಹೇಳಲ್ಪಟ್ಟಿವೆ. ಹಗಲು ಶುಕ್ರನು ಕಾಣಿಸಿದರೆ ಅನಿಷ್ಟ ಫಲಗಳು ಹೇಳಲ್ಪಟ್ಟಿದೆ. ಗೋಚರದಲ್ಲಿ ಗುರು-ಶುಕ್ರರು ಸಮಸಪ್ತಮದಲ್ಲಿ ಬಂದರೆ ಜಗತ್ತಿಗೆ ಅನಿಷ್ಟ ಉಂಟಾಗುತ್ತದೆ. ಈತನ ರಕ್ತ, ಕನಕ, ಹರಿತ್, ಭಸ್ಮ, ರೂಕ್ಷಾ ಎಂಬ ವರ್ಣಗಳೂ ಅದರ ಫಲಗಳೂ ಹೇಳಲ್ಪಟ್ಟಿದೆ. 96 ಡಿಗ್ರಿ- 8ಡಿಗ್ರಿ ಈತನ ಮಧ್ಯಗತಿ. ಈತನಿಗೆ ಪ್ರಾಯ 7ರಿಂದ 11ದಿನಗಳ ಹಾಗೂ 48ರಿಂದ 54 ದಿನಗಳ ಅಸ್ತವು ಸಂಭವಿಸುತ್ತದೆ. ಸ್ತಂಭನಾಂಶ 29 ವಕ್ರನಾಗುವ ದಿನ 52. ಈತನ ಬಿಂಬಮಾನ 10 ವಿಕಲೆ. ಈತನಿಗೆ ಭೃಗು, ಭಾರ್ಗವ, ಶುಕ್ರ ಉಶನಸ್, ಭೃಗುಪುತ್ರ, ಕವಿ ಮೊದಲಾದ ಅನೇಕ ಹೆಸರುಗಳಿವೆ. ಈ ಶುಕ್ರನಿಗೆ ಮೀನವು ಉಚ್ಚರಾಶಿಯಾಗಿದೆ. ಅದರ 27ನೇ ಭಾಗವು ಪರಮೋಚ್ಚ ಭಾಗವಾಗಿದೆ. ಕನ್ಯಾರಾಶಿ ನೀಚ ಸ್ಥಾನ. ಅದರ 27ನೇ ಭಾಗವು ಪರಮನೀಚ ಭಾಗವಾಗಿದೆ. ತುಲಾರಾಶಿ ಮೂಲ ತ್ರಿಕೋಣ. ಮೊದಲ 20 ಭಾಗ ಮೂಲ ತ್ರಿಕೋಣ. ಮುಂದಿನ ಭಾಗ ಸ್ವಕ್ಷೇತ್ರವಾಗಿದೆ. ವೃಷಭ, ತುಲಾಗಳು ಸ್ವಕ್ಷೇತ್ರಗಳಾಗಿವೆ. ಈತನು ಯಮುನಾ ನದಿಗೆ ಕಾರಕನು. ಈತನ ರಶ್ಮಿ ಸಂಖ್ಯೆ 8. ಚವರ್ಗಕ್ಕೆ ಅಧಿಪತಿಯು. ಶೀರ್ಷೋದಯ ಗ್ರಹನು. ಈತನಿಗೆ ಕಟಾಕ್ಷ ದೃಷ್ಟಿಯಿದೆ. ಶಯನಾಗಾರವು ಇವನ ಸ್ಥಳವಾಗಿದೆ. ಈತನ ವಯಸ್ಸು 16. ಮುಖ ಮತ್ತು ಲಿಂಗಸ್ಥಾನಕ್ಕೆ ಕಾರಕನು. ಈತನು, ವಧು ಸ್ವರೂಪನು, ಜಲಕಾರಕನು ಇಂದ್ರಾಣಿ. ಯಕ್ಷಿ, ದುರ್ಗಾ ಲಕ್ಷ್ಮೀ ಅನ್ನಪೂರ್ಣೇಶ್ವರಿಯ ಕಾರಕನು. ದೃಢವಾದ ಬಟ್ಟೆ ಇವನದು. ವಜ್ರಕ್ಕೆ ಕಾರಕನೀತ. ಮುತ್ತಿಗೂ ಈತನು ಅಧಿಪತಿಯು. ಚಿತ್ರವರ್ಣನು. ಯಜುರ್ವೇದಕ್ಕೆ ಅಧಿಪತಿಯು. ಮೂಲಗ್ರಹನು. ಜಲಾಶಯ ಸಂಚಾರಿಯು. ಪಂಚತಾರಗ್ರಹರಲ್ಲಿ ಒಬ್ಬನು. ಜಲತತ್ತ್ವಾಭಿಮಾನಿಯು. ವೀರ್ಯಕಾರಕನು. ಪಕ್ಷಕ್ಕೆ ಅಧಿಪತಿಯು. ಹುಳಿರಸಕ್ಕೆ ಅಧಿಪತಿಯು. ಸಪ್ತಮದಲ್ಲಿ ಪೂರ್ಣದೃಷ್ಟಿಯು. ಸಪ್ತಮ ಹಾಗೂ ನವಮಭಾವಕ್ಕೆ ಕಾರಕನು. ಸಪ್ತಮಭಾವದಲ್ಲಿ ಅನಿಷ್ಟಪ್ರದನು. ಗುಂಗುರು ಕೂದಲು ಸುಂದರ ಶರೀರ, ಕಾಂತಿಪೂರ್ಣಕಣ್ಣು, ಕಫ, ವಾಯು ಪ್ರಕೃತಿಯಿಂದ ಕೂಡಿದ ಸುಖ ಪೂರ್ಣ ವ್ಯಕ್ತಿತ್ವ ಇವನದು. ಭೃಗುಷಟ್ಕವು ಜಾತಕ, ಪ್ರಶ್ನೆ, ಮುಹೂರ್ತಗಳಲ್ಲಿ ಅತೀವ ದೋಷಪ್ರದ. ಬಲಿಷ್ಠ ಶುಕ್ರನು ಜಾತಕದ 10,000 ದೋಷವನ್ನು ನಾಶಪಡಿಸುವನು. ರಾಹು, ಬುಧ, ಶನಿ, ಕುಜ ದೋಷವನ್ನು ಬಲಿಷ್ಠ ಶುಕ್ರನು ಪರಿಹರಿಸಬಲ್ಲ. ರಾಶಿಯ ಮಧ್ಯಭಾಗದಲ್ಲಿ ಫಲಪ್ರದನು. ಪುಷ್ಪವೃಕ್ಷಗಳಿಗೆ ಕಾರಕನು. ಪುರುಷರ ಸಂತಾನಶಕ್ತಿಗೆ ಪ್ರಧಾನಕಾರಕನು. ಭರಣಿ, ಹುಬ್ಬಾ, ಪೂರ್ವಾಷಾಢ, ನಕ್ಷತ್ರಕ್ಕೆ ಅಧಿಪತಿಯು. ದಶಾವರ್ಷ 20, ಶುಕ್ರವಾರ ರೇವತಿ ನಕ್ಷತ್ರದಿಂದ ಅಮೃತ

ಸಿದ್ಧಿಯೋಗವಾಗುವುದು. ಶುಕ್ರವಾರ ಮೃಗಶಿರದಿಂದ ಮೃತ್ಯುಯೋಗ ಉಂಟಾಗುವುದು. ಶುಕ್ರನಿಗೆ ಬುಧ ಶನಿಗಳು ಮಿತ್ರ. ಕುಜ, ಗುರು ಸಮರು. ರವಿ ಚಂದ್ರು ಶತ್ರುಗಳು. ಗೋಚರದಲ್ಲಿ 6,7, 10ರಲ್ಲಿ ಅನಿಷ್ಟಪ್ರದರು. ಈತನಿಗೆ ಚತುರ್ಥದಲ್ಲಿ ದಿಗ್ಬಲವಿದೆ. ವಧೂವರರ ಜಾತಕದ ಮೇಳಾಮೇಳಿಯ ವಿಷಯದಲ್ಲಿ ಶುಕ್ರನಿಂದ 1,2,12,4,7,8 ಸ್ಥಾನದಲ್ಲಿ ಕುಜನು ಕುಜದೋಷವನ್ನು ಪಾಪಗ್ರಹರು ಪಾಪದೋಷವನ್ನು ಉಂಟುಮಾಡುವರು. ಜಾತಕದಲ್ಲಿ ಸ್ವಕ್ಷೇತ್ರ, ಉಚ್ಛ, ಮೂಲತ್ರಿಕೋಣದಲ್ಲಿದ್ದು ಕೇಂದ್ರಕೋಣದಲ್ಲಿ ಬಲಿಷ್ಠನಾದರೆ ಮಾಲವ್ಯ ಂಯೋಗವಾಗುವುದು. ಲಗ್ನಾತ್ ಅಥವಾ ಚಂದ್ರಾತ್ ದಶಮದಲ್ಲಿದ್ದರೆ ಅಮಲಾಯೋಗವಾಗುವುದು. ಗರ್ಭದಲ್ಲಿ ಶುಕ್ಲಶೋಣಿತದ ಸಂಯೋಗರೂಪದ ಪ್ರಥಮಮಾಸಕ್ಕೆ ಶುಕ್ರನು ಅಧಿಪತಿಯು. ಈತನು ಮೈತ್ರತಾರೆಗೆ ಅಧಿಪತಿಯು. ಸಂತೋಷ ಇದರ ಫಲ. ಈತನ ದಶಾಕಾಲದಲ್ಲಿ ಸಂಗೀತಾಸಕ್ತಿ, ಸುಗಂಧದ್ರವ್ಯ, ಅನ್ನದಾನ, ಸುಖ, ಸ್ತ್ರೀಸುಖ, ರತ್ನಪ್ರಾಪ್ತಿ, ಕಾಮೋಪಭೋಗಗಳ ಪ್ರಾಪ್ತಿ. ಜ್ಞಾನಿಗಳ ಒಡನಾಟ, ಕ್ರಯವಿಕ್ರಯದಲ್ಲಿ ಕೌಶಲ್ಯ ಮೊದಲಾದ ಸತ್ಫಲಗಳು, ಅನಿಷ್ಟಸ್ಥಾನ ಸ್ಥಿತನಾದರೆ ದುಃಖ, ನಾಸ್ತಿಕರಿಂದ ಶತ್ರುತ್ವ ಲೋಕಾಕ್ರೋಶವೂ, ಸ್ತ್ರೀದುಃಖ, ಅಪವಾದ, ಅತಿಕಾಮ, ಮಧುಮೇಹ, ಸ್ತ್ರೀಸಂಬಂಧಿ ರೋಗಗಳು ಕಾಡುವವು. ಈತನ ಬಿಂಬ ಪ್ರಮಾಣ 10 ಡಿಗ್ರಿ. ತಕ್ಷ ಶಿಲೆ, ಗಾಂಧಾರ, ಇರಾವತೀ ಚಂದ್ರ ಭಾಗ ನದೀತೀರ ಇವನ ಪ್ರದೇಶವಾಗಿದೆ. ಬೆಳ್ಳಿ, ಆನೆ, ಕುದುರೆ, ಪರಿಮಳ ದ್ರವ್ಯ, ಅಲಂಕಾರ ವಸ್ತು, ಕಮಲ, ಹಾಸಿಗೆ, ಸುಂದರ ತರುಣ, ತರುಣಿ ಮೃಷ್ಟಾನ್ನ, ಭೋಜನ, ಮಧುರವಸ್ತು, ಪುಷ್ಪಗಳ ಉದ್ಯಾನ, ಕಾರ್ಮಿಕರು, ಔದಾರ್ಯ ಭೋಗ, ಲಲಿತಕಲೆ, ಸಂಗೀತ, ನೃತ್ಯ, ಚಿತ್ರವಸ್ತು, ರೇಶ್ಮೆ ಪಟ್ಟೆ, ನೆಲ್ಲಿಕಾಯಿ ಜಾಯಿಕಾಯಿ, ಅಳಲೆಕಾಯಿ, ಲವಂಗ, ಲವಂಚ ಚಂದನ, ಸ್ವರ್ಗ ಸ್ತ್ರೀ ವಿವಿಧ ಆಭರಣಗಳು, ಮಳೆ ರತಿಕ್ರೀಡೆ, ಕಾಮಶಾಸ್ತ್ರ, ದಾಂಪತ್ಯ, ಗುಪ್ತಾಂಗಪ್ರದೇಶ, ದನ, ಹಾಲು, ತುಪ್ಪ, ವಾದ್ಯ, ನೇಕಾರ, ಅತ್ತಿಮರ, ಗೋಶಾಲೆ, ವಾಹನಗಳು, ಚಲನಚಿತ್ರ, ಯಕ್ಷಗಾನ, ಮತ್ತಿತರ ಜಾನಪದಕಲೆ, ಮಾಲೆ ಕಟ್ಟುವವರು, ಪಲ್ಲಕ್ಕಿ, ಸುಂದರವಾದ ಮನೆಗಳಿಗೆ ಶುಕ್ರನು ಕಾರಕನಾಗುತ್ತಾನೆ. ಅನ್ನಪೂರ್ಣೇಶ್ವರೀ, ಲಕ್ಷ್ಮೀ ಯಕ್ಷಿ, ಓಜರಾಶಿಯ ಶುಕ್ರನಿಂದ ಗಣಪತಿಯನ್ನು ಚಿಂತಿಸಬೇಕು.

ಕುಜ–ಶುಕ್ರಯೋಗವು ಜಾರಯೋಗವೆಂದು ಪ್ರಸಿದ್ಧವು. ಕುಜ–ಶುಕ್ರಯೋಗ, ಶುಕ್ರ–ರಾಹುಯೋಗ, ಶನಿ–ಶುಕ್ರಯೋಗ, ದೃಷ್ಟಿ ಅತಿಕಾಮುಕತೆಗೆ ಕಾರಣವಾಗುವುದು. ಗುರು–ಶುಕ್ರಯೋಗ ಅತಿಮಾನುಷಯೋಗವಾಗಿದ್ದು ಉನ್ನತಮಟ್ಟದ ಕಾರ್ಯಸಿದ್ಧಿಸುತ್ತದೆ. ಬುಧ–ಗುರು ಬುಧ–ಶುಕ್ರ ಯೋಗ ಕಾವ್ಯ ಕಲೆಗಳ, ಕಲಾವಿದರ ಪ್ರಸಿದ್ಧಿಗೆ ಕಾರಣವಾಗುವುದು.

ಗುರು–ಶುಕ್ರಯೋಗ ಸದ್ವಿದ್ಯೆಗೂ, ಗುಣವಂತ ವ್ಯಕ್ತಿತ್ವಕ್ಕೂ ಕಾರಣವಾಗುತ್ತದೆ. ಶುಕ್ರಾದಿತ್ಯ ಸಂಧಿಯ ಕಾಲವು ಅನಿಷ್ಟಕಾಲವಾಗಿದ್ದು ದೋಷ ಪರಿಹಾರಕ್ಕಾಗಿ 16 ಸಾವಿರ ಶುಕ್ರ ಮಂತ್ರಜಪ, ಲಕ್ಷ್ಮೀ ಹೃದಯ, ಶ್ರೀಸೂಕ್ತ, ಶ್ರೀಶಗುಣದರ್ಪಣ, ಲಕ್ಷ್ಮೀಶೋಭಾನೆ, ಸಪ್ತಶತಿಪಾರಾಯಣ, ಭಾಗ್ಯಸೂಕ್ತ, ಐಕ್ಯಮತ್ಯ ಸೂಕ್ತ, ದುರ್ಗಾಸ್ತವನ, ದುರ್ಗಾಸೂಕ್ತ ಜಪ, ಸೌಭಾಗ್ಯಮಂತ್ರ ಜಪ, ತುಳಸಿಪೂಜೆ, ತುಳಸಿ ಹಾಗೂ ದೇವರಿಗೆ ದೃಢದೀಪ ಸಮರ್ಪಣೆ, ದೇವಿಗೆ ಕ್ಷೀರಾಭಿಷೇಕ, ಪಂಚಾಮೃತಾಭಿಷೇಕ, ರೇಶ್ಮೆ ಯಾ ಬೇರೆ ವಸ್ತ್ರ ಸಮರ್ಪಣೆ, ಕುಂಕುಮಾರ್ಚನೆ, ಶ್ರೀಚಕ್ರಪೂಜೆ, ತ್ರಿಪುರಸುಂದರೀಪೂಜೆ, ಲಕ್ಷ್ಮೀಸಹಸ್ರನಾಮಾರ್ಚನೆ, ಲಲಿತಾ ಸಹಸ್ರನಾಮಾರ್ಚನೆ, ತ್ರಿಮಧುರ ಸಮರ್ಪಣೆ, ಬಿಲ್ವಾರ್ಚನೆ,ದುರ್ಗಾಹೋಮ, ಶ್ರೀಸೂಕ್ತಹೋಮ, ಚಂಡಿಕಾಹೋಮ, ಸುಕೃತಹೋಮ, ಲಕ್ಷ್ಮೀಹೃದಯಹೋಮ, ಅಂಭೃಣೀಸೂಕ್ತಹೋಮ, ಶುಕ್ರಮಂತ್ರಹೋಮ, ನವಗ್ರಹಹೋಮ, ಗೋದಾನ, ಗೋಗ್ರಾಸ, ದೇವಿಕ್ಷೇತ್ರಗಳ ಸಂದರ್ಶನ, ಮೂಲಮಂತ್ರಜಪ, ವೇದಪಾರಾಯಣ, ಗಾಯತ್ರೀಮಂತ್ರ ಜಪ, ಕಾಮಧೇನುಹೋಮ, ಶ್ರೀಕರಮಂತ್ರಜಪ, ಪವಮಾನ ಹೋಮಾದಿಗಳಿಂದ ಅರಿಷ್ಟಪರಿಹಾರ ಆಗುವುದು. ಹಸ್ತದಲ್ಲಿ ಹೆಬ್ಬೆರಳಿನ ಕೆಳಭಾಗದಲ್ಲಿ ಶುಕ್ರಪರ್ವವಿದೆ. ವಜ್ರಧಾರಣೆಯಿಂದ ಅರಿಷ್ಟ ನಿರಸನವಾಗುತ್ತದೆ. ★

---

(....30ನೇ ಪುಟದಿಂದ)

ಸಜ್ಜನರ ಸುಧೆಯಾದ 'ಅನುವ್ಯಾಖ್ಯಾನ' ವನ್ನು ರಚಿಸಿದರು. ಇದು ದುರ್ವಾದಿಗಳ ದುರಭಿಮಾನದ ಬೆಟ್ಟಕ್ಕೆ ಇಂದ್ರನ ವಜ್ರಾಯುಧದಂತಿರುವ, ವಿಶೇಷವಾಗಿ ಮಾಯಾವಾದವೆಂಬ ಕತ್ತಲೆಗೆ ಮಿಂಚಿನಂತಿರುವ ಕೃತಿ. ಈ ಕೃತಿಯ ರಚನೆಯೂ ವಿಚಿತ್ರವೇ ಆಗಿತ್ತು. ಒಮ್ಮೆಲೆ ಈ ಕೃತಿಯನ್ನು ರಚಿಸಿ ಮುಗಿಸಬೇಕೆಂದು ನಿಶ್ಚಯಿಸಿದ ಆಚಾರ್ಯರು ನಾಲ್ಕು ಮಂದಿ ಶಿಷ್ಯರಿಂದ ಅನುವ್ಯಾಖ್ಯಾನದ ನಾಲ್ಕು ಅಧ್ಯಾಯಗಳನ್ನು ಒಮ್ಮೆಲೆ ಅನಾಯಾಸವಾಗಿ ಹೇಳಿ ಬರೆಸಿ ಮುಗಿಸಿದರು. ಆಚಾರ್ಯರ ಚತುರತೆಗೆ ಇದಕ್ಕಿಂತ ಹಿರಿದಾದ ದೃಷ್ಟಾಂತ ಬೇಕೇನು? ಇಷ್ಟಲ್ಲದೆ ತಾನು ರಚಿಸಿದ ಅನುವ್ಯಾಖ್ಯಾನದಲ್ಲಿರುವ ತರ್ಕಗಳನ್ನು ವಿವರಿಸುವ 'ನ್ಯಾಯವಿವರಣ'ವೆಂಬ ಗ್ರಂಥವನ್ನು ರಚಿಸಿದರು. ವಿದ್ವಾಂಸರೂ ಅರ್ಥೈಸಿಕೊಳ್ಳಲು ಹೆಣಗಬೇಕಾದ ಕೃತಿಯಿದು.

**(ಸಶೇಷ)**

ಪ್ರಶ್ನೋತ್ತರ–ಪದಬಂಧ

# ನೆನಪಿನ ಅಂಗಳ

–ವಿ॥ ಶಂಕರನಾರಾಯಣಾಚಾರ್ಯ

1) ಇಂದ್ರನ ರಥದ ಸಾರಥಿ ಯಾರು?

2) ಸೂರ್ಯನ ಮಗ ಯಾರು?

3) ನರಕಾಸುರನ ಮಗ ಯಾರು?

4) 'ಸುಂದರ ಪುರುಷರು' ಎಂದು ಪ್ರಸಿದ್ಧರಾದ ಮೂವರು ಪುರಾಣ ಪುರುಷರಾರು?

5) ಇಂದ್ರನ ದಿಕ್ಕು ಯಾವುದು?

6) ಜಲಾಧಿಪತಿ ಯಾರು?

7) ದೇವೇಂದ್ರನ ವಾಹನ ಯಾವುದು?

8) 'ಪ್ರಾಣಾಧಿಪತಿ' ಯಾರು?

9) ಇಂದ್ರನು ವಾಸ ಮಾಡುವ ನಗರ ಯಾವುದು?

10) ಗೀತೋಪದೇಶ ಮಾಡಿದ ದಿನ ಯಾವುದು?

## ಉತ್ತರಗಳು

1) ಹಲ್ಲಿ 2) ಕೋಪಗೊಂಡಾಗ 3) ಇಲ್ಲ 4) 8 5) 6

6) ನಾರದರು 7) ಸಂಕೃತಿ 8) ಪೂರು 9) ಮಾಂಧಾತಾ 10) ಅರ್ಜುನ

| | | | | | | |
|---|---|---|---|---|---|---|
| 1 ಕ | 2 ಲ | ಶ | | 3 ಗ | ರು | 4 ಡ |
| ಲ | ವ | | 5 ನ | ಗ | | ಮ |
| ರ | | 6 ರ | | 7 ನ | 8 ಜ | ರು |
| 9 ವ | ರು | ಣ | ನ | ಸ | ಲ | ಗ |
| | | ಧೀ | | ಖಿ | | |
| 10 ಭ್ರ | 11 ಮ | ರ | | | 12 ಪಾ | 13 ಯ |
| | ಗ | | 14 ರ | ಜ | ನೀ | ಶ |

### ಎಡದಿಂದ ಬಲಕ್ಕೆ:

1) ಮಂದಿಯಿರುವ ಸ್ಥಾನ (4)
3) ದೇಹಕ್ಕೆ ಬೇಕಾದ ಶಕ್ತಿ (2)
4) ಬೆಳಗ್ಗಿನ 'ಹೊತ್ತು' (2)
5) ಸಂಚು ಮಾಡಿ ಚಿಕ್ಕದಾದದ್ದು (3)
6) ಸಮೂಹದೊಡೆಯ (3)
8) ಕಾರದೊಂದಿಗೆ 'ಯ' ಕೂಡಿದರೆ (3)
13) ವೃಕ್ಷದ ಮೊದಲು ಇದು ಬೇಕು (2)
14) ದಯೆಯ ಪೂರ (7)




ಉತ್ತರ ಮುಂದಿನ ಸಂಚಿಕೆಯಲ್ಲಿ

### ಮೇಲಿನಿಂದ ಕೆಳಕ್ಕೆ:

1) ಜರೆಯಿಂದ ಒಂದಾದ ರಾಕ್ಷಸ (4)
2) ಪರಿಪರಿಯಾಗಿ ಮಾಡಿಕೊಂಡ ಗುರುತು (4)
3) ಸಂಸಾರದ ಕಷ್ಟ ದೀರ್ಘವಾಗಿದೆ (3)
4) ಏಕಾದಶೀ ಉಪವಾಸದೊಂದಿಗೆ ಇದೂ ಬೇಕು
7) ಬಾಣದ ಗೂಡು
9) ಬಂದದ್ದು ಹಡಗು ನಿಲ್ದಾಣಕ್ಕೆ (3)
10) ಸಂಸ್ಕೃತದ ಕಾಗೆ (2)
11) ಇದನ್ನು ಮೀಟಲು ತಂತಿ ಬೇಕು (2)
12) ಕಾಯಕ್ಕಾದ ನೋವು (2)
13) ಸಾಕು! ಬಾಯಿಗೆ ಇದು ಹಾಕು! (2)

**ಕಾಳಿಯ ಮರ್ದನನೆಡೆಗೆ ಸಾಗಿದ**

**ಶ್ರೀ ಶ್ರೀ ವಿಬುಧೇಶ ತೀರ್ಥರಿಗೆ ಚರಮಾಂಜಲಿ**

★ ಅದಮಾರು ಮಠದ ಯತಿಪರಂಪರೆಯಲ್ಲಿ ಮೂವತ್ತೆರಡನೆಯ ಯತಿಗಳಾಗಿ ಉಡುಪಿ ಶ್ರೀಕೃಷ್ಣಮುಖ್ಯಪ್ರಾಣರ ಸೇವೆಗೈದ....

★ ತಮ್ಮ ಪ್ರಥಮ ಪರ್ಯಾಯಾವಧಿಯಲ್ಲಿ ಉಡುಪಿ ಶ್ರೀಕೃಷ್ಣನಿಗೆ ರಜತ ರಥವನ್ನು ನಿರ್ಮಿಸಿಸಮರ್ಪಿಸಿರುವ.....

★ ತಮ್ಮ ಆಶ್ರಮಗುರುಗಳಾದ ಪಲಿಮಾರು ಮಠದ ಶ್ರೀರಘುಮಾನ್ಯತೀರ್ಥರು ಆರಂಭಿಸಿದ್ದ ಉಡುಪಿ ಸಂಸ್ಕೃತಮಹಾಪಾಠಶಾಲೆಯ ಬೃಹತ್ ಕಟ್ಟಡವನ್ನು ಪೂರ್ಣಗೊಳಿಸಿರುವ....

★ ಶ್ರೀ ಶ್ರೀ ವಿಶ್ವಪ್ರಿಯತೀರ್ಥರಿಗೆ ಆಶ್ರಮಕೊಟ್ಟು ತಮ್ಮ ಉತ್ತರಾಧಿಕಾರಿಯನ್ನಾಗಿ ನಿಯೋಜಿಸಿ, ಅವರ ಮೂಲಕ ಎರಡು ಶ್ರೀಕೃಷ್ಣಪೂಜಾಪರ್ಯಾಯಗಳನ್ನು ಯಶಸ್ವಿಯಾಗಿ ನೆರವೇರಿಸಿದ.

★ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರಿಗೆ ಪಲಿಮಾರು ಮಠಾಧಿಪತ್ಯವನ್ನು ದೊರಕಿಸುವಲ್ಲಿ ತುಂಬ ಶ್ರಮಿಸಿದ್ದ....

★ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಕುಲಪತಿತ್ವದಲ್ಲಿ ಅದಮಾರು ಗ್ರಾಮದ ಅದಮಾರು ಮಠದಲ್ಲಿ ಆದರ್ಶಗುರುಕುಲ ಹತ್ತು ವರ್ಷ ಕಾಲ ನಡೆದು ಆ ಅವಧಿಯಲ್ಲಿ ನಾಲ್ಕು ಪೀಠಾಧಿಪತಿಗಳ ಹಾಗೂ ಅನೇಕ ಇತರ ವಿದ್ಯಾರ್ಥಿಗಳ ವಿದ್ಯಾಭ್ಯಾಸ ನಡೆಯುವುದಕ್ಕೆ ಪರಿಪೂರ್ಣ ಆಶ್ರಯವನ್ನು ನೀಡಿದ್ದ...

★ **“ಶ್ರೀ ಅದಮಾರು ಮಠ ಎಜುಕೇಶನ್ ಕೌನ್ಸಿಲ್”** ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ರಾಜ್ಯದ ಬೇರೆ ಬೇರೆ ಕಡೆ ಸುಮಾರು ಇಪ್ಪತ್ತೈದಕ್ಕೂ ಅಧಿಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ನಡೆಸುತ್ತಿದ್ದ....

ಶ್ರೀ ಶ್ರೀ ವಿಬುಧೇಶತೀರ್ಥರು ತಮ್ಮ ಈ ಸಾಧನಾಶರೀರದ ಸಾಧನೆಗಳನ್ನು ಪೂರೈಸಿ ತಮ್ಮ ಆರಾಧ್ಯ ಕಾಳಿಯಮರ್ದನ ಶ್ರೀಕೃಷ್ಣನೆಡೆಗೆ ಸಾಗಿದ ಶ್ರೀಪಾದರ ಅಂತರ್ಯಾಮಿಗೆ ‘ಸರ್ವಮೂಲ’ ದ ಚರಮಾಂಜಲಿ–

**‘ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ’**